ಜಂಬೂಸವಾರಿಗೆ ತಯಾರಿ



ಜಂಬೂಸವಾರಿ ಸಲುವಾಗಿ ಮೈಸೂರು ಅರಮನೆಯಲ್ಲಿ ಬೀಡುಬಿಟ್ಟಿರುವ ಆನೆಯೊಂದಕ್ಕೆ ಸೋಮವಾರ ಮಾವುತರು ಸ್ನಾನ ಮಾಡಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..



ಸೆನ್ಸೆಕ್ಸ್ 80,364 | ನಿಫ್ಟಿ 24,634 | $/₹ 88.75 | ಚಿನ್ನ (Std. 10g) ₹1,19,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,53,400 (ಬೆಂಗಳೂರು)

3 ವರ್ಷ ವಯೋಮಿತಿ ಸಡಿಲಿಕೆ

ಇದೇ 29ರಿಂದ 2027ರ ಡಿಸೆಂಬರ್ 31 ರವರೆಗಿನ ನೇಮಕಾತಿಗಳಿಗೆ ಅನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ನಾಗರಿಕ ಸೇವಾ ಹುದ್ದೆಗಳ ನೇಮಕಾತಿಯಲ್ಲಿ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ ಮೂರು ವರ್ಷಗಳ ಸಡಿಲಿಕೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಒಂದು ಬಾರಿಯ ಕ್ರಮವಾಗಿ ಈ ಸಡಿಲಿಕೆ ಮಾಡಲಾಗಿದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ಗರಿಷ್ಠ ವಯೋಮಿತಿ ಸಡಿಲಿಸಬೇಕು ಎಂದು ಆಗ್ರಹಿಸಿ ಧಾರವಾಡ ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಇತ್ತೀಚೆಗೆ ಬೃಹತ್ ಪ್ರತಿಭಟನೆಗಳು ನಡೆದಿದ್ದವು.

ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಆಗುವವರೆಗೂ ನಾಗರಿಕ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಅಥವಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆ ಹೊರಡಿಸಬಾರದು ಎಂದು ಎಲ್ಲ ನೇಮಕಾತಿ ಪ್ರಾಧಿಕಾರ-ಗಳಿಗೆ ಸರ್ಕಾರ ಸೂಚಿಸಿತ್ತು.

ನೇರ ನೇಮಕ

ಹಲವು ಜನಪ್ರತಿನಿಧಿಗಳು ಮತ್ತು ಸಂಘ–ಸಂಸ್ಥೆಗಳು ಮನವಿ ಸಲ್ಲಿಸಿ, ನಾಗರಿಕ ಸೇವೆಗಳ ನೇರ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯಲ್ಲಿ 5 ವರ್ಷ ಸಡಿಲಿಕೆ ನೀಡಬೇಕು ಎಂದು ಕೋರಿದ್ದರು.

ಈ ಮನವಿಗಳನ್ನು ಆಧರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯ ಮೇರೆಗೆ ನೇಮಕಾತಿ ಸಂಬಂಧ ಇದೇ 6ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ. ಹೊಸ ಆದೇಶ ಹೊರಡಿಸಿದ ಇದೇ 29ರಿಂದ 2027ರ ಡಿಸೆಂಬರ್ 31ರವರೆಗೆ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸುವ ಅಧಿಸೂಚನೆಗಳ ಅನ್ವಯ ಆಯ್ಕೆ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಗರಿಷ್ಠ ಮಿತಿ 3 ವರ್ಷ ಸಡಿಲಿಕೆ ಮಾಡಲಾಗಿದೆ ಎಂದು ಆದೇಶ ಹೇಳಿದೆ.

ಒಳಮೀಸಲಾತಿ ಪ್ರಮಾಣ: ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗದ ವರದಿಯನ್ನು ಅಗತ್ಯ ಮಾರ್ಪಾಡುಗಳೊಂದಿಗೆ ಅಂಗೀಕರಿಸಲಾಗಿದೆ. ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳನ್ನು 5 ಪ್ರವರ್ಗಗಳ ಬದಲಾಗಿ, ಪ್ರವರ್ಗ–ಎ, ಪ್ರವರ್ಗ–ಬಿ ಮತ್ತು ಪ್ರವರ್ಗ–ಸಿ ಎಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಈಗ ಜಾರಿಯಲ್ಲಿರುವ ಶೇ 17ರಷ್ಟು ಮೀಸಲಾತಿಯನ್ನು ಪ್ರವರ್ಗ–ಎ ರಲ್ಲಿನ ಸಮುದಾಯಗಳಿಗೆ ಶೇ 6, ಪ್ರವರ್ಗ–ಬಿ ರಲ್ಲಿನ ಸಮುದಾಯಗಳಿಗೆ ಶೇ 6 ಮತ್ತು ಪ್ರವರ್ಗ–ಸಿ ಅಡಿ ಬರುವ ಸಮುದಾಯಗಳಿಗೆ ಶೇ 5 ಮೀಸಲಾತಿ ನಿಗದಿಪಡಿಸಲಾಗಿದೆ ಎಂದು ಆದೇಶ ವಿವರಿಸಿದೆ.

ಅತಿಥಿ ಉಪನ್ಯಾಸಕರ ನೇಮಕಕ್ಕೆ ಅಸ್ತು



ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2024–25ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ್ದ ಅತಿಥಿ ಉಪನ್ಯಾಸಕರನ್ನೇ ಮುಂದುವರಿಸಿ, 2025–26ನೇ ಸಾಲಿನ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಕಾನೂನು ಇಲಾಖೆ ಅಭಿಪ್ರಾಯದಂತೆ, ಇದೇ ಸೆ.9ರಂದು ಹೈಕೋರ್ಟ್ ನೀಡಿದ ಮಧ್ಯಂತರ ಆದೇಶದ ಅವಲೋಕನಕ್ಕೆ ಒಳಪಟ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿ ಗಮನದಲ್ಲಿ ಇಟ್ಟುಕೊಂಡು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕೆಲಸ ಮಾಡಿದ ಎಲ್ಲ ಅತಿಥಿ ಉಪನ್ಯಾಸಕರನ್ನು ಕಾರ್ಯಭಾರಕ್ಕೆ ಅನುಗುಣವಾಗಿ ಮುಂದುವರಿಸಬೇಕು.

ಮುಂದುವರಿಕೆ ನಂತರವೂ ಕಾರ್ಯಭಾರವಿದ್ದರೆ ಪ್ರಸ್ತುತ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಯುಜಿಸಿ ವಿದ್ಯಾರ್ಹತೆ ಇರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಜಮೀನಿನ ಸ್ಥಿತಿಗತಿ ಮಾಹಿತಿಯ ಡ್ಯಾಶ್ ಬೋರ್ಡ್ : ಸಚಿವ

ಪಾರದರ್ಶಕತೆಗಾಗಿ ಏಕೀಕೃತ ಭೂಸ್ವಾಧೀನ ವ್ಯವಸ್ಥೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ನ್ಯಾಯ ಒದಗಿಸುವುದಕ್ಕಾಗಿ 'ಏಕೀಕೃತ ಭೂಸ್ವಾಧೀನ ವ್ಯವಸ್ಥೆ'ಗೆ (ಯುಎಲ್ಎಂಎಸ್) ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸೋಮವಾರ ಚಾಲನೆ ನೀಡಿದರು.

ಕಂದಾಯ ಇಲಾಖೆಯ ಭೂಮಿ ತಂತ್ರಾಂಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಇ–ಸ್ವತ್ತು, ನಗರಾಭಿವೃದ್ಧಿ ಇಲಾಖೆಯ ಇ–ಆಸ್ತಿ ತಂತ್ರಾಂಶ, ಯುಎಲ್ಎಂಎಸ್ ಇ–ಖಾತಾ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ 2.0 ತಂತ್ರಾಂಶ ಮತ್ತು ಕೆಜಿಐಎಸ್‌ನಂತಹ ಎಲ್ಲಾ ತಂತ್ರಾಂಶಗಳನ್ನು ಒಳಗೊಂಡ ವ್ಯವಸ್ಥೆಯಾಗಿದೆ.



ಏಕೀಕೃತ ಭೂಸ್ವಾಧೀನ ವ್ಯವಸ್ಥೆಯು ಆಡಳಿತದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಭೂಮಾಲೀಕರು ಮತ್ತು ಬಾಧಿತ ಕುಟುಂಬಗಳಿಗೆ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಖಚಿತ ಪಡಿಸುತ್ತದೆ

ಕೃಷ್ಣಬೈರೇಗೌಡ, ಕಂದಾಯ ಸಚಿವ



ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವ ಕೃಷ್ಣಬೈರೇಗೌಡ, 'ಈ ವ್ಯವಸ್ಥೆಯು ನೈಜ ದತ್ತಾಂಶವನ್ನು ಒದಗಿಸುತ್ತದೆ. ಅಲ್ಲದೇ, ಆರ್ಥಿಕ ಇಲಾಖೆಯ ಖಜಾನೆ–2 ತಂತ್ರಾಂಶದೊಂದಿಗೆ ಜೋಡಣೆ ಮಾಡಲಾಗಿದೆ. ಸಮಗ್ರ ಭೂಸ್ವಾಧೀನ ವ್ಯವಸ್ಥೆಯು ರಾಜ್ಯದಾದ್ಯಂತ ಭೂಸ್ವಾಧೀನ ಪ್ರಕ್ರಿಯೆಯನ್ನು ಸಮನ್ವಯಗೊಳಿಸುತ್ತದೆ. ಅಲ್ಲದೇ, ಈಗ ಕೈಗೊಳ್ಳಲಾಗುತ್ತಿರುವ ಭೂಸ್ವಾಧೀನ ಪ್ರಕ್ರಿಯೆ ಮತ್ತು ಹಿಂದೆ ನಡೆಸಿದ ಭೂಸ್ವಾಧೀನ ಪ್ರಕರಣಗಳಲ್ಲಿನ ಮೊಕದ್ದಮೆಗಳನ್ನು ಗುರುತಿಸುವ ಸಮಗ್ರ ಡಿಜಿಟಲ್ ವೇದಿಕೆಯೂ ಇದಾಗಿದೆ' ಎಂದರು.

ಕಂದಾಯ, ಜಲಸಂಪನ್ಮೂಲ, ನಗರಾಭಿವೃದ್ಧಿ, ಲೋಕೋಪಯೋಗಿ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕೆಶಿಪ್, ಕೆ–ರೈಡ್, ಮೆಟ್ರೊ, ಕೆಐಎಡಿಬಿ ಮತ್ತಿತರ ಸಂಸ್ಥೆಗಳು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. ಇವುಗಳ ಭೂಸ್ವಾಧೀನದ ಸಂಪೂರ್ಣ ಮಾಹಿತಿಯು ಈ ವ್ಯವಸ್ಥೆಯಲ್ಲಿ ಸಿಗುತ್ತದೆ. ಭೂಸ್ವಾಧೀನದ ಎಲ್ಲಾ ಪ್ರಸ್ತಾವಗಳು, ಅದರ ಸ್ಥಿತಿಗತಿಯ ಬಗ್ಗೆ ನೈಜ ಸಮಯದ ಮಾಹಿತಿಯನ್ನು ಪಾಲುದಾರರು ಮತ್ತು ತೀರ್ಮಾನ ತೆಗೆದುಕೊಳ್ಳುವ ಸಂಸ್ಥೆಗಳಿಗೆ ಕ್ರೋಡೀಕೃತ ಡ್ಯಾಶ್ ಬೋರ್ಡ್ ಮೂಲಕ ಒದಗಿಸಲಾಗುತ್ತದೆ ಎಂದು ಅವರು ವಿವರಿಸಿದರು.

ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಐ–ತೀರ್ಪು ರಚನೆ, ಪರಿಹಾರ ವಿತರಣೆ ಮತ್ತು ಪುನರ್ವಸತಿ ವರೆಗಿನ ಸಂಪೂರ್ಣ ಪ್ರಕ್ರಿಯೆ ನಿರ್ವಹಿಸಲು ಈ ವ್ಯವಸ್ಥೆ ಏಕಮಾತ್ರ ಡಿಜಿಟಲ್ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಕೃಷ್ಣಬೈರೇಗೌಡ ಹೇಳಿದರು.

ರಾಜ್ಯದ ಎಲ್ಲ ಜಿಲ್ಲೆಗಳು ಮತ್ತು ಅಗತ್ಯವಿರುವ ಭೂಸ್ವಾಧೀನ ಸಂಸ್ಥೆಗಳು ಹಂತ ಹಂತವಾಗಿ ಈ ತಂತ್ರಾಂಶವನ್ನು ಅಳವಡಿಸಿಕೊಳ್ಳುತ್ತವೆ. ಈ ತಂತ್ರಾಂಶವು ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆಯ ಪ್ರಮಾಣೀಕೃತ ಮತ್ತು ಕಾನೂನುಬದ್ಧ ಅನುಸರಣಾ ವಿಧಾನವನ್ನು ಖಚಿತಪಡಿಸುತ್ತದೆ ಎಂದರು.

ಮುಖ್ಯಾಂಶಗಳು

- ನೈಜ ದತ್ತಾಂಶ ಒದಗಿಸಲಿದೆ ಈ ವ್ಯವಸ್ಥೆ
- ಏಕಮಾತ್ರ ಡಿಜಿಟಲ್ ವೇದಿಕೆಯಾಗಿ ಕಾರ್ಯನಿರ್ವಹಣೆ

ಲಡಾಖ್‌ಗೆ ರಾಜ್ಯ ಸ್ಥಾನಮಾನಕ್ಕಾಗಿ ಆಗ್ರಹ • ವಾಂಗ್ಚುಕ್ ಬಿಡುಗಡೆಗೆ ಒತ್ತಾಯ

ಮಾತುಕತೆ: ಹಿಂದೆ ಸರಿದ ಎಬಿಎಲ್

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಸಂಘಟನೆಗಳು ತಮ್ಮ ನಿಲುವನ್ನು ಇನ್ನಷ್ಟು ಬಿಗಿಗೊಳಿಸಿವೆ. ಲೇಹ್ ಅಪೆಕ್ಸ್ ಬಾಡಿ (ಎಬಿಎಲ್) ಸಂಘಟನೆಯು ಕೇಂದ್ರ ಗೃಹ ಸಚಿವಾಲಯದ ಜತೆಗಿನ ಮಾತುಕತೆಯಿಂದ ಹಿಂದೆ ಸರಿದಿದೆ.

ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟ (ಕೆಡಿಎ) ಒತ್ತಾಯಿಸಿದೆ.

ಪ್ರಜಾಸತ್ತಾತ್ಮಕವಾಗಿ ನಡೆಸುತ್ತಿರುವ ಚಳವಳಿಯನ್ನು ಅಪರಾಧ ಎಂಬಂತೆ ಬಿಂಬಿಸುತ್ತಿರುವ ಕಾರಣ ಮಾತುಕತೆ ನಡೆಸಲು ಸಾಧ್ಯವಿಲ್ಲ ಎಂದು ಎಬಿಎಲ್ ಸೋಮವಾರ ಹೇಳಿದೆ. ಅಕ್ಟೋಬರ್ 6ರಂದು ನವದೆಹಲಿಯಲ್ಲಿ ನಿಗದಿಪಡಿಸಿದ್ದ ಮಾತುಕತೆಯಿಂದ ಹಿಂದೆ ಸರಿದಿರುವುದಕ್ಕೆ ಮೂರು ಕಾರಣಗಳನ್ನು ನೀಡಿದೆ.

'ವಾಂಗ್ಚುಕ್ ಅವರ ಬಂಧನ, ಪ್ರತಿಭಟನೆಯನ್ನು 'ರಾಷ್ಟ್ರ ವಿರೋಧಿ' ಎಂದು ಕರೆದಿರುವುದು ಹಾಗೂ ಲೇಹ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಪೊಲೀಸರ ಗುಂಡಿನ ನಾಲ್ವರು ಬಲಿಯಾಗಿರುವುದನ್ನು ಖಂಡಿಸಿ ಮಾತುಕತೆಯಿಂದ ಹಿಂದೆ ಸರಿಯುತ್ತಿದ್ದೇವೆ' ಎಂದು ಹೇಳಿದೆ.

'ಶಾಂತಿಯುತ ಬೇಡಿಕೆಗಳಿಗೆ ಜೈಲು ಮತ್ತು ಗುಂಡುಗಳಿಂದ ಪ್ರತಿಕ್ರಿಯಿಸುವ ಮೂಲಕ ಕೇಂದ್ರವು ಲಡಾಖ್‌ನ ಜನರ ನಂಬಿಕೆಗೆ ದ್ರೋಹ ಬಗೆದಿದೆ' ಎಂದು ಎಬಿಎಲ್ ನಾಯಕರೊಬ್ಬರು ಹೇಳಿದ್ದಾರೆ.

ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆ ಕಳೆದ ಬುಧವಾರ ಹಿಂಸಾಚಾರಕ್ಕೆ ತಿರುಗಿತ್ತು. ಪೊಲೀಸರ ಗುಂಡಿಗೆ ನಾಲ್ವರು ಮೃತಪಟ್ಟಿದ್ದರು. ಹಿಂಸಾಚಾರದಲ್ಲಿ 80ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ವಾಗ್ಚುಕ್ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದರು.

'ಮಾತುಕತೆಗೆ ಸದಾ ಸಿದ್ಧ'

ನವದೆಹಲಿ: ಲೇಹ್ ಅಪೆಕ್ಸ್ ಬಾಡಿ (ಎಬಿಎಲ್) ಮತ್ತು ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟದ (ಕೆಡಿಎ) ಜತೆ ಲಡಾಖ್‌ಗೆ ಸಂಬಂಧಿಸಿದ ವಿಷಯಗಳ ಕುರಿತು ಮಾತುಕತೆಗೆ ಯಾವುದೇ ಸಮಯದಲ್ಲೂ ಸಿದ್ಧರಿದ್ದೇವೆ ಎಂದು ಕೇಂದ್ರ ಗೃಹ ಸಚಿವಾಲಯ ಸೋಮವಾರ ಹೇಳಿದೆ.

ಮಾತುಕತೆಯಿಂದ ಹಿಂದೆ ಸರಿಯಲು ಎಬಿಎಲ್ ನಿರ್ಧರಿಸಿರುವುದರ ಬೆನ್ನಲ್ಲೇ ಸಚಿವಾಲಯ ಈ ಹೇಳಿಕೆ ನೀಡಿದೆ. ನಿರಂತರ ಮಾತುಕತೆಯು ಮುಂದಿನ ದಿನಗಳಲ್ಲಿ ಅಪೇಕ್ಷಿತ ಫಲಿತಾಂಶವನ್ನು ನೀಡಬಹುದು ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದೆ. 'ಲಡಾಖ್‌ಗೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿ ಅಥವಾ ಇತರ ವೇದಿಕೆಗಳ ಮೂಲಕ ಎಬಿಎಲ್ ಮತ್ತು ಕೆಡಿಎ ಜತೆ ಮಾತುಕತೆಗೆ ಕೇಂದ್ರ ಸರ್ಕಾರ ಸದಾ ಸಿದ್ಧವಿದೆ' ಎಂದು ಪ್ರಕಟಣೆ ತಿಳಿಸಿದೆ.

ಐಸಿಸಿ ಪ್ರಶಸ್ತಿ ಭಾರತದ ಕಣ್ಣು

ಗುವಾಹಟಿ (ಪಿಟಿಐ): ಉತ್ತಮ ಲಯದಲ್ಲಿರುವುದರಿಂದ ಭಾರತ ತಂಡ, ಇದೇ ಮೊದಲ ಬಾರಿ ಮಹಿಳೆಯರ ಐಸಿಸಿ ಏಕದಿನ ಕ್ರಿಕೆಟ್ ವಿಶ್ವಕಪ್ ಗೆಲ್ಲುವ ವಿಶ್ವಾಸದಲ್ಲಿದೆ. ಆತಿಥೇಯರು ಮಂಗಳವಾರ ಬರಸಾಪಾರಾ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

▶18

ಮೇಲ್ಮನವಿ ಸಲ್ಲಿಸಲಿರುವ 'ಎಕ್ಸ್'

ನವದೆಹಲಿ (ಪಿಟಿಐ): ದೇಶದಲ್ಲಿನ ಸಾಮಾಜಿಕ ಜಾಲತಾಣಗಳ ನಿಯಂತ್ರಣದ ಕುರಿತು ತನ್ನ ಸೂಚನೆಗಳನ್ನು ಪಾಲಿಸುವಂತೆ ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಇಲಾನ್ ಮಸ್ಕ್ ಒಡೆತನದ 'ಎಕ್ಸ್' ನಿರ್ಧರಿಸಿದೆ.




ಇಲಾನ್ ಮಸ್ಕ್

'ವಿಷಯ ತೆಗೆದುಹಾಕಲು ಪೊಲೀಸರು ಹೊರಡಿಸಿದ ಆದೇಶಗಳಿಂದ ಭಾರತದ ಪೌರರಿಗೆ ಸಾಂವಿಧಾನಿಕವಾಗಿ ನೀಡಿದ ಹಕ್ಕು, ವಾಕ್ ಸ್ವಾತಂತ್ರ್ಯದ ಉಲ್ಲಂಘನೆಯಾಗಿದೆ. 'ಎಕ್ಸ್' ಸಂಸ್ಥೆಯು ಭಾರತದ ಕಾನೂನನ್ನು ಗೌರವಿಸುತ್ತದೆ. ಆದರೆ, ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು' ಎಂದು ಸೋಮವಾರ ತಿಳಿಸಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 79(3) (ಬಿ) ಅಡಿಯಲ್ಲಿ ಸಹಯೋಗ್ ಪೋರ್ಟಲ್ ಪ್ರಾರಂಭಿಸಿದ್ದ ಕೇಂದ್ರ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದ 'ಎಕ್ಸ್'ನ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿತ್ತು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ



ದಿನಾಂಕ: 22.09.2025 ರಿಂದ 07.10.2025 ರವರೆಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ, ಶೈಕ್ಷಣಿಕ (ಜಾತಿ ಸಮೀಕ್ಷೆ) ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಬಗ್ಗೆ ಮನೆ–ಮನೆಗೆ ಭೇಟಿ ನೀಡಿ ಪ್ರತಿ ಕುಟುಂಬ ಸದಸ್ಯರ ಗಣತಿ ಕಾರ್ಯವನ್ನು ಕೈಗೊಂಡಿರುತ್ತದೆ.

ಇತ್ತೀಚಿಗೆ ನ್ಯಾಯಮೂರ್ತಿ ನಾಗಮೋಹನ್ ದಾಸ್‌ರವರ ಆಯೋಗ ನಡೆಸಿದ ಜಾತಿ ಗಣತಿಯಲ್ಲಿ ಅನೇಕಾನೇಕ ಲೋಪಗಳು, ರಾಜಕೀಯ ಸಂಚುಗಳು, ಪಿತೂರಿಗಳು ನಡೆದು ಬಲಗೈಗೆ ಸಂಬಂಧಿಸಿದ ಜಾತಿಗಳ ಜನಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಹಾಗೂ ಈ ಜಾತಿಯವರನ್ನು ಬಲಹೀನರಾಗಿ ಮಾಡಿ, ಸರ್ಕಾರದ ಸೌಲಭ್ಯಗಳು ನೇರವಾಗಿ ಸಿಗದಂತೆ ಮಾಡಲು ರಾಜಕೀಯವಾಗಿ ಎರಡನೇ ಸ್ಥಾನಕ್ಕೆ ದೂಡಿರುತ್ತಾರೆ. ಅಲ್ಲದೆ ಬಲಗೈ ಸಮುದಾಯದ ಜನರು ಸಹ ಸಕ್ರಿಯವಾಗಿ ಜಾತಿ ಗಣತಿಯಲ್ಲಿ ಭಾಗಿಯಾಗಿ, ತಮ್ಮ ಜಾತಿಯನ್ನು ಗಣತಿಯಲ್ಲಿ ದಾಖಲಿಸದೇ ಇರುವುದು ಕಾರಣವಾಗಿದೆ. ಇದರಿಂದ ಮಕ್ಕಳ ಹಾಗೂ ಮುಂದಿನ ಪೀಳಿಗೆಯವರಿಗೆ ನಾಗಮೋಹನ್ ದಾಸ್‌ರವರ ವರದಿ ಆಧಾರಿತ ಆದೇಶಗಳು ಮರಣ ಶಾಸನವಾಗಿದೆ.

ಪುಸ್ತುತ ನಡೆಯುತ್ತಿರುವ ಹಿಂದುಳಿದ ವರ್ಗಗಳ ಸಮೀಕ್ಷೆಯಲ್ಲಿ ಈ ತಪ್ಪುಗಳು ಪುನರಾವರ್ತನೆ ಆಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ಈಗ ನಡೆಯುವ ಸಮೀಕ್ಷೆಯಲ್ಲಿ ಗಣತಿದಾರರು ಮನೆ–ಮನೆಗೆ ಭೇಟಿ ನೀಡಿ ಮಾಹಿತಿಗಳನ್ನು ದಾಖಲಿಸುವ ಸಂದರ್ಭದಲ್ಲಿ ಧರ್ಮ ಮತ್ತು ಜಾತಿಗಳನ್ನು ದಾಖಲಿಸುವುದು.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನಸಂಖ್ಯೆಯೇ ನಮ್ಮೆಲ್ಲರ ಭವಿಷ್ಯವನ್ನು ಬರೆಯುತ್ತದೆ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗವು ಜಾತಿಗಣತಿ ಮಾಡುವಾಗ, ನಮ್ಮ ಜಾತಿಯ ಬಹುಪಾಲು ಜನರು ತಮ್ಮ ಜಾತಿಯನ್ನು ಅನೇಕ ಕಾರಣಗಳಿಂದ ಅಂದರೆ ಜಾತಿ ಕಳಂಕ ಅಂಟಿಕೊಳ್ಳುತ್ತದೆ ಎಂದು, ತಾವು ಬದುಕುತ್ತಿರುವ ಸಮಾಜಕ್ಕೆ ಹೆದರಿ ಹೇಳಿಕೊಳ್ಳದೆ, ಜಾತಿಯನ್ನು ದಾಖಲಿಸದೆ ಮತ್ತು ಗಣತಿ ಕಾರ್ಯದಲ್ಲಿ ಭಾಗವಹಿಸದೆ ಹಿಂದೆ/ ದೂರ ಸರಿದಿರುವುದರಿಂದ ನಮ್ಮ ಜಾತಿಯ ಸುಮಾರು 20 ರಿಂದ 25 ಲಕ್ಷ ಜನಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ. ಈಗ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯುತ್ತಿರುವ ಜಾತಿ ಗಣತಿಯಲ್ಲಿ ಜನರ ವೈಯಕ್ತಿಕ ಮಾಹಿತಿಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬಾರದೆಂದು ಮತ್ತು ಗೌಪ್ಯವಾಗಿ ಇಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲವು ಆದೇಶ ನೀಡಿರುತ್ತದೆ. ಹಾಗಾಗಿ ನಿಮ್ಮ ವೈಯಕ್ತಿಕ ವಿವರಗಳು ಎಲ್ಲೂ ಸೋರಿಕೆ ಆಗುವುದಿಲ್ಲ. ದಿನಾಂಕ 28/09/2025 ರಂದು ಹಿಂದುಳಿದ ವರ್ಗಗಳ ಆಯೋಗವು ಜಾತಿ ಗಣತಿಯನ್ನು ತನ್ನ ಆನ್ ಲೈನ್ ವೆಬ್‌ಸೈಟ್‌ನಲ್ಲಿ ದಾಖಲಿಸಲು ಅನುವು ಮಾಡಿಕೊಟ್ಟಿರುತ್ತದೆ. ಅದರ ವೆಬ್‌ಸೈಟ್ ವಿಳಾಸ ಈ ಕೆಳಕಂಡಂತೆ ಇರುತ್ತದೆ.

https://kscbcselfdeclaration.karnataka.gov.in

ಎ) ಕಾಲಂ ನಂ. 8 ರಲ್ಲಿ ಧರ್ಮದ ಕಾಲಂ ಇರುತ್ತದೆ. ಬೌದ್ಧ ಧರ್ಮ ಎಂದು ಬರೆಸಲು ಇಚ್ಛಿಸುವವರು, ಸ್ವ–ಇಚ್ಛೆಯಿಂದ ಬೌದ್ಧ ಧರ್ಮ ಎಂದು ಬರೆಯಿಸಬಹುದು. ಉಳಿದವರು ತಾವು ಇಚ್ಛಿಸಿದ ಧರ್ಮವನ್ನು ಧರ್ಮದ ಕಾಲಂನಲ್ಲಿ ಬರೆಸಬಹುದು.

ಬಿ) ಈ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಉಪ–ಜಾತಿಯ ಕಾಲಂನ ಅವಕಾಶ ಇಲ್ಲದಿರುವುದರಿಂದ ಜಾತಿ ಕಾಲಂನಲ್ಲಿಯೇ ನೇರವಾಗಿ ನಿಮ್ಮ ಮೂಲ ಜಾತಿಯನ್ನು ನಮೂದಿಸುವುದು. ಜಾತಿ ಕಾಲಂ: 9ರಲ್ಲಿ ಸ್ಥಳೀಯವಾಗಿ ನಿಮ್ಮ ಜಾತಿಯನ್ನು ಏನೆಂದು ಕರೆಯುತ್ತಾರೋ ಅದನ್ನು ಬರೆಸುವುದು. ಉದಾಹರಣೆಗೆ : ಹೊಲೆಯ/ ಛಲವಾದಿ/ ಬಲಗೈ /ಮಹರ್/ಮಾಲ/ಪರಯ್ಯ /ಮುಂಡಾಲ/ಮುಕ್ರಿ/ ಹಸ್‌ಲಾರ್/ಆಡಿಯಾ/ಬ್ಯಾಗಾರ/ಬುಕುಡ/ಬೈರಾ/ಮೊಗೇರ್/ ಮೇಘ್ವಾಲ್/ರಾಣಿಯರ್/ಚನ್ನದಾಸರ, ಇತ್ಯಾದಿ.

ಸಿ) ಜಾತಿಯ ಕಾಲಂನಲ್ಲಿ ಬೌದ್ಧರು (Buddhist) ಅಥವಾ ನಿಯೋ ಬುದ್ದಿಸ್ಟ್ (Neo Buddhist) ಎಂದು ನಮೂದಿಸಬಾರದು. ಏಕೆಂದರೆ ಈ ರೀತಿ ಜಾತಿ ಕಾಲಂನಲ್ಲಿ ದಾಖಲಿಸುವವರನ್ನು ಹಿಂದುಳಿದ ವರ್ಗದ ಗುಂಪು–2ಎ ಗೆ ಸೇರಿಸಲಾಗುವುದು. ನಿಮಗೆ ಪರಿಶಿಷ್ಟ ಜಾತಿಯ ಸರ್ಟಿಫಿಕೇಟ್ ನೀಡಲಾಗುವುದಿಲ್ಲ. ನಿಮಗೆ ಪರಿಶಿಷ್ಟರಿಗೆ ದೊರೆಯುವ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ. ಎಚ್ಚರಿಕೆಯಿಂದ ಮಾಹಿತಿಯನ್ನು ದಾಖಲಿಸುವುದು.

ಡಿ) ಯಾವುದೇ ಕಾರಣಕ್ಕೂ ಈ ಸಮೀಕ್ಷೆಯಲ್ಲಿ ನಿಮ್ಮ ಜಾತಿಯನ್ನು ಆದಿ ಕರ್ನಾಟಕ/ಆದಿ ದ್ರಾವಿಡ/ಆದಿ ಆಂಧ್ರ ಎಂದು ದಾಖಲಿಸಬಾರದು. ಏಕೆಂದರೆ, ಇವುಗಳು ಮೂಲ ಜಾತಿಗಳಲ್ಲ. ಜಾತಿಗಳ ಗುಂಪುಗಳು.

ಇ) ರಾಜ್ಯದ ಬಲಗೈ ಸಂಬಂಧಿತ ಜಾತಿಯ ಪ್ರತಿಯೊಬ್ಬರು ಈ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವುದು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಿಮಗೆ ಹಾಗೂ ನಿಮ್ಮ ಮುಂದಿನ ಪೀಳಿಗೆಯವರಿಗೆ ಸರ್ಕಾರಿ ನೌಕರಿಗಳು ದೊರೆಯುವುದಿಲ್ಲ ಮತ್ತು ಗ್ರಾಮ ಪಂಚಾಯತ್/ತಾಲ್ಲೂಕು ಪಂಚಾಯತ್/ಜಿಲ್ಲಾ ಪಂಚಾಯತಿಗಳಲ್ಲಿ, MLA/MP ಸ್ಥಾನಗಳು ಹಾಗೂ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಡಿಮೆಯಾಗುತ್ತದೆ.

ಶ್ರೀ ಶ್ರೀ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಸಿದ್ದಯ್ಯ, ಐ.ಎ.ಎಸ್, (ನಿವೃತ್ತಿ)
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀಮತಿ ವಾಣಿ ಶಿವರಾಂ
ಸಂಚಾಲಕರು,
ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಸಂಪತ್ ರಾಜ್
ಮಾಜಿ ಮಹಾಪೌರರು, ಬಿ.ಬಿ.ಎಂ.ಪಿ.
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ಪರುಷೋತ್ತಮ್
ಮಾಜಿ ಮಹಾಪೌರರು, ಮೈಸೂರು
ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

ಶ್ರೀ ನಾಗೇಶ್ ರಾವ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಾ ಮಹಾಸಭ
ರಾಜ್ಯ ಸಂಚಾಲಕರು, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ

"ಯಾವುದೇ ಸಮಾಜವು ಜಾಗರೂಕ, ಸುಶಿಕ್ಷಿತ ಹಾಗೂ ಸ್ವಾಭಿಮಾನಿಯಾಗಿದ್ದರೆ ಮಾತ್ರ ಅದರ ಸಾಮರ್ಥ್ಯ ಹೆಚ್ಚಬಲ್ಲದು".

ಸಮೀಕ್ಷೆಯ ಸಹಾಯವಾಣಿ ಸಂಖ್ಯೆ: 0850770004

ನಿರ್ಮಾಣ ಹಂತದ ಕಟ್ಟಡ: ನೋಟಿಸ್

ನಾಡಪ್ರಭು ಕೆಂಪೇಗೌಡ ಬಡಾವಣೆ ವಿಸ್ತರಣೆ ಭಾಗವಾಗಿ ಬಿಡಿಎ ಕ್ರಮ

• ಕೆ.ಎಸ್.ಸುನಿಲ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ವಿಸ್ತರಣೆಗಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಗುರುತಿಸಿರುವ ಕೆಂಗೇರಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೋಟಿಸ್ ಜಾರಿ ಮಾಡಿದೆ.

'ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆಯನ್ನು ಇನ್ನೂ ಹೊರಡಿಸಿಲ್ಲ. ಆದರೂ, ಈ ಗ್ರಾಮಗಳಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಅಧಿಕಾರಿಗಳು ಮುಂದಾಗಿದ್ದಾರೆ' ಎಂದು ಆಸ್ತಿ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೆಂಪೇಗೌಡ ಬಡಾವಣೆಯ ಎರಡನೇ ಹಂತಕ್ಕೆ ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಯ ನಡುವೆ ಹಾಗೂ ನೈಸ್ ರಸ್ತೆಯ ಹೊರಗಿನ 17 ಗ್ರಾಮಗಳ ವ್ಯಾಪ್ತಿಯಲ್ಲಿರುವ ಅಂದಾಜು 9 ಸಾವಿರ ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳುವುದಾಗಿ ಘೋಷಿಸಿದ ಬೆನ್ನಲ್ಲೇ ಪ್ರಾಧಿಕಾರ ಈ ಕ್ರಮ ಕೈಗೊಂಡಿದೆ.

ಪ್ರಾಧಿಕಾರದ ಎಂಜಿನಿಯರ್‌ಗಳು ಈ ಗ್ರಾಮಗಳಿಗೆ ನಿತ್ಯ ಭೇಟಿ ನೀಡಿ, ನಿರ್ಮಾಣ ಹಂತದಲ್ಲಿರುವ ಕಟ್ಟಡಗಳನ್ನು ಗುರುತಿಸಿ, ಸಂಬಂಧಪಟ್ಟ ಮಾಲೀಕರಿಗೆ ತಕ್ಷಣವೇ ಕೆಲಸ ನಿಲ್ಲಿಸುವಂತೆ ಸೂಚಿಸುತ್ತಿದ್ದಾರೆ. ಇಲ್ಲವಾದರೆ ಕಟ್ಟಡ ನೆಲಸಮ ಮಾಡಲಾಗುವುದು ಎಂದು ಎಚ್ಚರಿಕೆ ನೋಟಿಸ್ ನೀಡಿದ್ದಾರೆ.

ಮುಖ್ಯಾಂಶಗಳು
- ಗ್ರಾಮಗಳಿಗೆ ಎಂಜಿನಿಯರ್‌ಗಳ ಭೇಟಿ
- ನೋಟಿಸ್‌ಗೆ ಆಸ್ತಿ ಮಾಲೀಕರ ಆಕ್ಷೇಪ
- ಕೆಲಸ ನಿಲ್ಲಿಸಲು ಅಧಿಕಾರಿಗಳ ಸೂಚನೆ

ಈ ಸಂಬಂಧ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಕೋಲೂರು ಗ್ರಾಮದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ ಎಂದು ಆರೋಪಿಸಿ ನಾಡಪ್ರಭು ಕೆಂಪೇಗೌಡ ಬಡಾವಣೆಯ ನಂ. 4ನೇ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ಮಾಲೀಕರಿಗೆ ನೋಟಿಸ್ ನೀಡಿದ್ದಾರೆ.


'ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ ಅನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ಥಳೀಯ ಯೋಜನಾ ಪ್ರಾಧಿಕಾರವಾಗಿದೆ. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಬಡಾವಣೆ ಅಥವಾ ಕಟ್ಟಡ ಅಭಿವೃದ್ಧಿಪಡಿಸಬೇಕಾದಲ್ಲಿ ಬಿಡಿಎ ಪೂರ್ವಾನುಮೋದನೆ ಪಡೆಯುವುದು ಕಡ್ಡಾಯ. ಯಾವುದೇ ಉಲ್ಲಂಘನೆಯನ್ನು ಕಾನೂನು ಬಾಹಿರವೆಂದು ಪರಿಗಣಿಸುವುದಲ್ಲದೆ, ಕಾನೂನು ಪರಿಣಾಮಗಳನ್ನು ಸಹ ಎದುರಿಸಬೇಕಾಗುತ್ತದೆ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಪ್ರಾಧಿಕಾರದಿಂದ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ಪಡೆದಿರುವ ದಾಖಲಾತಿಗಳನ್ನು ಏಳು ದಿನದೊಳಗೆ ಸಲ್ಲಿಸುವಂತೆ ಆಸ್ತಿ ಮಾಲೀಕರಿಗೆ ಸೂಚಿಸಲಾಗಿದೆ. ಇಲ್ಲವಾದರೆ ನಿಯಮ ಉಲ್ಲಂಘನೆ ಕಾರಣಕ್ಕೆ ಕಟ್ಟಡ ನೆಲಸಮಗೊಳಿಸಲಾಗುವುದು. ಅಲ್ಲದೇ ಕಾನೂನು ಉಲ್ಲಂಘಿಸಿ ಬಡಾವಣೆ ನಿರ್ಮಿಸಿದವರ ವಿರುದ್ಧ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 73ರಂತೆ ಕ್ರಮ ಜರುಗಿಸಲಾಗುವುದು' ಎಂದು ಸ್ಪಷ್ಟಪಡಿಸಲಾಗಿದೆ.

'ಮಾಹಿತಿಯೇ ಇಲ್ಲ'

'ನಾಡಪ್ರಭು ಕೆಂಪೇಗೌಡ ಬಡಾವಣೆ ವಿಸ್ತರಣೆ ಯೋಜನೆಯ ಬಗ್ಗೆ ಮಾಹಿತಿಯೇ ಇಲ್ಲ. ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿಲ್ಲ. ಆದರೂ ನಿರ್ಮಾಣ ಹಂತದ ಕಟ್ಟಡಗಳಿಗೆ ನೋಟಿಸ್ ನೀಡಲಾಗುತ್ತಿದೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

'ನೋಟಿಸ್‌ನಿಂದಾಗಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಮತ್ತು ಹೊಸದಾಗಿ ನಿರ್ಮಿಸಿರುವ ಮನೆಗಳ ಮಾಲೀಕರು ಆತಂಕಗೊಂಡಿದ್ದಾರೆ' ಎಂದರು.



ಭಾರತ ಏಷ್ಯಾ ಕಪ್ 2025 ವಿಜೇತವಾಗಿದೆ!

ಅಲೆಮಾರಿಗಳಿಂದ ದೆಹಲಿ ಚಲೊ ಅ.2ಕ್ಕೆ

ಬೆಂಗಳೂರು: 'ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಖಂಡಿಸಿ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ದೆಹಲಿ ಚಲೊ ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟದ ಅಧ್ಯಕ್ಷ ಶೇಷಪ್ಪ ಅಂದೋಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದೆ. ಅಲೆಮಾರಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ರಾಜ್ಯ ಸರ್ಕಾರಕ್ಕೆ ಸೂಚಿಸಲು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೋರುತ್ತೇವೆ' ಎಂದು ಹೇಳಿದರು.

'ಹಿಂದಿನ ಎಲ್ಲ ಆಯೋಗಗಳು ಅಲೆಮಾರಿಗಳಿಗೆ ಶೇಕಡ 1ರಷ್ಟು ಮೀಸಲಿಟ್ಟಿದ್ದರು. ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗವೂ ಶೇ 1ರಷ್ಟು ಮೀಸಲಾತಿ ನೀಡಲು ಶಿಫಾರಸು ಮಾಡಿತ್ತು. ಆದರೆ, ಒಳಮೀಸಲಾತಿ ಅನುಷ್ಠಾನಕ್ಕೆ ತರುವಾಗ ರಾಜ್ಯ ಸರ್ಕಾರವು ಈ ಮೀಸಲಾತಿಯನ್ನು ಸ್ಪರ್ಶ ಜಾತಿಗಳ ಗುಂಪಿಗೆ ಸೇರಿಸಿ 49 ಅಲೆಮಾರಿ ಸಮುದಾಯಗಳಿಗೆ, 10 ಸೂಕ್ಷ್ಮ ಸಮುದಾಯಗಳಿಗೆ ಅನ್ಯಾಯವೆಸಗಿದೆ' ಎಂದರು.

ಚಿಟಿಕೆ ಸುದ್ದಿ

'ವಾಹನ ತೊಳೆಯಲು ಕಾವೇರಿ ನೀರು ಬಳಕೆ ಬೇಡ'

ಬೆಂಗಳೂರು: 'ಆಯುಧ ಪೂಜೆ ಸಂದರ್ಭದಲ್ಲಿ ಸ್ವಚ್ಛತೆಗಾಗಿ ಮಿತವಾಗಿ ನೀರಿನ ಬಳಕೆ ಮಾಡಬೇಕು. ಶುದ್ಧ ಕುಡಿಯುವ ನೀರನ್ನು ಅನಗತ್ಯವಾಗಿ ವ್ಯರ್ಥ ಆಗದ ರೀತಿಯಲ್ಲಿ ಕಾಳಜಿ ವಹಿಸಿ ಸಹಕರಿಸಬೇಕು' ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

'ಆಯುಧ ಪೂಜೆಯ ಸಂದರ್ಭದಲ್ಲಿ ಸಾರ್ವಜನಿಕರು ವಾಹನಗಳ ಸ್ವಚ್ಛತಾ ಕಾರ್ಯಗಳಿಗೂ ಕಾವೇರಿ ನೀರನ್ನೇ ಬಳಸುವುದು ಬೇಡ' ಎಂದು ಮನವಿ ಮಾಡಿದ್ದಾರೆ.

ಆಡಳಿತ ಮಂಡಳಿಗೆ ಆಯ್ಕೆ

ಬೆಂಗಳೂರು: ಬಸವನಗುಡಿಯಲ್ಲಿರುವ ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಆಡಳಿತ ಮಂಡಳಿಗೆ ಶಿಕ್ಷಕ ವಿಭಾಗದಿಂದ ಡಾ.ಕೃಷ್ಣೇಗೌಡ, ಡಾ.ಪದ್ಮಿನಿ ರಾವ್, ಪ್ರೊ. ಹೇಮಂತರಾಜು ಸೇರಿ ಹತ್ತು ಮಂದಿ ಆಯ್ಕೆಯಾಗಿದ್ದಾರೆ.

ಪ್ರೊ.ಹಾಲಯ್ಯ ಚೆನ್ನಯ್ಯ ಬೆಲ್ಲದ್, ಡಿ.ವಿ.ನಾಗೇಶ್, ಪ್ರೊ.ಕೆ.ವಿ ಪ್ರಸಾದ್, ಡಾ.ರಾಮಯ್ಯ, ಪ್ರೊ.ಡಿ.ಶಿವಣ್ಣ, ಪ್ರೊ.ನಿಂಗಪ್ಪ ಎ.ಕೆ., ಪ್ರೊ.ಜಿ. ಸಿದ್ಧಲಿಂಗಯ್ಯ ಅವರು ಚುನಾವಣೆಯಲ್ಲಿ ಜಯಶಾಲಿಯಾಗಿದ್ದಾರೆ.

ಆಡಳಿತ ಮಂಡಳಿಯಲ್ಲಿ 300 ಸದಸ್ಯರಿದ್ದು, ಎನ್.ಇ.ಎಸ್‌ನ 21 ಸಂಸ್ಥೆಗಳಿಂದ ಸುಮಾರು 1,200 ಮತದಾರರು ಮತ ಚಲಾಯಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಇಪಿಎಸ್ ನೌಕರರ ಪ್ರತಿಭಟನೆ

ಬೆಂಗಳೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವಂತೆ ಹಲವು ಬಾರಿ ಕೇಂದ್ರಕ್ಕೆ ಮನವಿ ಸಲ್ಲಿಸಿದರೂ ಬೇಡಿಕೆ ಈಡೇರಿಲ್ಲ. 2014ರಿಂದ ಇಪಿಎಸ್ ನಿವೃತ್ತರಿಗೆ ₹1000 ನೀಡಲಾಗುತ್ತಿದೆ. ಇನ್ನೂ ಕೆಲವರು ಒಂದು ಸಾವಿರ ರೂಪಾಯಿಗಿಂತ ಕಡಿಮೆ ಪಿಂಚಣಿ ಪಡೆಯುತ್ತಿದ್ದಾರೆ ಮತ್ತು ಇಪಿಎಸ್ ವ್ಯಾಪ್ತಿಗೆ ಬಾರದ ನಿವೃತ್ತ ನೌಕರರಿಗೆ ₹5 ಸಾವಿರ ನೀಡಬೇಕು ಎಂದು ಸಂಘದ ಅಧ್ಯಕ್ಷ ನಂಜುಂಡೇಗೌಡ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶಂಕರ್ ಕುಮಾರ್, ಆರ್.ಸುಬ್ಬಣ್ಣ ಪಾಲ್ಗೊಂಡಿದ್ದರು.

ಬೈಕ್‌ನಲ್ಲಿ ಚೋಳನ್ ಸಂಚಾರ

'ಗುಂಡಿ ಮುಕ್ತ ರಸ್ತೆಗಳು' ಎಂದು ಘೋಷಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ಸುತ್ತಮುತ್ತ ದ್ವಿಚಕ್ರ ವಾಹನದಲ್ಲಿ ಸಂಚರಿಸಿದ ಕೇಂದ್ರ ನಗರ ಪಾಲಿಕೆ (ಬಿಸಿಸಿಸಿ) ಆಯುಕ್ತ ರಾಜೇಂದ್ರ ಚೋಳನ್ ಅವರು, ಪಾಲಿಕೆ ವ್ಯಾಪ್ತಿಯಲ್ಲಿರುವ ರಸ್ತೆಗಳನ್ನು 'ಗುಂಡಿ ಮುಕ್ತ' ಎಂದು ಶೀಘ್ರವೇ ಘೋಷಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಿಸಿಸಿಸಿ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ಅವರೊಂದಿಗೆ ದ್ವಿಚಕ್ರ ವಾಹನದಲ್ಲಿ ಸುಮಾರು 25 ಕಿ.ಮೀ. ಸಂಚರಿಸಿದ ರಾಜೇಂದ್ರ ಚೋಳನ್, ಸ್ಥಳೀಯ ಸಮಸ್ಯೆಗಳನ್ನು ಅವಲೋಕಿಸಿದರು.

ಚಿಕ್ಕಪೇಟೆ ವಿಭಾಗದ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿ ದುರಸ್ತಿ ಕಾಮಗಾರಿ ಪರಿಶೀಲಿಸಿ, ಶೀಘ್ರವೇ ಎಲ್ಲ ರಸ್ತೆಗಳೂ ಗುಂಡಿಮುಕ್ತ ರಸ್ತೆಗಳಾಗಬೇಕು. ಈ ರಸ್ತೆಗಳಲ್ಲಿ ಜೀಬ್ರಾ ಕ್ರಾಸಿಂಗ್, ಕ್ಯಾಟ್ ಐಸ್, ಲೈನ್ ಮಾರ್ಕಿಂಗ್, ಕರ್ಬ್‌ಗಳಿಗೆ ಬಣ್ಣ ಹಚ್ಚಬೇಕು. ನಂತರ 'ಗುಂಡಿ ಮುಕ್ತ ರಸ್ತೆಗಳು' ಎಂದು ಘೋಷಿಸಿ ಎಂಬುದಾಗಿ ಅಧಿಕಾರಿಗಳಿಗೆ ಸೂಚಿಸಿದರು.

ದೊಡ್ಡ ಬಸವಣ್ಣ ದೇವಸ್ಥಾನ ರಸ್ತೆ, ವಾಣಿವಿಲಾಸ್ ರಸ್ತೆ (ಪಶ್ಚಿಮ ದ್ವಾರ), ಶಂಕರ ಮಠ ರಸ್ತೆ, ಕೆ.ಆರ್. ರಸ್ತೆ, ನ್ಯಾಷನಲ್ ಕಾಲೇಜು (ಎಡಭಾಗ), ಆರ್.ವಿ. ರಸ್ತೆ, ಟೀಚರ್ಸ್ ಕಾಲೇಜು (ಎಡಭಾಗ), ಕನಕನಪಾಳ್ಯ ರಸ್ತೆ, ಟಿ. ಮರಿಗೌಡ ರಸ್ತೆ, ಹೊಸೂರು ರಸ್ತೆ, ಕೃಂಬಿಗಲ್ ರಸ್ತೆ (ಪಶ್ಚಿಮ ದ್ವಾರ, ಬಲಭಾಗ), ಜೆ.ಸಿ. ರಸ್ತೆ, ಪೂರ್ಣಿಮಾ ಟಾಕೀಸ್ ರಸ್ತೆ ಹಾಗೂ ಲಾಲ್‌ಬಾಗ್ ರಸ್ತೆಗಳಲ್ಲಿ ದ್ವಿಚಕ್ರ ವಾಹನದಲ್ಲಿ ರಾಜೇಂದ್ರ ಚೋಳನ್ ಸಂಚರಿಸಿದರು.

ಪ್ರಮುಖ ಜಂಕ್ಷನ್‌ಗಳಿಗೆ ಬೇರೆ ಬೇರೆ ವಿನ್ಯಾಸ ರೂಪಿಸಬೇಕು. ಹೊಸೂರು ರಸ್ತೆಯ ಮೇಲ್ಸೈ ತೀರಾ ಹಾಳಾಗಿದ್ದು, ಅದಕ್ಕೆ ತಕ್ಷಣವೇ ಡಾಂಬರೀಕರಣ ಮಾಡಬೇಕು. ರಸ್ತೆ ಬದಿಯ ತ್ಯಾಜ್ಯ (ಬ್ಲಾಕ್ ಸ್ಪಾಟ್‌ಗಳು) ತೆರವುಗೊಳಿಸಿ, ಮರುಕಳಿಸದಂತೆ ತಡೆಯಬೇಕು. ಜೆ.ಸಿ. ರಸ್ತೆಯಲ್ಲಿರುವ ನಗರ ಪಾಲಿಕೆ ಜಾಗದ ಸುತ್ತಲೂ ತಂತಿ ಬೇಲಿ ಹಾಕಿ, ಜಾಗದ ಅಭಿವೃದ್ಧಿಗೆ ವಿಸ್ತೃತ ಯೋಜನಾ ವರದಿ ತಯಾರಿಸಬೇಕು ಎಂದು ಸೂಚಿಸಿದರು.

ಪರಿಶೀಲನೆ: ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು, ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ಕಾರ್ಯ 2025ರ ತರಬೇತಿ ಕಾರ್ಯಾಗಾರಕ್ಕೆ ಭೇಟಿ ನೀಡಿ ಸಮೀಕ್ಷಕರಿಗೆ ಹಾಗೂ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಿದರು.

ಮಲ್ಲೇಶ್ವರ ವಿಭಾಗದ ಅರಮನೆ ನಗರ ವ್ಯಾಪ್ತಿಯ ನ್ಯೂ ಬಿಇಎಲ್ ರಸ್ತೆಯಿಂದ ಎಂಎಸ್‌ಆರ್ ನಗರ, ಆರ್.ಕೆ. ಗಾರ್ಡನ್, ಆರ್‌ಎಂವಿ ಎರಡನೇ ಹಂತ ಅಶ್ವತ್ಥ ನಗರ, ವಾರ್ಡ್ 36ರ ಮತ್ತಿಕೆರೆಗೆ ತೆರಳಿ ಸ್ಥಳ ಪರಿಶೀಲನೆ ನಡೆಸಿದರು.


ದ್ವಿಚಕ್ರ ವಾಹನದಲ್ಲಿ ಸಂಚರಿಸಿದ ರಾಜೇಂದ್ರ ಚೋಳನ್ ಅವರು ರಸ್ತೆ ಬದಿಯ ತ್ಯಾಜ್ಯವನ್ನು ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು

ವೈಟ್ ಟಾಪಿಂಗ್: 30ಗಳಲ್ಲಿ ಪೂರ್ಣ

ಹೆಣ್ಣೂರು–ಬಾಗಲೂರು ರಸ್ತೆ ವೈಟ್ ಟಾಪಿಂಗ್ ಕಾಮಗಾರಿಯನ್ನು ಅಕ್ಟೋಬರ್ ಅಂತ್ಯಕ್ಕೆ ಪೂರ್ಣಗೊಳಿಸಬೇಕು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಸ್ತೆ ಕಾಮಗಾರಿ ನಡೆಯುವಾಗ ಯಾವುದೇ ಗುಂಡಿ, ತ್ಯಾಜ್ಯ ಇರುವಂತಿಲ್ಲ. ಇದನ್ನು ಸುಸ್ಥಿತಿಯಲ್ಲಿ ಉಳಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿದ್ದು, ಕಾಮಗಾರಿ ತಡವಾದರೆ ಅವರಿಗೆ ದಂಡ ವಿಧಿಸುವಂತೆ ಹೇಳಿದರು.

ಇನ್ನೆರಡು ದಿನಗಳೊಳಗೆ ರಸ್ತೆಯಲ್ಲಿರುವ ಎಲ್ಲಾ ಗುಂಡಿಗಳನ್ನು ಮುಚ್ಚಬೇಕು. ಜೊತೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪ್ರಮಾಣಪತ್ರವನ್ನು ಸಲ್ಲಿಸಬೇಕು ಎಂದು ಕಾರ್ಯಪಾಲಕ ಎಂಜಿನಿಯರ್‌ಗೆ ಸೂಚಿಸಿದರು.

ಬೊಂಬೆ ಹೇಳುತ್ತೈತೆ...


ಮಹಾಲಕ್ಷ್ಮಿಪುರದ ಲಗ್ಗೆರೆಯ ಬಿಜಿಎಸ್ ವರ್ಲ್ಡ್ ಶಾಲೆಯಲ್ಲಿ ದಸರಾ ಗೊಂಬೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ


ಪ್ರೆಸ್ಟೀಜ್ ಫಾಲ್ಕನ್ ಸಿಟಿಯ ಸುಮಾ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಜೋಡಿಸಿಟ್ಟಿರುವುದು


ರಾಜರಾಜೇಶ್ವರಿನಗರದ ನಾಗೇಂದ್ರ ಮತ್ತು ಶೋಭಾ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಕೂರಿಸಲಾಗಿದೆ



ಆರ್‌.ಟಿ. ನಗರದ ಚೋಳನಾಯಕನಹಳ್ಳಿಯ ವಿದ್ಯಾಂಜಲಿ ಅಕಾಡೆಮಿ ಆಫ್ ಲರ್ನಿಂಗ್‌ನಲ್ಲಿ ದಸರಾ ಹಬ್ಬದ ಗೊಂಬೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ


ಬನಶಂಕರಿ ಎರಡನೇ ಹಂತದ ಅನಂತನ್ ಕೆ.ಎಸ್ ಅವರ ಮನೆಯಲ್ಲಿ ಜೋಡಿಸಿರುವ ದಸರಾ ಗೊಂಬೆಗಳು


ಕುರುಬರಹಳ್ಳಿಯ ಕರ್ನಾಟಕ ಲೇಔಟ್‌ನ ಪದ್ಮಾ ಪಾರ್ಥಸಾರಥಿ ಅವರ ಮನೆಯಲ್ಲಿ ದಸರಾ ಗೊಂಬೆಗಳನ್ನು ಜೋಡಿಸಲಾಗಿದೆ

ನಿಧನ ವಾರ್ತೆ

ಆರ್. ಮಹೇಶ್ವರಪ್ಪ



ಬೆಂಗಳೂರು: ರಾಜ್ಯ ಲೆಕ್ಕಪತ್ರ ಇಲಾಖೆಯ ನಿವೃತ್ತ ಹೆಚ್ಚುವರಿ ನಿಯಂತ್ರಕ ಆರ್. ಮಹೇಶ್ವರಪ್ಪ (70) ಅವರು ಸೋಮವಾರ ರಾತ್ರಿ ನಿಧನ ಹೊಂದಿದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ಕನ್ನಹಳ್ಳಿಯ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.


ಆಯುಧಪೂಜೆ ಮತ್ತು ವಿಜಯದಶಮಿ ಹಬ್ಬದ ಅಂಗವಾಗಿ ಕೆ.ಆರ್ ಮಾರುಕಟ್ಟೆಯಲ್ಲಿ ಬುಧವಾರ ಸಾರ್ವಜನಿಕರು ಹೂವು ಖರೀದಿಸಿದರು

ಪ್ರಜಾವಾಣಿ ಚಿತ್ರ

ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ ಮಾರುಕಟ್ಟೆಯಲ್ಲಿ ಜನಜಂಗುಳಿ

ದಸರಾ ಹಬ್ಬಕ್ಕೆ ಖರೀದಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬದ ಸಂಭ್ರಮ–ಸಡಗರಕ್ಕೆ ನಾಗರಿಕರು, ನಗರದ ಮಾರುಕಟ್ಟೆಗಳಲ್ಲಿ ಸೋಮವಾರ ಹೂವು ಮತ್ತು ಹಣ್ಣಿನ ಖರೀದಿ ನಡೆಸಿದರು.

ನವರಾತ್ರಿ ಆಚರಣೆಯ ವೇಳೆ ಪ್ರತಿ ವರ್ಷ ಹೂವುಗಳ ದರ ಏರಿಕೆ ಆಗುತ್ತದೆ. ಆದರೆ, ಕೆಲ ದಿನಗಳ ಹಿಂದೆ ಹೂವಿನ ದರ ಕುಸಿದಿತ್ತು. ಹಬ್ಬದ ವೇಳೆಗೆ ಮತ್ತೆ ಹೂವಿನ ದರಗಳು ಹೆಚ್ಚಾಗಿವೆ. 2 ವಾರಗಳವರೆಗೆ ಧಾರ್ಮಿಕ ಆಚರಣೆಗಳು ನಡೆಯುವುದರಿಂದ ಈ ಸಮಯದಲ್ಲಿ ಹೂವಿಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು ತಿಳಿಸಿದರು.

'ದಸರಾ ಹಬ್ಬದಲ್ಲಿ ಸೇವಂತಿಗೆ, ಕನಕಾಂಬರ, ಗುಲಾಬಿ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಆಯುಧ ಪೂಜೆ ದಿನ ವಾಹನಗಳು, ಕಚೇರಿ, ಮನೆಯಲ್ಲಿರುವ ವಸ್ತುಗಳನ್ನು ಅಲಂಕರಿಸಿ ಪೂಜೆ ಮಾಡಲಾಗುತ್ತದೆ.

ಬಾಳೆಕಂಬ ಜೋಡಿಗೆ (ದೊಡ್ಡ ಗಾತ್ರದ್ದು)	100
ಮಾವಿನ ಎಲೆಯ ಕಟ್ಟು	30
4 ತೆಂಗಿನಕಾಯಿಗೆ	₹200

ವಾಹನಗಳ ಅಲಂಕಾರಕ್ಕೆ ಹೂವು ಹೆಚ್ಚಾಗಿ ಮಾರಾಟವಾಗುತ್ತದೆ. ಗುಣಮಟ್ಟದ ಹೂವಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚು. ಆಗ ಬೆಲೆಯೂ ಏರಿಕೆಯಾಗುವುದು ಸಾಮಾನ್ಯ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ಮಂಜುನಾಥ್ ಮಾಹಿತಿ ನೀಡಿದರು.

'ಪ್ರತಿ ಕೆ.ಜಿ. ಕನಕಾಂಬರ ₹1,600, ಮಲ್ಲಿಗೆ ₹800, ಗುಲಾಬಿ ₹400ರಂತೆ ಮಾರಾಟವಾಗುತ್ತಿದೆ. ಮಂಗಳವಾರ ಹೂವಿನ ದರಗಳು ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ' ಎಂದು ತಿಳಿಸಿದರು.

ಆಯುಧ ಪೂಜೆಯ ದಿನ ಮನೆ, ವಾಹನ, ಅಂಗಡಿ, ಕಾರ್ಖಾನೆ ಬಳಿ ಒಡೆಯುವ ಬೂದುಗುಂಬಳ ಪ್ರತಿ ಕೆ.ಜಿಗೆ ₹40 ಮತ್ತು ಗಾತ್ರದ ಆಧಾರದ ಮೇಲೆ ಒಂದಕ್ಕೆ ₹100–₹200ರಂತೆ ಮಾರಾಟವಾಗಿದೆ.

ನಗರದ ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ ಮಾರುಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ತರಕಾರಿ, ದಿನಸಿ, ಆಲಂಕಾರಿಕ ವಸ್ತುಗಳು ಮತ್ತು ಪೂಜೆಗೆ ಬೇಕಾಗುವ ಬೂದುಗುಂಬಳ, ಬಾಳೆಕಂದು, ಎಲೆ, ತೆಂಗಿನಕಾಯಿಯ ಖರೀದಿ ಜೋರಾಗಿತ್ತು.

ಹೂವುಗಳ ದರ ಪ್ರತಿ ಕೆ.ಜಿ.ಗೆ (₹ಗಳಲ್ಲಿ)

ಹೂ	ಕಳೆದ ವಾರ	ಈ ವಾರ
ಕನಕಾಂಬರ	600	1,600
ಮಲ್ಲಿಗೆ	400	800
ಗುಲಾಬಿ	150	400
ಸೇವಂತಿಗೆ	100	250
ಸುಗಂಧರಾಜ	100	300
ಹಣ್ಣುಗಳ ದರ ಪ್ರತಿ ಕೆ.ಜಿಗೆ		
ಸೇಬು	120	150
ದಾಳಿಂಬೆ	80	100
ಏಲಕ್ಕಿ ಬಾಳೆ	60	80
ಸಪೋಟ	80	100
ತರಕಾರಿ ದರಗಳು ಪ್ರತಿ ಕೆಜಿಗೆ		
ಕ್ಯಾರೆಟ್	60	70
ಕ್ಯಾಪ್ಸಿಕಮ್	40	60
ಈರುಳ್ಳಿ	20	20
ಬೀನ್ಸ್	50	60
ಟೊಮೆಟೊ	20	20
ಆಲೂಗಡ್ಡೆ	25	30
ಹೀರೇಕಾಯಿ	50	60
ಚವಳಿಕಾಯಿ	40	62
ಮೆಣಸಿನಕಾಯಿ	100	80
ಕುಂಬಳಕಾಯಿ	30	40
ಬೆಳ್ಳುಳ್ಳಿ	100	120
ಪ್ರತಿ ಕಟ್ಟಿಗೆ		
ಕೊತ್ತಂಬರಿ	20	20
ಪಾಲಕ್	10	20
ಸಬ್ಬಸಿಗೆ	20	30
ಮೆಂತ್ಯೆ	20	20
ಪುದೀನ	10	20

ನಗರದಲ್ಲಿ ಇಂದು



ದಸರಾ ಮಹೋತ್ಸವ: ಹಾಚಂಡಿಕಾ ದುರ್ಗಾ ಹೋಮ, ಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ರಜಪೂತ ಸಭಾ, ಸ್ಥಳ: ರಜಪೂತ ಭವನ, ವಸಂತನಗರ, ಬೆಳಿಗ್ಗೆ 9 ಹಾಗೂ ಸಂಜೆ 7

ನವರಾತ್ರಿ ಮಹೋತ್ಸವದ ಅಂಗವಾಗಿ 'ಧಾತು' ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ಕಮಲಮ್ಮ ಮತ್ತು ತಂಡ, ಅತಿಥಿಗಳು: ಅನು ಚಂದ್ರಕಾಂತ್, ಪ್ರಮೀಳಾ ಫಾಲನೇತ್ರ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ನಂ. 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ಭರತನಾಟ್ಯ, ಒಡಿಸ್ಸಿ, ಕಥಕ್ ನೃತ್ಯ ಪ್ರದರ್ಶನ: ಸಂಧ್ಯಾ ಉಡುಪ ಮತ್ತು ತಂಡ, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಮಿಂಚಿನ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಗೆ ಹತ್ತಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಮುತ್ತಿನ ಅಲಂಕಾರ: ಸಂಗೀತ ಕಛೇರಿ: ಅನಮೋಲ್ ಶಂಕರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರಿ ಉತ್ಸವ: 'ಭಕ್ತರಿಗೆ ಒಲಿದ ಶ್ರೀನಿವಾಸ' ಉಪನ್ಯಾಸ: ಅನಿರುದ್ಧಾಚಾರ್ಯ ಪಾಂಡುರಂಗಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಪುಷ್ಪ ಅಲಂಕಾರ: ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ದುರ್ಗಾ ಪರಮೇಶ್ವರಿ ಅಲಂಕಾರ: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ನೇಹಾ ಎಚ್. ರಾಚಪ್ಪ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶಾಂತಲ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ದಾಳಂಬರಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಇತರೆ ಕಾರ್ಯಕ್ರಮ

ಜಿ. ನಾರಾಯಣಕುಮಾರ್ ನೆನಪು ನಮನ, 'ಜಿ.ನಾ.ಕು. ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಮಹೇಶ ಜೋಶಿ, ವಾಟಾಳ್ ನಾಗರಾಜ್, ಪ್ರಶಸ್ತಿ ಪ್ರದಾನ: ಡಿ.ಕೆ. ಸುರೇಶ್, ಅಧ್ಯಕ್ಷತೆ: ಕುರುಬೂರು ಶಾಂತಕುಮಾರ್, ಪ್ರಾಸ್ತಾವಿಕ ನುಡಿ: ಗುರುದೇವ್ ನಾರಾಯಣ್‌ಕುಮಾರ್, ಪ್ರಶಸ್ತಿ ಸ್ವೀಕರಿಸುವವರು: ಸಚಿವ ಶ್ರೀಧರ್, ಬಸವರಾಜ ಐರಣಿ, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಲೈಟ್ಸ್ ಆಫ್ ಜಾಯ್–ಡಾಂಡಿಯಾ ನೈಟ್ಸ್: ಸ್ಥಳ: ಭಾರತೀಯ ಮಾಲ್ ಆಫ್ ಬೆಂಗಳೂರು, ಭಾರತೀಯ ಸಿಟಿ, ಥಣಿಸಂದ್ರ ಮುಖ್ಯರಸ್ತೆ, ಸಂಜೆ 6

ಕಪ್ಪಣ್ಣ ಅಂಗಳ ದಶಮಾನೋತ್ಸವ: ದೇವಿ ಸ್ತುತಿ ಮತ್ತು ಸಮಾರೋಪ: ಗಾಯನ: ಸಿರಿ ಗಿರೀಶ್, ಪಿಟೀಲು: ಅರ್ಚನಾ ಮಾರಾಟೆ, ಮೃದಂಗ: ಅಭಿನಯ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

ಅ.1ರವರೆಗೆ ಸೌರ ಜಾಗೃತಿ ಮೇಳ

ಬೆಂಗಳೂರು: ಹಲಸೂರಿನ ಬಂಗಾಳಿ ಅಸೋಸಿಯೇಷನ್‌ನಲ್ಲಿ ಸೆ.29ರಿಂದ ಸೌರ ಜಾಗೃತಿ ಶಿಬಿರ ಮತ್ತು ಸಾಲ ಮೇಳ ಆರಂಭವಾಗಿದ್ದು, ಅ.1ರವರೆಗೆ ನಡೆಯಲಿದೆ.

ಬೆಸ್ಕಾಂ, ಆದಿತ್ಯ ಇಂಪ್ಯಾಕ್ಟ್ ಸೋಲಾರ್ ಸೊಲ್ಯೂಷನ್ಸ್, ಕೆನರಾ ಬ್ಯಾಂಕ್ ಸಹಯೋಗದಲ್ಲಿ ನಡೆಯುತ್ತಿರುವ ಮೇಳದಲ್ಲಿ ಆಸಕ್ತರಿಗೆ ಪ್ರಧಾನಮಂತ್ರಿ ಸೂರ್ಯ ಘರ್ ಉಚಿತ ವಿದ್ಯುತ್ ಯೋಜನಾ ಮೇಳ ಅಗತ್ಯ ನೆರವು ಒದಗಿಸಲಿದೆ.

ಜನರಿಗೆ ಸೌರಶಕ್ತಿಯ ಬಗ್ಗೆ ಜಾಗೃತಿ ಮೂಡಿಸಿ, ಚಾವಣಿ ಸೌರಫಲಕ ಅಳವಡಿಸಿಕೊಂಡರೆ ವಿದ್ಯುತ್ ಬಿಲ್ ಪಾವತಿಸುವ ಹೊರೆ ಕಡಿಮೆಯಾಗಲಿದೆ. ಹೆಚ್ಚುವರಿ ವಿದ್ಯುತ್ ಅನ್ನು ಮಾರಾಟ ಮಾಡಬಹುದು. ಆ ಮೂಲಕ ಸುಸ್ಥಿರ ಆರ್ಥಿಕತೆಗೂ ಸಹಾಯವಾಗಲಿದೆ ಎಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕಿ ಉಮಾ, ಕೆನರಾ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಪ್ರಮೋದ್ ಸರಾಫ್, ಆದಿತ್ಯ ಇಂಪ್ಯಾಕ್ಟ್ ಸೋಲಾರ್‌ನ ಬಿಸ್ವಜಿತ್ ಪಾಂಡೆ, ಗುರುಪ್ರಸಾದ್ ಎನ್. ರಾವ್ ಅವರು ಹೇಳಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ.

ಕೆಲಸಕ್ಕಿದ್ದ ಮನೆಯಲ್ಲಿ ಆಭರಣ ಕದ್ದಿದ್ದ ಆರೋಪಿ ಸೆರೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಚಿನ್ನ ಹಾಗೂ ವಜ್ರದ ಆಭರಣ ಕಳವು ಮಾಡಿದ್ದ ಹೌಸ್‌ಕೀಪಿಂಗ್ ಕಾರ್ಮಿಕ ಸಚಿನ್ ಸೊನಕರ (24) ಎಂಬಾತನನ್ನು ಜೆ.ಸಿ.ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯ ನಂದನಗರದ ನೇವಾಡಾ ಗ್ರಾಮದ ಆರೋಪಿ ಸಚಿನ್, ಮಿಲ್ಲರ್ ರಸ್ತೆಯ ನಿವಾಸಿಯೊಬ್ಬರ ಮನೆಯಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡುತ್ತಿದ್ದ. ಜೂನ್ 15ರಂದು 236 ಗ್ರಾಂ ಆಭರಣವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ.

ಸೆ.23ರಂದು ಮನೆಯ ಮಾಲೀಕರು ದೂರು ನೀಡಿದ್ದರು. ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. 'ಕೃತ್ಯ ಎಸಗಿದ ಬಳಿಕ ಆರೋಪಿ ಉತ್ತರ ಪ್ರದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದ. ಸೆ.25ರಂದು ವಿಶೇಷ ಪೊಲೀಸ್ ತಂಡವು ಉತ್ತರ ಪ್ರದೇಶಕ್ಕೆ ತೆರಳಿ, ಅಲ್ಲಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಕೆಲಸಕ್ಕಿದ್ದ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಕಳ್ಳತನ ಮಾಡಿದ್ದ ಆಭರಣ ಗಳನ್ನು ಆರೋಪಿ ಮಾರಾಟ ಮಾಡಿದ್ದ. ಆ ಅಂಗಡಿಯಿಂದ ₹35 ಲಕ್ಷದ ಆಭರಣವನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ. ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ಅವರ ನೇತೃತ್ವದಲ್ಲಿ ಜೆ.ಸಿ. ನಗರ ಠಾಣೆಯ ಇನ್‌ಸ್ಪೆಕ್ಟರ್ ಕೆ.ಎಂ.ಚೈತನ್ಯ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿತು.

₹9.93 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ವಿದೇಶಿಗರು ಸೇರಿ 7 ಪೆಡ್ಲರ್‌ಗಳ ಬಂಧನ, ಸಿಸಿಬಿ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ನಿಗ್ಯು



ಥಾಮಸ್

ವಶಕ್ಕೆ ಪಡೆದ ಮಾದಕ ವಸ್ತುಗಳು

- **3** ಕೆ.ಜಿ **858** ಗ್ರಾಂ ಎಂಡಿಎಂಎ ಕ್ರಿಸ್ಟಲ್
- **41** ಗ್ರಾಂ ಎಕ್ಸ್‌ಟಸಿ ಪಿಲ್ಸ್
- **1** ಕೆ.ಜಿ **82** ಗ್ರಾಂ ಹೈಡ್ರೊಗಾಂಜಾ
- **6** ಕೆ.ಜಿ ಗಾಂಜಾ

ಬೆಂಗಳೂರು: ಮಹದೇವಪುರ, ಆಡುಗೋಡಿ, ಸಿದ್ದಾಪುರ, ಕೆ.ಜಿ. ನಗರ ಹಾಗೂ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಇಬ್ಬರು ವಿದೇಶಿ ಪ್ರಜೆಗಳು ಸೇರಿ ಏಳು ಮಂದಿಯನ್ನು ಸಿಸಿಬಿ ಮಾದಕ ದ್ರವ್ಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ಒಟ್ಟು 3 ಕೆ.ಜಿ 858 ಗ್ರಾಂ ಎಂಡಿಎಂಎ ಕ್ರಿಸ್ಟಲ್, 41 ಗ್ರಾಂ ಎಕ್ಸ್‌ಟಸಿ ಪಿಲ್ಸ್, 1 ಕೆ.ಜಿ 82 ಗ್ರಾಂ ಹೈಡ್ರೊಗಾಂಜಾ, 6 ಕೆ.ಜಿ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಲಾಗಿದ್ದ ಕಾರು, ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ಹೆಬ್ಬಗೋಡಿ ಠಾಣೆಯ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ನೈಜೀರಿಯಾದ ಥಾಮಸ್ ನೋವಿಡ್ ಚಿಮೆ ಹಾಗೂ ನಿಗ್ಯು ಕಿಂಗ್‌ಸ್ಲೇ ಚಿಕ್‌ಮೇಕಾ ಎಂಬುವವರನ್ನು ಬಂಧಿಸಲಾಗಿದೆ.

ಬಂಧಿತರಿಂದ ₹7.80 ಕೋಟಿ ಮೌಲ್ಯದ ಎಂಡಿಎಂಎ ಕ್ರಿಸ್ಟಲ್ ಹಾಗೂ ಎಕ್ಸ್‌ಟಸಿ ಪಿಲ್ಸ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಅಧಿಕ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಡ್ರಗ್ಸ್ ಪೆಡ್ಲಿಂಗ್ ಮಾಡುತ್ತಿದ್ದರು. ತಮಗೆ ಗೊತ್ತಿದ್ದವರಿಂದ ಎಂಡಿಎಂಎ ಕ್ರಿಸ್ಟಲ್ ಹಾಗೂ ಎಕ್ಸ್‌ಟಸಿ ಪಿಲ್ಸ್ ಖರೀದಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಥಾಮಸ್ ನೋವಿಡ್ ಚಿಮೆ 2019ರಲ್ಲಿ ವೈದ್ಯಕೀಯ ವೀಸಾದ ಮೇಲೆ ಭಾರತಕ್ಕೆ ಬಂದಿದ್ದ. ದೆಹಲಿಯಲ್ಲಿ ವಾಸವಿದ್ದ ವಿದೇಶಿ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ಮಾರಾಟ ಮಾಡಿದ್ದ ಪ್ರಕರಣದಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದ. ಆರೋಪಿಯ ವಿರುದ್ಧ 2022ರಲ್ಲಿ ಎನ್‌ಸಿಬಿ ಘಟಕದಲ್ಲಿ ಎನ್‌ಡಿಪಿಎಸ್ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿತ್ತು. ನಿಗ್ಯು ಕಿಂಗ್‌ಸ್ಲೇ ಚಿಕ್‌ಮೇಕಾ 2019ರಲ್ಲಿ ವಿದ್ಯಾರ್ಥಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ. ಆನ್‌ಲೈನ್ ಸೈಬರ್ ವಂಚನೆ ಪ್ರಕರಣದಲ್ಲಿ ಭಾಗಿಯಾಗಿ ಈತನನ್ನು ಗುಜರಾತ್ ಪೊಲೀಸರು ಬಂಧಿಸಿದ್ದರು. ಈತನ ವಿರುದ್ಧ ಗುಜರಾತ್‌ನ ಎರಡು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ. ಜಾಮೀನಿನ ಮೇಲೆ ಬಿಡುಗಡೆಯಾಗಿ ಬೆಂಗಳೂರಿಗೆ ಬಂದು, ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ' ಎಂದು ಪೊಲೀಸರು ಹೇಳಿದರು.

ಮಹದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದ ಸಾಫ್ಟ್‌ವೇರ್ ಉದ್ಯೋಗಿ ಕೇವಿನ್ ರೋಜರ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮೋಜಿನ ಜೀವನ ನಡೆಸಲು ಹಾಗೂ ಅಧಿಕ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕೇರಳದಿಂದ ಕಡಿಮೆ ಬೆಲೆಗೆ ಹೈಡ್ರೊಗಾಂಜಾ ತಂದು ನಗರದ ಪರಿಚಯಸ್ಥ ಗಿರಾಕಿಗಳಿಗೆ ಮಾರಾಟ ಮಾಡುತ್ತಿದ್ದ. ಆರೋಪಿಯಿಂದ 500 ಗ್ರಾಂ ಹೈಡ್ರೊಗಾಂಜಾ ಮತ್ತು ಕೃತ್ಯಕ್ಕೆ ಬಳಸಲಾಗುತ್ತಿದ್ದ ಕಾರು, ಬೈಕ್ ಹಾಗೂ ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದ ಡೆಂಟಲ್ ಕಾಲೇಜು ವಿದ್ಯಾರ್ಥಿ ರಂಜಿತ್ ಆ್ಯಂಥೋನಿ ಎಂಬಾತನನ್ನು ಆಡುಗೋಡಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ 300 ಗ್ರಾಂ ಹೈಡ್ರೊಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ವಿದೇಶಿ ಅಂಚೆ ಕಚೇರಿ ಮೂಲಕ ಪಾರ್ಸಲ್

ವಿದೇಶಿ ಅಂಚೆ ಕಚೇರಿಗೆ ಪಾರ್ಸಲ್‌ನಲ್ಲಿ ಬಂದಿದ್ದ ₹1 ಕೋಟಿ ಮೌಲ್ಯದ ಮಾದಕ ಪದಾರ್ಥಗಳನ್ನು ಕೆ.ಜಿ.ನಗರ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಒಂದು ಕೆ.ಜಿ 22 ಗ್ರಾಂ ಹೈಡ್ರೊಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಪಾರ್ಸಲ್ ಬುಕ್ ಮಾಡಿದ್ದ ಆರೋಪಿ ಸುರೇಶ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ರಸ್ತೆ ಗುಂಡಿಯಿಂದ ಅಪಘಾತ: ಬಿ.ಕಾಂ. ವಿದ್ಯಾರ್ಥಿನಿ ಸಾವು

ಬೆಂಗಳೂರು: ಬೂದಿಗೆರೆ ಕ್ರಾಸ್ ಬಳಿ ರಸ್ತೆ ಗುಂಡಿ ತಪ್ಪಿಸುವ ಯತ್ನದಲ್ಲಿ ನಿಯಂತ್ರಣ ತಪ್ಪಿ ಬಿದ್ದ ವಿದ್ಯಾರ್ಥಿನಿ ಮೇಲೆ ಲಾರಿ ಹರಿದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್) ರಸ್ತೆಯ ಆವಲಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ಬೆಳಿಗ್ಗೆ ಘಟನೆ ಸಂಭವಿಸಿದೆ.



ತನುಶ್ರೀ

ಬೈಯಪ್ಪನಹಳ್ಳಿ ನಿವಾಸಿ ತನುಶ್ರೀ (22) ಅವರು ಬಿ.ಕಾಂ ಓದುತ್ತಿದ್ದರು. ಬೂದಿಗೆರೆ ಕ್ರಾಸ್ ಬಳಿಯ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ತನುಶ್ರೀ ಅವರು, ರಸ್ತೆ ಗುಂಡಿ ತಪ್ಪಿಸಲು ಬಲ ಬದಿಗೆ ವಾಹನ ಚಾಲನೆ ಮಾಡಿದ್ದರು. ಅದೇ ವೇಳೆ ಹಿಂದಿನಿಂದ ವೇಗವಾಗಿ ಬಂದ ಟಿಪ್ಪರ್ ಲಾರಿ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಆಗ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದ ತನುಶ್ರೀ ಅವರ ಮೇಲೆ ಟಿಪ್ಪರ್‌ನ ಚಕ್ರಗಳು ಹರಿದ ಪರಿಣಾಮ, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

'ಅಪಘಾತದ ನಂತರ ಟಿಪ್ಪರ್ ವಾಹನದ ಚಾಲಕ ಪರಾರಿ ಆಗಿದ್ದಾನೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ, ಟಿಪ್ಪರ್ ವಾಹನವನ್ನು ಪತ್ತೆ ಹಚ್ಚಲಾಗಿದೆ. ಚಾಲಕನ ಸುಳಿವು ಸಿಕ್ಕಿದ್ದು, ತಕ್ಷಣವೇ ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಸ್ಥಳೀಯರ ಆಕ್ರೋಶ: ರಸ್ತೆ ಅವ್ಯವಸ್ಥೆ ಹಾಗೂ ತನುಶ್ರೀ ಅವರ ಸಾವಿನಿಂದ ಆಕ್ರೋಶಗೊಂಡ ಸ್ಥಳೀಯರು ಘಟನಾ ಸ್ಥಳದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಬೂದಿಗೆರೆ ಸುತ್ತಮುತ್ತಲಿನ ರಸ್ತೆಗಳು ಸಂಪೂರ್ಣ ಹಾಳಾಗಿವೆ. ರಸ್ತೆಗಳು ಗುಂಡಿ ಬಿದ್ದಿದ್ದು, ಪ್ರತಿನಿತ್ಯ ಅಪಘಾತ ಸಂಭವಿಸುತ್ತಿವೆ. ಗುಂಡಿಗಳನ್ನು ಮುಚ್ಚಿಲ್ಲ. ವಿದ್ಯಾರ್ಥಿನಿ ತನುಶ್ರೀ ಸಾವಿಗೆ ರಸ್ತೆ ಗುಂಡಿಗಳೇ ಕಾರಣ' ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ತಕ್ಷಣವೇ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇಬ್ಬರು ಇನ್‌ಸ್ಪೆಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: 'ಮಹಿಳೆಯ ಮೇಲೆ ದೌರ್ಜನ್ಯವೆಸಗಿರುವ ಮಾದಕನಾಯಕನಹಳ್ಳಿ ಹಾಗೂ ನೆಲಮಂಗಲ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್‌ಗಳ ವಿರುದ್ಧ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಆಗ್ರಹಿಸಿದೆ.

ಈ ಬಗ್ಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದು, 'ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಮಹಿಳೆಯೊಬ್ಬರ ಮೊಬೈಲ್ ಕಸಿದುಕೊಂಡು, ಸಾರ್ವಜನಿಕವಾಗಿ ನಡು ರಸ್ತೆಯಲ್ಲಿ ಎಳೆದುಕೊಂಡು ಹೋಗಿ ದೌರ್ಜನ್ಯವೆಸಗಿದ್ದಾರೆ. ಇದನ್ನು ಆಯೋಗ ಖಂಡಿಸುತ್ತದೆ' ಎಂದಿದ್ದಾರೆ.

'ಅನ್ಯಾಯಕ್ಕೆ ಒಳಗಾದ ರೈತರ ಪರವಾಗಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ನ್ಯಾಯ ಕೇಳಲು ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ತೆರಳಿದ್ದರು. ಸುಳ್ಳು ಪ್ರಕರಣದಲ್ಲಿ ಬಂಧಿಸಿರುವುದನ್ನು ಪ್ರಶ್ನಿಸಿದ್ದ ಕೆಆರ್‌ಎಸ್ ಕಾರ್ಯಕರ್ತರಿಗೆ ನೆಲಮಂಗಲ ಠಾಣೆಯ ಇನ್‌ಸ್ಪೆಕ್ಟರ್ ನರೇಂದ್ರ ಬಾಬು ಮೊಬೈಲ್ ಕಸಿದುಕೊಂಡು ಬೆದರಿಕೆ ಹಾಕಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದವರ ವಿರುದ್ಧ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಂಡು ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕು' ಎಂದು ನಿರ್ದೇಶಿಸಿದೆ.

ಕೆಎಸ್‌ಆರ್‌ಟಿಸಿ ವಿಶೇಷ ಬಸ್ ಪ್ರಯಾಣ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ, ದೀಪಾವಳಿ ಸಮಯದಲ್ಲಿ ವಿಶೇಷ ಬಸ್‌ಗಳ ಪ್ರಯಾಣ ದರವನ್ನು ಶೇ 10ರವರೆಗೆ ಹೆಚ್ಚಳ ಮಾಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ವಿಶೇಷ ದಿನ, ಜಾತ್ರೆ, ಹಬ್ಬಗಳ ಸಮಯದಲ್ಲಿ ಸಂಚರಿಸುವ ವಿಶೇಷ ಬಸ್‌ಗಳ ಪ್ರಯಾಣ ದರಗಳನ್ನು ಹೆಚ್ಚಿಸಲು ರಾಜ್ಯ ಸರ್ಕಾರದ ಅಧಿಸೂಚನೆಯಂತೆ ಅವಕಾಶವಿರುತ್ತದೆ. ಈ ದಿನಗಳಲ್ಲಿ ಏಕಮುಖವಾಗಿ ಜನಸಂಚಾರ ಇರುತ್ತದೆ. ವಾಪಸ್ ಬರುವಾಗ ಪ್ರಯಾಣಿಕರ ಪ್ರಮಾಣ ಕಡಿಮೆ ಇರುತ್ತದೆ. ವಿಶೇಷ ವಾಹನಗಳನ್ನು ಇತರೇ ವಿಭಾಗಗಳಿಂದ ಪಡೆದು ಅಗತ್ಯ ಇರುವ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡುವುದರಿಂದ ವೆಚ್ಚ ಹೆಚ್ಚಿರುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಅದರಂತೆ, ಈ ಬಾರಿ ದಸರಾ ಹಬ್ಬದ ಅವಧಿಯಲ್ಲಿ ಬೆಂಗಳೂರು ಮೈಸೂರು ಮಾರ್ಗದ ವೇಗದೂತ, ತಡೆರಹಿತ ಹಾಗೂ ಪ್ರತಿಷ್ಠಿತ ಸಾರಿಗೆಗಳಲ್ಲಿ ಕ್ರಮವಾಗಿ ₹20 ಹಾಗೂ ₹30 ದರ ಹೆಚ್ಚಿಸಲಾಗಿದೆ. ಈ ರೀತಿ ವಿಶೇಷ ದಿನಗಳಲ್ಲಿ ವಿಶೇಷ ಬಸ್‌ಗಳ ಪ್ರಯಾಣ ದರ ಹೆಚ್ಚಿಸುವ ವ್ಯವಸ್ಥೆ ಎರಡು ದಶಕಗಳಿಂದ ಇದೆ ಎಂದರು.

ಕರ್ತವ್ಯದಲ್ಲಿದ್ದ ಎಎಸ್‌ಐ ಸಾವು

ಬಳ್ಳಾರಿ: ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಜನಸ್ಪಂದನ ಕಾರ್ಯಕ್ರಮದ ಕರ್ತವ್ಯದಲ್ಲಿದ್ದ ಎಎಸ್‌ಐ ಶ್ರೀನಿವಾಸ್ ರಾವ್ (52) ಹೃದಯಾಘಾತದಿಂದ ಸೋಮವಾರ ಮೃತಪಟ್ಟರು.

'ಶ್ರೀನಿವಾಸ್ ಅವರಿಗೆ ಕರ್ತವ್ಯದಲ್ಲಿ ಇದ್ದ ವೇಳೆ ಎದೆ ನೋಯತೊಡಗಿತು. ಅವರನ್ನು ಮನೆಗೆ ಕಳುಹಿಸಲಾಯಿತು. ಚಿಕಿತ್ಸೆಗಾಗಿ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ (ವಿಮ್ಸ್) ದಾಖಲಿಸಲಾಗಿತ್ತು. ಆದರೆ, ಪ್ರಯೋಜನವಾಗಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ಪ್ರಜ್ವಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆಲಸದ ಮಧ್ಯವಯಸ್ಕ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ ದುಷ್ಕೃತ್ಯದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಜೀವಾವಧಿ ಕಠಿಣ ಜೈಲು ಶಿಕ್ಷೆ ರದ್ದುಗೊಳಿಸುವಂತೆ ಕೋರಿ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

'ನನ್ನ ವಿರುದ್ಧ, ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ನೀಡಿರುವ ತೀರ್ಪು ಮಿಥ್ಯಾದೇಶ, ಕಾನೂನುಬಾಹಿರ, ಪ್ರಕರಣದ ದಾಖಲೆಗಳಲ್ಲಿರುವ ವಾಸ್ತವಾಂಶಗಳಿಗೆ ವಿರುದ್ಧವಾದ ನಿಲುವುಗಳಿಂದ ಕೂಡಿದೆ' ಎಂದು ಪ್ರಜ್ವಲ್ ಮೇಲ್ಮನವಿಯಲ್ಲಿ ಆರೋಪಿಸಿದ್ದಾರೆ.

'ರಾಜಕೀಯ ದುರುದ್ದೇಶದಿಂದ ಮಹಿಳೆಯನ್ನು ಅಸ್ತ್ರವನ್ನಾಗಿಸಿ ನನ್ನ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಸಂತ್ರಸ್ತೆ 2023ರಲ್ಲಿ ಫಾರ್ಮ್ ಹೌಸ್‌ನಲ್ಲಿನ ನಮ್ಮ ಗೃಹಪ್ರವೇಶದಲ್ಲಿ ಪಾಲ್ಗೊಂಡಿದ್ದಾರೆ. ನಾನು ಅತ್ಯಾಚಾರ ಎಸಗಿದ್ದೇನೆ ಎನ್ನುವುದಾದರೆ ಆಕೆ ನಮ್ಮ ಗೃಹಪ್ರವೇಶಕ್ಕೆ ಹೇಗೆ ತಾನೇ ಬರುತ್ತಿದ್ದರು' ಎಂದು ಪ್ರಜ್ವಲ್ ಮೇಲ್ಮನವಿಯಲ್ಲಿ ಪ್ರಶ್ನಿಸಿದ್ದಾರೆ.

'ಪೊಲೀಸರು ಮಹಿಳೆಯಿಂದ 3 ವರ್ಷಗಳ ಬಳಿಕ ದೂರು ಪಡೆದಿದ್ದಾರೆ. ಸಕಾರಣಗಳಿಲ್ಲದ ಸಾಕ್ಷ್ಯಗಳನ್ನು ಪರಿಗಣಿಸಲಾಗಿದೆ. ಸ್ಟೋರ್ ರೂಮಿನಲ್ಲಿನ ಬಟ್ಟೆ, ಕೂದಲಿದ್ದ ಬ್ಯಾಗ್ ಅನ್ನು ಮಹಿಳೆ ಗುರುತಿಸಿಲ್ಲ. ಬ್ಯಾಟರಿ, ಪೇಂಟ್ ಇದ್ದ ರೂಮಿನಲ್ಲಿ ಮಹಿಳೆಯ ಉಡುಪು ಸಿಕ್ಕಿತೆಂದು ಹೇಳಲಾಗಿದೆ. ಲಾಕ್ ಆಗಿದ್ದ ರೂಮಿನಲ್ಲಿ ವೀರ್ಯಾಣು ಸಿಂಚನಗೊಂಡ ಬಟ್ಟೆ ಸಿಗಲು ಸಾಧ್ಯವೇ' ಎಂದು ಪ್ರಶ್ನಿಸಿದ್ದಾರೆ.

'ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 164ರ ಅನ್ವಯ ಸಂತ್ರಸ್ತೆಯ ಹೇಳಿಕೆಯನ್ನು ಕೋರ್ಟ್‌ಗೆ ಹಾಜರುಪಡಿಸಿಲ್ಲ. ಇದು ಅಪರಾಧಿಕ ನ್ಯಾಯಶಾಸ್ತ್ರದ ಮೂಲ ತತ್ವಗಳಿಗೆ ಅಪಚಾರ. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಫೋಟೊಗಳು ಮತ್ತು ವಿಡಿಯೋದಿಂದ ಪ್ರಭಾವಿತರಾಗಿ ನನ್ನ ವಿರುದ್ಧ ತೀರ್ಪು ಬರೆಯಲಾಗಿದೆ. ಅತ್ಯಾಚಾರದ ವಿಡಿಯೊ ಇತ್ತೆಂದು ಆರೋಪಿಸಲಾದ ಮೊಬೈಲ್ ಅನ್ನೇ ವಶಕ್ಕೆ ಪಡೆದಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಯಲ್ಲೂ ವಿರೋಧಾಭಾಸಗಳಿವೆ. ಹೀಗಾಗಿ, ನನಗೆ ವಿಧಿಸಲಾಗಿರುವ ಶಿಕ್ಷೆ ರದ್ದುಪಡಿಸಬೇಕು' ಎಂದು ಪ್ರಜ್ವಲ್ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

'ಸಮೀಕ್ಷೆ: ವದಂತಿಗಳಿಗೆ ಕಿವಿ ಕೊಡಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತಾದ ವದಂತಿಗಳ ಬಗ್ಗೆ ಸಾರ್ವಜನಿಕರು ಕಿವಿಗೊಡಬಾರದು' ಎಂದು ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದ್ದಾರೆ.

'ಸಮೀಕ್ಷೆ ವೇಳೆ ಕೆಲವು ಸಾರ್ವಜನಿಕರು ಸಮೀಕ್ಷಕರು ತಮ್ಮ ಪಡಿತರ ಚೀಟಿಯ ರದ್ದತಿಗೆ ಬಂದಿದ್ದಾರೆಂದು ವಿವರ ನೀಡಲು ಸಹಕರಿಸದೇ ಅಡ್ಡಿಪಡಿಸುತ್ತಿರುವ ಮಾಹಿತಿಯಿದೆ. ಯಾವುದೇ ತಪ್ಪು ಕಲ್ಪನೆ ಹೊಂದದೆ ನಿಶ್ಚಿಂತೆಯಿಂದ ಸಮೀಕ್ಷೆಯಲ್ಲಿ ಭಾಗವಹಿಸಿ' ಎಂದಿದ್ದಾರೆ.

'ಇದು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ. ಹಿಂದುಳಿದ ವರ್ಗಗಳ ಹಾಗೂ ಇತರೆ ಎಲ್ಲ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ದತ್ತಾಂಶವನ್ನು ಸಂಗ್ರಹಿಸಲು ಮಾತ್ರ ನಡೆಸಲಾಗುತ್ತಿದೆ. ಪಡಿತರ ಚೀಟಿ ರದ್ದತಿ ಕಾರ್ಯಯನ್ನು ಸಮೀಕ್ಷೆ ಮೂಲಕ ಮಾಡುವುದಿಲ್ಲ' ಎಂದು ತಿಳಿಸಿದ್ದಾರೆ.

ಪತ್ನಿ ಕೊಂದು ಪತಿ ಆತ್ಮಹತ್ಯೆ

50 ಬಾರಿ ಇರಿದು ಕೃತ್ಯ, ಉಲ್ಲಾಳದ ಪ್ರೆಸ್ ಲೇಔಟ್‌ನಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಉಲ್ಲಾಳದ ಗೌರ್ನಮೆಂಟ್ ಪ್ರೆಸ್ ಲೇಔಟ್‌ನಲ್ಲಿ ಪತ್ನಿಗೆ ಇರಿದು ಪತಿಯೂ ಫ್ಯಾನ್‌ಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಜು (28) ಕೊಲೆಯಾದ ಮಹಿಳೆ. ಅವರ ಪತಿ, ತಮಿಳುನಾಡಿನ ಪಿನ್ನಲವಾಡಿ ಗ್ರಾಮದ ಧರ್ಮಶೀಲನ್ ಅವರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಜು ಅವರ ತಂದೆ ಪೆರಿಸ್ವಾಮಿ ಅವರು ನೀಡಿದ ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಜ್ಞಾನಭಾರತಿ ಠಾಣೆಯಲ್ಲಿ ಕೊಲೆ ಹಾಗೂ ಆತ್ಮಹತ್ಯೆ ಪ್ರಕರಣ ದಾಖಲಾಗಿದೆ.

ಪರಸ್ಪರ ಪ್ರೀತಿಸಿ ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದ ಧರ್ಮಶೀಲನ್ ಮತ್ತು ಮಂಜು ದಂಪತಿಯು ಪ್ರೆಸ್ ಲೇಔಟ್‌ನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ದುಬೈನಲ್ಲಿ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಧರ್ಮಶೀಲನ್, ಕೆಲವು ತಿಂಗಳ ಹಿಂದೆ ಬೆಂಗಳೂರಿಗೆ ವಾಪಸ್ ಬಂದಿದ್ದರು. ಪತಿ ದುಬೈಗೆ ಹೋದ ನಂತರ ನಗರದಲ್ಲಿಯೇ ನೆಲಸಿದ್ದ ಮಂಜು ಅವರು ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದರು.



ಕೊಲೆಯಾದ ಮಂಜು ಹಾಗೂ ಆತ್ಮಹತ್ಯೆ ಮಾಡಿಕೊಂಡ ಧರ್ಮಶೀಲನ್

'ಧರ್ಮಶೀಲ ಅವರು ದುಬೈನಿಂದ ವಾಪಸ್ ಬಂದು, ಪತ್ನಿಯನ್ನು ತಮಿಳುನಾಡಿನ ಸ್ವಂತ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು. ಹದಿನೈದು ದಿನ ತಮಿಳುನಾಡಿನಲ್ಲಿದ್ದು ದಂಪತಿ ಸುತ್ತಾಟ ನಡೆಸಿದ್ದರು. ಮೂರು ದಿನಗಳ ಹಿಂದೆ ಇಬ್ಬರೂ ಬೆಂಗಳೂರಿಗೆ ವಾಪಸ್ ಬಂದಿದ್ದರು. ಭಾನುವಾರ ರಾತ್ರಿ ಕೊಲೆ ಹಾಗೂ ಆತ್ಮಹತ್ಯೆಯ ಘಟನೆ ನಡೆದಿದೆ ಎಂಬುದಾಗಿ ದೂರು ನೀಡಲಾಗಿದೆ. ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

'ಧರ್ಮಶೀಲನ್ ಅವರು ದುಬೈನಿಂದ ನಗರಕ್ಕೆ ಬಂದ ಮೇಲೆ ಗಾರೆ ಕೆಲಸ ಮಾಡುತ್ತಿದ್ದರು. ಪ್ರತಿನಿತ್ಯ ಪಾನಮತ್ತರಾಗಿ ಮನೆಗೆ ಬಂದು ಪತ್ನಿಯ ಜತೆ ಜಗಳವಾಡುತ್ತಿದ್ದರು. ಪತ್ನಿ ಕೆಲಸಕ್ಕೆ ಹೋಗುವುದು ಧರ್ಮಶೀಲನ್ ಅವರಿಗೆ ಇಷ್ಟವಿರಲಿಲ್ಲ. ಇದೇ ಕಾರಣಕ್ಕೆ ಆತ ಪತ್ನಿಯೊಂದಿಗೆ ಪದೇಪದೇ ಜಗಳ ಮಾಡುತ್ತಿದ್ದರು. ಭಾನುವಾರ ರಾತ್ರಿ ದಂಪತಿ ಜಗಳವಾಡಿದ್ದಾರೆ. ಬಳಿಕ ಜಗಳ ವಿಕೋಪಕ್ಕೆ ತಿರುಗಿ, ಧರ್ಮಶೀಲನ್ ಅಡುಗೆ ಕೋಣೆಯಲ್ಲಿದ್ದ ಚಾಕುವಿನಿಂದ ಪತ್ನಿಯ ಕತ್ತು ಕೊಯ್ದು 50ಕ್ಕೂ ಹೆಚ್ಚು ಬಾರಿ ಇರಿದಿದ್ದರು. ಪತ್ನಿಯ ಸಾವಿನ ಬಳಿಕ ಧರ್ಮಶೀಲನ್ ಅವರು, ಮನೆಯ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬ ಸದಸ್ಯರಿಗೆ ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅನಧಿಕೃತವಾಗಿ ವಾಸಿಸುತ್ತಿದ್ದ ಶ್ರೀಲಂಕಾ ಪ್ರಜೆಗಳು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಅನಧಿಕೃತವಾಗಿ ನೆಲಸಿದ್ದ ಶ್ರೀಲಂಕಾದ ಮೂವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಐರೇಶ್ ಹಸಂಕ ಜಯವರ್ಧನೆ (31), ಸುಗತ್ ಸಮಿಂದು (46), ದಿಲೀಪಾ ಹರೀಶನ್ (35) ಎಂಬುವವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿ ಅನಧಿಕೃತವಾಗಿ ನೆಲಸಿದ್ದವರನ್ನು ವಶಕ್ಕೆ ಪಡೆದುಕೊಳ್ಳಲಾಯಿತು ಎಂದು ಪೊಲೀಸರು ಹೇಳಿದರು.

ಶ್ರೀಲಂಕಾದ ಜಾಫ್ನಾದಿಂದ ದೋಣಿ ಮೂಲಕ ತಮಿಳುನಾಡಿಗೆ ಬಂದಿದ್ದ ಮೂವರು ಅಲ್ಲಿಂದ ರಾಮೇಶ್ವರಂಗೆ ಹೋಗಿದ್ದರು. ಸ್ಥಳೀಯ ವ್ಯಕ್ತಿಯ ಸಹಾಯ ಪಡೆದು ಬೆಂಗಳೂರಿಗೆ ಬಂದು, ದೇವನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ವಾಸವಿದ್ದರು. ಒಂದು ವರ್ಷದಿಂದ ಪಾಸ್‌ಪೋರ್ಟ್ ಮತ್ತು ವೀಸಾ ಇಲ್ಲದೆಯೇ ನಗರದಲ್ಲಿ ನೆಲಸಿದ್ದರು ಎಂದು ಮೂಲಗಳು ಹೇಳಿವೆ.

ವಿದೇಶಿಯರ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಮೂವರು ಡ್ರಗ್ಸ್ ಪೆಡ್ಲಿಂಗ್ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ವಿಧಾನಸೌಧಕ್ಕೆ ಪ್ರವಾಸ ಹೋಗೋಣ ಬನ್ನಿ...

'ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸ' ನಾಲ್ಕು ತಿಂಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಜನರ ಭೇಟಿ

• ಖಲೀಲಅಹ್ಮದ ಶೇಖ

ಬೆಂಗಳೂರು: ವಿಧಾನಸೌಧದ ನಿರ್ಮಾಣ, ಇತಿಹಾಸ, ವಾಸ್ತುಶಿಲ್ಪ, ನಾಯಕರ ಪ್ರತಿಮೆಗಳು, ಶಾಸಕಾಂಗದ ಕಾರ್ಯನಿರ್ವಹಣೆಯ ಮಾಹಿತಿಗಳನ್ನು ನೀಡುವ 'ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸ'ದತ್ತ ಸ್ಥಳೀಯರಲ್ಲದೆ, ಹೊರರಾಜ್ಯ, ವಿದೇಶಿಯರೂ ಹೆಚ್ಚು ಆಕರ್ಷಿತರಾಗಿದ್ದಾರೆ.

ಪ್ರವಾಸೋದ್ಯಮ ಇಲಾಖೆ, ವಿಧಾನಸೌಧದ ಸಚಿವಾಲಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸಹಭಾಗಿತ್ವದಲ್ಲಿ 'ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸ' ನಡೆಯುತ್ತಿದೆ. ಜೂನ್ 1ರಿಂದ ಸೆಪ್ಟೆಂಬರ್ 21ರವರೆಗೆ, ಕನ್ನಡದಲ್ಲಿ 62 ಮತ್ತು ಇಂಗ್ಲಿಷ್‌ನಲ್ಲಿ 94 ತಂಡಗಳಲ್ಲಿ 4,674 ಮಂದಿ ಪ್ರವಾಸ ಕೈಗೊಂಡು, ಸರ್ಕಾರದ ಆಡಳಿತ ಯಂತ್ರದ ಕೇಂದ್ರ ಸ್ಥಾನ ವಿಧಾನಸೌಧದ ಮಾಹಿತಿ ಪಡೆದುಕೊಂಡಿದ್ದಾರೆ.

ಪ್ರವಾಸ ಕೈಗೊಳ್ಳಲು ಬಯಸುವವರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ದಿನ ಮತ್ತು ಸಮಯವನ್ನು ಆಯ್ಕೆ ಮಾಡಿಕೊಂಡು, ವೈಯಕ್ತಿಕ ವಿವರದ ದಾಖಲೆಗಳನ್ನು ಅಪ್‌ಲೋಡ್ ಮಾಡಿ, ಪ್ರವೇಶ ಶುಲ್ಕವನ್ನು ಪಾವತಿಸಬೇಕು. ಪ್ರವಾಸಕ್ಕೂ ಮುನ್ನ, ಈ ದಾಖಲೆಗಳನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿ, ಪ್ರವೇಶಕ್ಕೆ ಅವಕಾಶ ನೀಡುತ್ತಾರೆ.

'ಪ್ರತಿ ಭಾನುವಾರ, ತಿಂಗಳ ಎರಡನೇ ಹಾಗೂ ನಾಲ್ಕನೇ ಶನಿವಾರ ಮಾರ್ಗದರ್ಶಿ ಪ್ರವಾಸ ಇರುತ್ತದೆ. ದಿನಕ್ಕೆ ಎಂಟು ತಂಡಗಳಿಗೆ (ಒಂದು ತಂಡದಲ್ಲಿ 30 ಮಂದಿ) ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮಾಹಿತಿ ನೀಡಲಾಗುತ್ತದೆ. ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತ ಪ್ರವೇಶ. ಈ ಪ್ರವಾಸಿ ಮಾರ್ಗದರ್ಶಿಗೆ ಐಟಿ ಕಂಪನಿಗಳ ಉದ್ಯೋಗಿಗಳು, ಹೊರ ರಾಜ್ಯ ಹಾಗೂ ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ' ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ) ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

'ವಿಧಾನಸೌಧ ಬಲ ಭಾಗದಲ್ಲಿರುವ ಗಾಂಧೀಜಿ ಪ್ರತಿಮೆಯ ಸಮೀಪದಿಂದ ಪ್ರವಾಸ ಆರಂಭ ಆಗಲಿದೆ. ಅಲ್ಲಿಂದ ವಿಧಾನಸೌಧ ನಿರ್ಮಾಣದ ಶಂಕು ಸ್ಥಾಪನೆಯ ಶಿಲಾಫಲಕ, ವಿಧಾನಸೌಧದ ಶ್ರೀಗಂಧದ ಮಾದರಿ ವೀಕ್ಷಣೆಗೆ ಅವಕಾಶವಿದೆ. ಬ್ಯಾಂಕ್ವೆಟ್ ಸಭಾಂಗಣ ನೋಡಬಹುದು. ವಿಧಾನಸಭೆ ಅಧ್ಯಕ್ಷರ ಗ್ಯಾಲರಿಗೆ ಪ್ರವೇಶ, ಸಭೆಯ ನಡಾವಳಿಗಳ ಬಗ್ಗೆ ಮಾರ್ಷಲ್‌ಗಳು ವಿವರಣೆ ನೀಡುವರು' ಎಂದು ಮಾರ್ಗದರ್ಶಕ ಜೆ. ಜ್ಞಾನೇಶ್ ಕುಮಾರ್ ಹೇಳಿದರು.

'ವಿಧಾನ ಪರಿಷತ್ ಪ್ರವೇಶ ದ್ವಾರದ ಬಳಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ 1890ರ ದಶಕದಿಂದ ವಿವಿಧ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸಿ, ವಿಧಾನಸೌಧದವರೆಗೆ ನಡೆದು ಬಂದ ಹಾದಿಯನ್ನು ವಿವರಿಸುವ ಚಿತ್ರಗಳ ಬಗ್ಗೆ ವಿವರಣೆ ನೀಡಲಾಗುತ್ತದೆ. ಅಲ್ಲಿಂದ ಸೆಂಟ್ರಲ್ ಹಾಲ್, ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ, ಗುಲಾಬಿ ಉದ್ಯಾನ, ವಿಧಾನಸೌಧದ ಭವ್ಯ ಮೆಟ್ಟಿಲುಗಳಲ್ಲಿ ಪ್ರವಾಸ ಕೊನೆಗೊಳ್ಳುತ್ತದೆ' ಎಂದರು.



ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಇಲ್ಲಿನ ವಿಶೇಷಗಳ ಬಗ್ಗೆ ಮಾರ್ಗದರ್ಶಕರು ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿದ್ದಾರೆ

ಪ್ರಶಾಂತ್ ಕುಮಾರ್ ಮಿಶ್ರಾ, ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ


ನೋಂದಣಿ ಹೇಗೆ?

ಕೆಎಸ್‌ಟಿಡಿಸಿಯ www.kstdc.co ವೆಬ್‌ಸೈಟ್‌ನಲ್ಲಿ ಆಸಕ್ತರು ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ: 080-4334 4334,08970650070 ಸಂಪರ್ಕಿಸಬಹುದು. ಟಿಕೆಟ್ ಕಾಯ್ದಿರಿಸಿದವರು, ಖರೀದಿಸಿದವರು ಆಧಾರ್ ಕಾರ್ಡ್ ತೋರಿಸುವುದು ಕಡ್ಡಾಯ. ಕೆಎಸ್‌ಟಿಡಿಸಿ, ವಿಧಾನಸೌಧದ ಭದ್ರತಾ ಸಿಬ್ಬಂದಿ ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಅಧಿಕಾರಿಗಳು ತಿಳಿಸಿದರು.



'ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸ'ದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರಿಗೆ ಮಾರ್ಗದರ್ಶಿ ವಿವರಣೆ ನೀಡಿದರು — ಚಿತ್ರ: ರಂಜು ಪಿ.

90 ನಿಮಿಷ	1.5 ಕಿ.ಮೀ.	₹50	15 ವರ್ಷಕ್ಕಿಂತ	30	10 ಮಂದಿ
ಪ್ರವಾಸದ ಅವಧಿ	ಪ್ರವಾಸದ ವೇಳೆ ಕ್ರಮಿಸಬೇಕಾದ ದೂರ	ವಯಸ್ಕರಿಗೆ ಟಿಕೆಟ್ ದರ	ಕಡಿಮೆ ವಯಸ್ಸಿನ ಮಕ್ಕಳಿಗೆ ಉಚಿತ ಪ್ರವೇಶ	ಪ್ರತಿ ತಂಡದ ಪ್ರವಾಸಿಗರ ಸಂಖ್ಯೆ	ಮಾರ್ಗದರ್ಶಕರು



1. ಗಾಂಧಿ ಪ್ರತಿಮೆ
2. ವಿಧಾನಸೌಧ ನಿರ್ಮಾಣಕ್ಕೆ ಹಾಕಿದ ಅಡಿಗಲ್ಲು
3. ಬ್ಯಾಂಕ್ವೆಟ್ ಹಾಲ್
4. ಸೆಂಟ್ರಲ್ ಹಾಲ್
5. ವಿಧಾನಸಭೆಯ ಸಭಾಂಗಣ
6. ಕಾರಿಡಾರ್ಸ್ ಆಫ್ ಪವರ್ಸ್
7. ವಿಧಾನ ಪರಿಷತ್ತು
8. ಅರಳಿ ಮುನೀಶ್ವರ ದೇವಸ್ಥಾನ
9. ಮೈಸೂರು ಬಾಗಿಲು
10. ಕೆಂಗಲ್ ಹನುಮಂತಯ್ಯ ಪ್ರತಿಮೆ
11. ಇತರೆ ಪ್ರತಿಮೆಗಳು
12. ಟೆರೇಸ್ ಗಾರ್ಡನ್ಸ್-ವಾಸ್ತುಶಿಲ್ಪ
13. ಟೆರೇಸ್ ಗಾರ್ಡನ್ಸ್- ಪಾರ್ಲಿಮೆಂಟರಿ ಟೌನ್
14. ವಿಧಾನಸೌಧದ ವಾಸ್ತುಶಿಲ್ಪ
15. ವಿಧಾನಸೌಧದ ಬೃಹತ್ ಮೆಟ್ಟಿಲು

ಸಾರ್ವಜನಿಕರು ಏನಂತಾರೆ?



ವಿಧಾನಸೌಧಕ್ಕೆ ಸಾರ್ವಜನಿಕರ ಪ್ರವೇಶ ನಿಷೇಧವಿತ್ತು. ಈಗ ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸದ ಮೂಲಕ ನಾಗರಿಕರಿಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸಿರುವ ನಿರ್ಧಾರ ಶ್ಲಾಘನೀಯ. ಪ್ರತಿಯೊಬ್ಬರೂ ವಿಧಾನಸೌಧವನ್ನು ಹತ್ತಿರದಿಂದ ಕಣ್ತುಂಬಿಕೊಳ್ಳಬಹುದು.

ಮೋಹನ್ ಅಡಿಗ್, ಸುಮನಹಳ್ಳಿ



ಮಾರ್ಗದರ್ಶಿ ಪ್ರವಾಸಿ ನಡಿಗೆಯ ಮೂಲಕ ವಿಧಾನಸೌಧಕ್ಕೆ ಪ್ರವೇಶ ಕಲ್ಪಿಸಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಇಲ್ಲಿ ರಾಜಕೀಯ ನಾಯಕರು ಹೇಗೆ ಕಾರ್ಯನಿರ್ವಹಿಸುತ್ತಾರೆ, ಈ ಕಟ್ಟಡ ನಿರ್ಮಾಣದ ಇತಿಹಾಸ, ವಾಸ್ತುಶಿಲ್ಪದ ಮಾಹಿತಿ ತಿಳಿದುಕೊಳ್ಳಲು ಸಹಾಯಕವಾಗಿದೆ

ಗೀತಾ, ಅಂಜನಾಪುರ



ವಿಧಾನಸೌಧಕ್ಕೆ ಮೊದಲ ಬಾರಿಗೆ ಭೇಟಿ ನೀಡುತ್ತಿದ್ದೇನೆ. ವಿಧಾನಸಭೆಯ ಕಾರ್ಯಕಲಾಪಗಳು ನಡೆಯುವ ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುವ ಕಾರ್ಯವೈಖರಿಯ ಬಗೆಯನ್ನು ತಿಳಿದುಕೊಂಡಿದ್ದೇನೆ. ಶಾಲಾ-ಕಾಲೇಜುಗಳ ಮಕ್ಕಳನ್ನು ಇಲ್ಲಿಗೆ ಕರೆದುಕೊಂಡು ಬರಬೇಕು.

ಅಶ್ವಿನಿ, ನಾಗರಬಾವಿ



ಹೊಸಕೆರೆ ಕೆರೆಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಎಸ್.ಟಿ.ಸೋಮಶೇಖರ್

'ಕೆರೆಗೆ ತ್ಯಾಜ್ಯ, ಒಳಚರಂಡಿ ನೀರು ಬಿಡಬೇಡಿ'

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ರಾಜರಾಜೇಶ್ವರಿ ನಗರ: ಗಾಂಧಿನಗರ ಹೊಸಕೆರೆಯಲ್ಲಿ ಪ್ಲಾಸ್ಟಿಕ್, ಆಸ್ಪತ್ರೆಗಳ ವಿಷಪೂರಿತ ತ್ಯಾಜ್ಯ, ಬೃಹತ್ ನೀರುಗಾಲುವೆ ಮೂಲಕ ಒಳಚರಂಡಿ ನೀರು ಕೆರೆಗೆ ಸೇರುತ್ತಿರುವುದಕ್ಕೆ ಶಾಸಕ ಎಸ್.ಟಿ. ಸೋಮಶೇಖರ್ ಅಸಮಾಧಾನ ವ್ಯಕ್ತಪಡಿಸಿದರು.

'ಹೊಸಕೆರೆ ಕೆರೆಯ ಒಡಲಿಗೆ ತ್ಯಾಜ್ಯ' ಶೀರ್ಷಿಕೆಯಲ್ಲಿ 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾದ ಬೆನ್ನಲ್ಲೇ ಅವರು ನಗರ ಪಾಲಿಕೆ ಅಧಿಕಾರಿಗಳ ಜೊತೆಯಲ್ಲಿ ಸ್ಥಳಕ್ಕೆ ಭೇಟಿನೀಡಿ ಕೆರೆಯನ್ನು ಪರಿಶೀಲಿಸಿದರು.

'ಕೆರೆ ಅಂಗಳ ಒತ್ತುವರಿ ತೆರವುಗೊಳಿಸಬೇಕು. ಮಳೆ ಬಂದಾಗ ಸಣ್ಣ ಪ್ರಮಾಣದಲ್ಲಿಯೂ ಕೆರೆಗೆ ಒಳಚರಂಡಿ ನೀರು ಬರದಂತೆ ತಪ್ಪಿಸಬೇಕು. ಒಳಚರಂಡಿ ನೀರು ಸಂಸ್ಕರಣೆ ಮಾಡಲು ಜಾಗವನ್ನು ಗುರುತಿಸಿ. ಕೆರೆಯ ಸಮಗ್ರ ಅಭಿವೃದ್ಧಿಗೆ ಅಗತ್ಯ ಅನುದಾನವನ್ನು ಸರ್ಕಾರದಿಂದ ಒದಗಿಸುತ್ತೇನೆ' ಎಂದು ಸೂಚಿಸಿದರು.

'ಕೆರೆಯಲ್ಲಿರುವ ಪ್ಲಾಸ್ಟಿಕ್, ತ್ಯಾಜ್ಯವನ್ನು ತೆರವುಗೊಳಿಸಲಾಗುತ್ತಿದೆ. ಬೃಹತ್ ನೀರುಗಾಲುವೆಗೆ ಆಸ್ಪತ್ರೆಗಳ ತ್ಯಾಜ್ಯ, ಕೋಳಿ, ಮೇಕೆ, ಕುರಿ ತ್ಯಾಜ್ಯ ಸುರಿಯುವುದರಿಂದ ಮಳೆ ಬಂದಾಗ ಕೆರೆಗೆ ಸೇರುತ್ತಿದೆ. ಅದನ್ನು ತಡೆಯಲು ಕೆರೆಯ ಮೇಲ್ಭಾಗದಲ್ಲಿ ಜಾಲರಿ ಅಳವಡಿಸಲಾಗುವುದು' ಎಂದು ಕೆರೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎಲ್.ಗೀತಾ ಮಾಹಿತಿ ನೀಡಿದರು.

'ಕಾಲುವೆಗೆ ಒಳಚರಂಡಿ ನೀರು ಸೇರುವುದನ್ನು ತಪ್ಪಿಸುವಂತೆ ಬೆಂಗಳೂರು ಜಲಮಂಡಳಿ ಅಧಿಕಾರಿಗಳಿಗೆ ಪತ್ರ ಬರೆಯಲಾಗುವುದು' ಎಂದು ಬೃಹತ್ ನೀರುಗಾಲುವೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪರಮೇಶ್ ತಿಳಿಸಿದರು.

'ಶೋಭಾ ಕರಂದ್ಲಾಜೆ ಅವರನ್ನು ಕರೆತನ್ನಿ'

'ಕೆರೆ ಹಾಗೂ ಸರ್ಕಾರಿ ಭೂ ಸಂರಕ್ಷಣಾ ಸಮಿತಿ ಅಡಿಯಲ್ಲಿ ಕೆರೆ ಉಳಿಸಿ, ಸರ್ಕಾರಿ ಭೂಮಿ ರಕ್ಷಿಸಿ ಎಂದು ಹೇಳುತ್ತಲೇ ಕೆರೆ ಅಂಗಳದಲ್ಲಿ ಗಣೇಶನ ದೇವಸ್ಥಾನ ನಿರ್ಮಾಣ ಮಾಡಲಾಗಿದೆ. ಸಮಿತಿಯ ಕದರಪ್ಪ ಅವರಿಗೆ ದೇವಸ್ಥಾನ ನಿರ್ಮಿಸಲು ಅನುಮತಿ ನೀಡಿದವರು ಯಾರು? ಇಲ್ಲಿ ದೇವಸ್ಥಾನ, ಸಮುದಾಯ ಭವನ ಸ್ವಂತ ಆಸ್ತಿಯನ್ನಾಗಿ ಮಾಡಿಕೊಳ್ಳಲು ಇದೇ ದಾರಿಯಾಗಲಿದೆ. ಕೇಂದ್ರ ಸಚಿವೆ ಶೋಭಾಕರಂದ್ಲಾಜೆ ಅವರನ್ನು ಕರೆದುಕೊಂಡು ಬಂದು ಕೆರೆ ತೋರಿಸಿ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿಸಿ' ಎಂದು ಸೋಮಶೇಖರ್ ಸೂಚಿಸಿದರು.

'ಕಸಾಪ: ತನಿಖೆ ಮುಂದುವರಿಸಬಹುದು'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಅಕ್ಟೋಬರ್ 5ಕ್ಕೆ ವಾರ್ಷಿಕ ಸಾಮಾನ್ಯ ಸಭೆ ನಡೆಸುವುದಾದರೆ ಪರಿಷತ್ತಿನ ಅವ್ಯವಹಾರಗಳ ಸಂಬಂಧ ಬಾಕಿ ಇರುವ ತನಿಖೆ ಮುಂದುವರಿಯಬಹುದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ–1960ರ ಕಲಂ 27ಎ ಅಡಿ ತನಿಖೆಯಲ್ಲಿ ಭಾಗವಹಿಸುವಂತೆ ಸಹಕಾರ ಇಲಾಖೆ ಇದೇ 15ರಂದು ಜಾರಿ ಮಾಡಿರುವ ನೋಟಿಸ್‌ಗೆ ತಡೆ ನೀಡಬೇಕು' ಎಂದು ಕೋರಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಮತ್ತು ಇತರೆ ನಾಲ್ವರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕನ್ನಡ ಸಾಹಿತ್ಯ ಪರಿಷತ್ತು 2025ರ ಅಕ್ಟೋಬರ್ 5ರಂದು ವಾರ್ಷಿಕ ಸಾಮಾನ್ಯ ಸಭೆ ನಡೆಸುವುದಾದರೆ ಪರಿಷತ್ತಿನ ಅವ್ಯವಹಾರಗಳ ಸಂಬಂಧ ಬಾಕಿ ಇರುವ ತನಿಖೆ ಮುಂದುವರಿಯ-ಬಹುದು. ಆದರೆ, ಉಭಯ ಪ್ರಕ್ರಿಯೆಗಳ ನಿರ್ಧಾರಗಳನ್ನು ಜಾರಿಗೊಳಿಸುವುದಕ್ಕೂ ಮುನ್ನ ನ್ಯಾಯಾಲಯದ ಮುಂದೆ ಇರಿಸಬೇಕು' ಎಂದು ನ್ಯಾಯಪೀಠವು ಆದೇಶದಲ್ಲಿ ವಿವರಿಸಿದೆ.

'ಕಲಂ 25ರ ಅಡಿಯ ತನಿಖೆಯ ಫಲಿತಾಂಶ ಮತ್ತು ಕಾಯ್ದೆಯ ಕಲಂ 27ಎ ತನಿಖೆಗೆ ಕಾರಣವಾಗಿರುವುದು ಮತ್ತು ವಾರ್ಷಿಕ ಸಾಮಾನ್ಯ ಸಭೆ ನಡೆದು ಅಲ್ಲಿ ಯಾವುದೇ ನಿರ್ಣಯವಾದರೂ ಅದು ಈ ನ್ಯಾಯಾಲಯದ ಪರಿಶೀಲನೆಗೆ ಒಳಪಡಲಿದೆ' ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ಅವರು, 'ಕಸಾಪದ ಅಕ್ರಮಗಳಿಗೆ ಸಂಬಂಧಿಸಿದ ತನಿಖೆಗೆ ಹಾಜರಾಗಲು ಅಧ್ಯಕ್ಷ ಜೋಶಿ ಅವರಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಯಾವುದೇ ಪ್ರಕ್ರಿಯೆ ನಡೆದಿಲ್ಲ. ಮುಂದಿನ ದಿನಾಂಕವನ್ನೂ ನಿಗದಿಪಡಿಸಿಲ್ಲ. ಸಮನ್ವಯ ನ್ಯಾಯಪೀಠವು ಈ ಹಿಂದೆ ಬೈ-ಲಾ ಪ್ರಕಾರ ವಾರ್ಷಿಕ ಸಾಮಾನ್ಯ ಸಭೆ ನಡೆಸಲು ಕಸಾಪಗೆ ಅನುಮತಿ ನೀಡಿದೆ. ಅಂತೆಯೇ, ಕಾಯ್ದೆಯ ಕಲಂ 25ರ ಅನ್ವಯ ಅಕ್ರಮಗಳ ಆರೋಪದ ತನಿಖೆಗೂ ಅನುಮತಿ ನೀಡಿತ್ತು. ಏಕಸದಸ್ಯ ನ್ಯಾಯಪೀಠದ ಈ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು. ಆದರೆ, ವಿಭಾಗೀಯ ನ್ಯಾಯಪೀಠ ಇದನ್ನು ವಜಾಗೊಳಿಸಿದೆ' ಎಂದರು.

'ವಿಭಾಗೀಯ ನ್ಯಾಯಪೀಠವು ಮಧ್ಯಂತರ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದ ಕಾರಣ ಕಸಾಪ ಲೆಕ್ಕಪತ್ರ ಸಲ್ಲಿಸಿದೆ. ಸಹಕಾರ ಸೊಸೈಟಿಗಳ ಉಪ ನಿಬಂಧಕರು ಮಧ್ಯಂತರ ವರದಿಯನ್ನು ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಅವರಿಗೆ ಸಲ್ಲಿಸಿದ್ದರು. ಇದು ಕಾಯ್ದೆಯ ಕಲಂ 27ಎ ಅಡಿ ತನಿಖೆಗೆ ಅವಕಾಶ ಕಲ್ಪಿಸಿದೆ. ಇದರಿಂದ ಸೊಸೈಟಿಯ ಕಾರ್ಯ ಚಟುವಟಿಕೆಗಳನ್ನು ನಿಭಾಯಿಸಲು ಆಡಳಿತಾಧಿಕಾರಿ ನೇಮಿಸುವ ಸಾಧ್ಯತೆ ಇದೆ. ಹಾಗಾಗಿ, ನೋಟಿಸ್‌ಗೆ ತಡೆ ನೀಡಬೇಕು' ಎಂದು ಮನವಿ ಮಾಡಿದ್ದರು.

ಇದಕ್ಕೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿ.ಜಿ.ಭಾನು ಪ್ರಕಾಶ್ ಅವರು, 'ಅಕ್ಟೋಬರ್ 5ರಂದು ನಡೆಸಲು ಉದ್ದೇಶಿಸಿರುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಸಾಪ ನಿರ್ಣಯ ಕೈಗೊಂಡರೆ ತನಿಖೆ ಅನೂರ್ಜಿತವಾಗಲಿದೆ. ಆದ್ದರಿಂದ, ಕಾಯ್ದೆಯ ಕಲಂ 27ಎ ಅಡಿ ತನಿಖೆಗೆ ನ್ಯಾಯಾಲಯ ಅನುಮತಿ ನೀಡಬೇಕು' ಎಂದು ಮನವಿ ಮಾಡಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ 2023-24ನೇ ಸಾಲಿನ ಆರ್ಥಿಕ ವಹಿವಾಟಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖೆಗೆ ತಡೆ ನೀಡಲು ಹೈಕೋರ್ಟ್ 2025ರ ಜುಲೈ 26ರಂದು ಸ್ಪಷ್ಟವಾಗಿ ನಿರಾಕರಿಸಿತ್ತು.

ಶಾಲಾ ಮಾನ್ಯತೆ: ಅಲ್ಪಸಂಖ್ಯಾತ ಇಲಾಖೆಗೆ ನಿರ್ದೇಶನ

'ಮದರಸಾ ವತಿಯಿಂದ ಬೆಂಗಳೂರು ನಗರದಲ್ಲಿ ನಡೆಸಲಾಗುತ್ತಿರುವ ಶಾಲೆಯೊಂದರ ಮಾನ್ಯತೆಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗೆ ಅರ್ಜಿದಾರರು ಸಲ್ಲಿಸಿರುವ ಮನವಿ ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ನಾಯಂಡಹಳ್ಳಿಯ ಅಬ್ದುಲ್ ಹಮೀದ್ ಪಾಷ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಈ ಪ್ರಕರಣದಲ್ಲಿ ಅರ್ಜಿದಾರರ ಆರೋಪಗಳ ಸತ್ಯಾಸತ್ಯತೆ ಕುರಿತು ನ್ಯಾಯಾಲಯ ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ. ಆದಾಗ್ಯೂ, ಅರ್ಜಿದಾರರು 2025ರ ಜನವರಿ 25ರಂದು ಬೆಂಗಳೂರಿನ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗೆ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

ಹಳದಿ ಮಾರ್ಗ: ನಗರಕ್ಕೆ ಮೂರು ಬೋಗಿ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಐದನೇ ರೈಲಿನ ಮೂರು ಬೋಗಿಗಳು ಸೋಮವಾರ ಬೆಂಗಳೂರಿಗೆ ತಲುಪಿವೆ. ಇನ್ನು ಮೂರು ಬೋಗಿಗಳು ಎರಡು ದಿನಗಳಲ್ಲಿ ತಲುಪಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಿಂದ ಐದನೇ ರೈಲು ಕೋಚ್‌ಗಳು ರವಾನೆಯಾಗಿದ್ದವು. ತಲುಪಿರುವ ಮೂರು ಬೋಗಿಗಳನ್ನು ಹೆಬ್ಬಗೋಡಿಯಲ್ಲಿರುವ ನಮ್ಮ ಮೆಟ್ರೊ ಡಿಪೊದಲ್ಲಿ ಇರಿಸಲಾಗಿದೆ. ಇನ್ನೂ 3 ಬೋಗಿ ತಲುಪಿದ ಬಳಿಕ ಅವುಗಳನ್ನು ಜೋಡಿಸಲಾಗುವುದು. ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಸ್ಥಿರ ಪರೀಕ್ಷೆಗಳು ನಡೆಯಲಿವೆ. ಬಳಿಕ 2 ವಾರ, ವಾಣಿಜ್ಯ ಮಾರ್ಗದಲ್ಲಿ ರಾತ್ರಿ ವೇಳೆ ಪರೀಕ್ಷೆಗಳು ನಡೆಯಲಿವೆ. ಆ ನಂತರ ನಾಗರಿಕರ ಸಂಚಾರಕ್ಕೆ ಲಭ್ಯವಾಗಲಿದೆ ಎಂದಿದ್ದಾರೆ.

ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಎ.ಹರೀಶ್ ಬಿನ್ ಸಿ.ವಿ.ಆದಿನಾರಾಯಣ, ವಾಸ: ನಂ.15, ಶ್ರೀನಿವಾಸ ನಿಲಯ, 3ನೇ ಮಹಡಿ, ಬೆಮಲ್ ಲೇಔಟ್, 5ನೇ ಹಂತ, ರಾಜರಾಜೇಶ್ವರಿನಗರ, ಬೆಂಗಳೂರು ಇಲ್ಲಿ ವಾಸಿಸುತ್ತಿದ್ದಾರೆ. ಅವರು ಈ ಕೆಳಗೆ ತಿಳಿಸಲಾದ ಆಸ್ತಿಯನ್ನು ಅದರ ಕಾನೂನುಬದ್ಧ ಮಾಲೀಕರಾದ ಶ್ರೀಮತಿ ನಾಗರಾಜ್‌ಶ್ರೀ ಮೋಹನ್ ರಾವ್ ಬಿನ್ ಮೀನಾಕ್ಷಿ ಮೋಹನರಾವ್ ಅವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಶ್ರೀಮತಿ ನಾಗರಾಜ ಶ್ರೀ ಮೋಹನ್‌ರಾವ್‌ರವರು ಕೆಳಕಂಡ ಆಸ್ತಿಯ ಮಾಲೀಕರಾಗಿದ್ದು, ಕೆಳಕಂಡ ಆಸ್ತಿಯನ್ನು ಅವರು ದಿನಾಂಕ: 31/08/1989, ನೋಂದಣಿ ಸಂಖ್ಯೆ: 1517/1989–90, ಸಂಪುಟ, 29, ಪುಟಗಳು 13 ರಿಂದ 19, ಪುಸ್ತಕ ಸಂಖ್ಯೆ 1ರ ನೋಂದಣಿ ಕೆಂಗೇರಿ ಉಪನೋಂದಣಿ ಕಛೇರಿಯ ಪತ್ರದಡಿಯಲ್ಲಿ ಖರೀದಿಸಿದ್ದಾರೆ. ಯಾವುದೇ ವ್ಯಕ್ತಿ / ವ್ಯಕಿಗಳು, ಯಾವುದೇ ರೀತಿಯ ಹಕ್ಕುಗಳು, ಪ್ರತಿಕೂಲ ಹಕ್ಕು ಅಥವಾ ಆಕ್ಷೇಪಣೆಗಳನ್ನು ಹೊಂದಿದ್ದರೆ ಈ ಸೂಚನೆಯ ದಿನಾಂಕದಿಂದ 7 ದಿನಗಳ ಒಳಗೆ ಕೆಳಗೆ ತಿಳಿಸಲಾದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆರೋಪಗಳು ಅಥವಾ ಹಕ್ಕುಗಳಿಲ್ಲ ಎಂದು ಅರ್ಥೈಸಲಾಗುತದೆ.

ಆಸ್ತಿಯ ವಿವರ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಚೇನಹಳ್ಳಿಯ ಐಡಿಯಲ್ ಹೋಮ್ಸ್ ಪ್ರಾಜೆಕ್ಟ್ ಟೌನ್‌ಶಿಪ್‌ನ ಸೆಕ್ಟರ್ ನಂ. ಜಿಯಲ್ಲಿರುವ ಸೈಟ್ ನಂ.276, ಹಂತ–2 ಹೊಂದಿರುವ ಆಸ್ತಿಯು ಐಡಿಯಲ್ ಹೋಮ್ಸ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ ಈಗ ಹೊಸ ಇಪಿಐಡಿ ಸಂಖ್ಯೆ 8687172976, ಆಸ್ತಿ ಸಂಖ್ಯೆ 940/276/932/883, ಬಿ.ಬಿ.ಎಂ.ಪಿ, ಹೆಚ್.ಬಿ.ಸಿ.ಎಸ್ ಐಡಿಯಲ್ ಹೋಮ್ಸ್ ಲೇಔಟ್, 4ನೇ ಕ್ರಾಸ್, ಸ್ಪರ್ಶ ಆಸ್ಪತ್ರೆ ಎದುರು, ವಾರ್ಡ್ ಸಂಖ್ಯೆ 160, ರಾಜರಾಜೇಶ್ವರಿನಗರ, ಬೆಂಗಳೂರು, **ಪೂರ್ವಕ್ಕೆ**– ಸೈಟ್ ಸಂಖ್ಯೆ 275, **ಪಶ್ಚಿಮಕ್ಕೆ**–ಸೈಟ್ ಸಂಖ್ಯೆ 277, **ಉತ್ತರಕ್ಕೆ**–ಖಾಸಗಿ ಭೂಮಿ, **ದಕ್ಷಿಣಕ್ಕೆ**–ಕ್ರಾಸ್ ರಸ್ತೆ.

ಸಿ.ಎಂ.ನಿರಂಜನಸ್ವಾಮಿ, ವಕೀಲರು, 2ನೇ ಅಡ್ಡ ರಸ್ತೆ, ಗೌರಿಪೇಟೆ, ಕೋಲಾರ. ಮೊ:9448402783
ಸ್ಥಳ: ಕೋಲಾರ, ದಿನಾಂಕ: 29–09–2025

ಮಹಾರಾಣಿ ಕ್ಲಸ್ಟರ್ ವಿವಿ ಘಟಿಕೋತ್ಸವ ಅ.3ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ 2ನೇ ಮತ್ತು 3ನೇ ಘಟಿಕೋತ್ಸವ ಅಕ್ಟೋಬರ್ 3ರಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಟಿ.ಎಂ. ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಟಿ ಭಾರತಿ ವಿಷ್ಣುವರ್ಧನ್, ಹೋಮಿಯೋಪಥಿ ವೈದ್ಯ ಡಾ. ಬಿ.ಟಿ. ರುದ್ರೇಶ್, ಶಿಕ್ಷಣ ತಜ್ಞೆ ಎಚ್.ಎನ್. ಉಷಾ, ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ, ಮಾನವ ಹಕ್ಕುಗಳ ಹೋರಾಟಗಾರ್ತಿ ದು. ಸರಸ್ವತಿ, ಕ್ರಿಕೆಟ್ ಪಟು ವೇದಾ ಕೃಷ್ಣಮೂರ್ತಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

2023–24ನೇ ಬ್ಯಾಚ್‌ಗೆ ಸಂಬಂಧಿಸಿದಂತೆ 1,346 ವಿದ್ಯಾರ್ಥಿಗಳು ಪದವಿ, 481 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪದವಿಯಲ್ಲಿ 28 ವಿದ್ಯಾರ್ಥಿಗಳು ರ್‍ಯಾಂಕ್, 6 ವಿದ್ಯಾರ್ಥಿಗಳು ಚಿನ್ನ ಮತ್ತು ಸ್ನಾತಕೋತ್ತರ ಪದವಿಯಲ್ಲಿ 23 ವಿದ್ಯಾರ್ಥಿಗಳು ರ್‍ಯಾಂಕ್, 18 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದಿದ್ದು, ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು.

2024–25ನೇ ಬ್ಯಾಚ್‌ಗೆ ಸಂಬಂಧಿಸಿದಂತೆ 1,209 ವಿದ್ಯಾರ್ಥಿಗಳು ಪದವಿ, 537 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪದವಿಯಲ್ಲಿ 30 ವಿದ್ಯಾರ್ಥಿಗಳು ರ್‍ಯಾಂಕ್, 10 ವಿದ್ಯಾರ್ಥಿಗಳು ಚಿನ್ನ ಮತ್ತು ಸ್ನಾತಕೋತ್ತರ ಪದವಿಯಲ್ಲಿ 26 ವಿದ್ಯಾರ್ಥಿಗಳು ರ್‍ಯಾಂಕ್, 18 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆಯಲು ಅರ್ಹರಾಗಿದ್ದಾರೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಭಾಗವಹಿಸಲಿದ್ದಾರೆ. ಮಾಜಿ ಕುಲಪತಿ ಸಬಿಹಾ ಭೂಮಿಗೌಡ ಘಟಿಕೋತ್ಸವ ಭಾಷಣ ನೀಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ (ಮೌಲ್ಯಮಾಪನ) ಎಸ್. ಸತೀಶ್ ಉಪಸ್ಥಿತರಿದ್ದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಿಧಿವಶ



ಶ್ರೀಯುತ ಆರ್. ಮಹೇಶ್ವರಪ್ಪನವರು
ರಾಜ್ಯ ಲೆಕ್ಕಪತ್ರ ಇಲಾಖೆಯ ಅಪರ-ನಿಯಂತ್ರಕರು (ನಿ)
ಜನನ: 01.06.1954
ಇವರು ದಿನಾಂಕ: 29.09.2025ರಂದು ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆನ್ನು ದಿನಾಂಕ: 30.09.2025 ಮಂಗಳವಾರ ಮಧ್ಯಾಹ್ನ 2.00 ಗಂಟೆಗೆ ಬೆಂಗಳೂರಿನ ಕನ್ನಹಳ್ಳಿ ವೀರಶೈವ ರುದ್ರಭೂಮಿಯಲ್ಲಿ ನಡೆಸಲಾಗುವುದು.
ದುಃಖತಪ್ತರು: ಧರ್ಮಪತ್ನಿ–ಶ್ರೀಮತಿ ಸರೋಜ ಮಹೇಶ್ವರಪ್ಪ ಮತ್ತು ಮಕ್ಕಳು ಆರ್. ಸಿದ್ದರಾಮಪ್ಪನವರು, ನಿವೃತ್ತ ಸಹಾಯಕ ನಿರ್ದೇಶಕರು, ವಾಣಿಜ್ಯ & ಕೈಗಾರಿಕಾ ಇಲಾಖೆ, ಬೆಂಗಳೂರು. ಆರ್. ರೇವಣಸಿದ್ಧಪ್ಪನವರು, ಆನೆಕೊಂಡ, ರಾಮಗಿರಿ ವಂಶಸ್ಥರು, ಆನೆಕೊಂಡ ಹಾಗೂ ಬಂಧು-ಮಿತ್ರರು.

ತಥಾಗತ್ ವಾಕಥಾನ್‌ನಲ್ಲಿ ಭಾಗವಹಿಸಿದ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ

ಹೃದಯಕ್ಕಾಗಿ ಮಿಡಿದ ಮನಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಹೃದಯ ದಿನದ ಅಂಗವಾಗಿ ರಾಜಾಜಿನಗರದ ಸೇಂಟ್ ಥೆರೆಸಾ ತಥಾಗತ್ ಹಾರ್ಟ್ ಕೇರ್ ಸೆಂಟರ್ ಸೋಮವಾರ ವಾಕಥಾನ್ ಆಯೋಜಿಸಿತ್ತು.

'ಆರೋಗ್ಯವಂತ ಹೃದಯಕ್ಕಾಗಿ ನಾಲ್ಕು ಹೆಜ್ಜೆ' ಎಂಬ ಧ್ಯೇಯದ ವಾಕಥಾನ್‌ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ವಾಕಥಾನ್‌ನಲ್ಲಿ ವಿವಿಧ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳು, ಸಂಘ, ಸಂಸ್ಥೆಯ ಪ್ರತಿನಿಧಿಗಳು, ಸಾರ್ವಜನಿಕರು, ಯುವ ಜನಾಂಗ ಮತ್ತು ಆಸ್ಪತ್ರೆಯ ಸಿಬ್ಬಂದಿ ಸೇರಿ ನೂರಾರು ಮಂದಿ ಹೆಜ್ಜೆ ಹಾಕಿದರು.

ಸಹಾರ ಸಮೂಹದ ಮುಖ್ಯಸ್ಥ ಸುಬ್ರತಾ ರಾಯ್ ಅವರ ನಿಧನದ ಬಳಿಕ ಹೂಡಿಕೆದಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಮನವಿ ಮಾಡಲಾಗುತ್ತಿದೆ ಎಂದೂ ಅರ್ಜಿಯಲ್ಲಿ ಹೇಳಿದೆ.

ಬ್ರಿಟನ್, ಅಮೆರಿಕದಲ್ಲಿ 'ವಿಕಸಿತ ಭಾರತ' ಓಟ

'ಸೇವಾ ಪರ್ವ 2025' ಭಾಗವಾಗಿ ಕಾರ್ಯಕ್ರಮ ಆಯೋಜನೆ; ನೂರಾರು ಮಂದಿ ಭಾಗಿ

ಲಂಡನ್/ಹ್ಯೂಸ್ಟನ್ (ಪಿಟಿಐ): ಅಮೆರಿಕ, ಬ್ರಿಟನ್‌ನಲ್ಲಿ 'ಸೇವಾ ಪರ್ವ 2025' ಭಾಗವಾಗಿ 'ವಿಕಸಿತ ಭಾರತ ಓಟ' ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಬ್ರಿಟನ್‌ನಲ್ಲಿರುವ ಭಾರತದ ಹೈಕಮಿಷನರ್ ಹಾಗೂ ಕಾನ್ಸುಲೇಟ್ ವತಿಯಿಂದ ಸೋಮವಾರ ವಿಕಸಿತ ಭಾರತ ಓಟ ನಡೆಯಿತು. 'ಸೇವೆ, ಸೃಜನಶೀಲತೆ ಹಾಗೂ ಸಾಂಸ್ಕೃತಿಕ ಹೆಮ್ಮೆ' ಎಂಬುದು ಕಾರ್ಯಕ್ರಮದ ಧ್ಯೇಯವಾಕ್ಯವಾಗಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ಆರಂಭಿಸಿರುವ 'ತಾಯಿ ಹೆಸರಿನಲ್ಲಿ ಒಂದು ಗಿಡ ನೆಡಿ' ಕಾರ್ಯಕ್ರಮದಡಿ ಕೇಂದ್ರ ಲಂಡನ್‌ನ ರಾಜತಾಂತ್ರಿಕ ಅಧಿಕಾರಿ ನಿವಾಸದ ಆವರಣದಲ್ಲಿ ಚೆರ್ರಿ ಗಿಡವನ್ನು ನೆಡಲಾಯಿತು.

'ಓಟದ ಆರಂಭದಿಂದ ಕೊನೆಯವರೆಗೂ ಜನರು ಉತ್ಸಾಹದಿಂದ ಪಾಲ್ಗೊಳ್ಳುವ ಮೂಲಕ ತಮ್ಮ ಬದ್ಧತೆ, ಏಕತೆಯನ್ನು ಪ್ರದರ್ಶಿಸಿದರು' ಎಂದು ಭಾರತೀಯ ಹೈಕಮಿಷನ್ ಹೇಳಿದೆ.

900 ಮಂದಿ ಭಾಗಿ

ಅಮೆರಿಕದ ಟೆಕ್ಸಾಸ್ ರಾಜ್ಯದ ಹ್ಯೂಸ್ಟನ್‌ನಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ವತಿಯಿಂದ ಜಾರ್ಜ್ ಬುಷ್ ಉದ್ಯಾನದಲ್ಲಿ ಭಾನುವಾರ ಆಯೋಜಿಸಿದ್ದ ವಿಕಸಿತ ಭಾರತ ಓಟದಲ್ಲಿ 900 ಮಂದಿ ಪಾಲ್ಗೊಂಡಿದ್ದರು.

ಭಾರತೀಯ ಅಮೆರಿಕನ್ನರನ್ನು ಒಳಗೊಂಡ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಕುಟುಂಬಗಳ ಸದಸ್ಯರು, ಯುವಕರು, ಹಿರಿಯ ನಾಗರಿಕರು ಭಾಗವಹಿಸಿದ್ದರು. 3ರಿಂದ 5 ಕಿ.ಮೀ. ಓಟ ಹಾಗೂ ನಡಿಗೆ ಕಾರ್ಯಕ್ರಮದಲ್ಲಿ ತ್ರಿವರ್ಣ ಧ್ವಜಗಳನ್ನು ಬೀಸುತ್ತಾ ಹಾಗೂ ಭಾರತದ ಅಭಿವೃದ್ಧಿಯ ಗುರಿಗಳ ಕುರಿತ ಘೋಷವಾಕ್ಯಗಳನ್ನು ಹೊಂದಿದ್ದ ಬ್ಯಾನರ್‌ಗಳನ್ನು ಹಿಡಿದು ಸಾಗಿದರು.



ಲಂಡನ್‌ನಲ್ಲಿ ಸೋಮವಾರ ನಡೆದ ವಿಕಸಿತ ಭಾರತ ಓಟದಲ್ಲಿ ಬ್ರಿಟನ್‌ನಲ್ಲಿನ ಭಾರತದ ಹೈಕಮಿಷನರ್ ವಿಕ್ರಮ್ ದೊರೆಸ್ವಾಮಿ ಸೇರಿದಂತೆ ಭಾರತ ಮೂಲದವರು ಭಾಗವಹಿಸಿದ್ದರು —ಪಿಟಿಐ ಚಿತ್ರ

'ವಿಕಸಿತ ಭಾರತ ಹಾಗೂ ಆತ್ಮನಿರ್ಭರ ಭಾರತ ಕುರಿತು ಹೈಕಮಿಷನರ್ ವಿಕ್ರಂ ದೊರೆಸ್ವಾಮಿ ಪ್ರತಿಜ್ಞಾ ವಿಧಿ ಬೋಧಿಸಿದರು. 'ನಮ್ಮ ಶ್ರೀಮಂತ ಪರಂಪರೆ, ಸಂಪ್ರದಾಯವನ್ನು ಮುನ್ನಡೆಸಬೇಕು. ನಾವು ಎಲ್ಲೇ ಇದ್ದರೂ ಜಗತ್ತಿನ ಒಳಿತಿಗೆ ಕೊಡುಗೆ ನೀಡಬೇಕು' ಎಂದು ಹೇಳಿದರು.

ಭಾರತದ ಮೊದಲ ಐಬಿಆರ್ ಲಸಿಕೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹೈದರಾಬಾದ್‌ನ ಲಸಿಕೆ ತಯಾರಿಕಾ ಕಂಪನಿ 'ಇಂಡಿಯನ್ ಇಮ್ಯುನೊಲಾಜಿಕಲ್ಸ್ ಲಿಮಿಟೆಡ್' (ಐಐಎಲ್) ಸೋಂಕಿತ ಜಾನುವಾರುಗಳ ಮೂಗು ಮತ್ತು ಗಂಟಲಿನ ಉರಿಯೂತ (ಐಬಿಆರ್) ಕಾಯಿಲೆಗೆ ಭಾರತದ ಮೊದಲ ಲಸಿಕೆ 'ಜೀನ್ ಡಿಲೀಟೆಡ್ ದಿವಾ' ಅಭಿವೃದ್ಧಿಪಡಿಸಿ ಸೋಮವಾರ ಬಿಡುಗಡೆ ಮಾಡಿದೆ.

ಈ ಲಸಿಕೆಯು ಸೋಂಕಿತ ಜಾನುವಾರುಗಳಿಂದ ಇತರ ಜಾನುವಾರುಗಳನ್ನು ರಕ್ಷಿಸುತ್ತದೆ. ಭಾರತದಲ್ಲಿ ಐಬಿಆರ್ ಸಾಂಕ್ರಾಮಿಕ ರೋಗವಾಗಿದ್ದು, ಗಾಳಿಯ ಮೂಲಕ ಹರಡುತ್ತದೆ ಮತ್ತು ಜಾನುವಾರುಗಳ ಸಂತಾನೋತ್ಪತ್ತಿ ಮೇಲೆ ಪರಿಣಾಮ ಬೀರುತ್ತದೆ. ಜಾನುವಾರುಗಳಲ್ಲಿ ಬಂಜೆತನ, ಕಡಿಮೆ ಹಾಲು ಉತ್ಪಾದನೆ, ಗರ್ಭಪಾತಕ್ಕೂ ಕಾರಣವಾಗುತ್ತದೆ.

ಭಾರತದಲ್ಲಿ ಈವರೆಗೆ ಈ ಸೋಂಕಿಗೆ ಯಾವುದೇ ಲಸಿಕೆಯಾಗಲೀ, ಚಿಕಿತ್ಸೆಯಾಗಲೀ ಲಭ್ಯವಿರಲಿಲ್ಲ. ಸದ್ಯ ಈ ಲಸಿಕೆಯ ಅಭಿವೃದ್ಧಿಯಿಂದಾಗಿ ಲಕ್ಷಾಂತರ ರೈತರಿಗೆ ಅನುಕೂಲವಾಗಲಿದೆ.

ತೆರೆದ ಚರಂಡಿಗೆ ಬಿದ್ದು ಬಾಲಕ ಸಾವು

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಡೊಂಬಿವಲಿಯಲ್ಲಿ ಭಾನುವಾರ ರಾತ್ರಿ ತೆರೆದ ಚರಂಡಿಗೆ ಬಿದ್ದು ಬಾಲಕ ಮೃತಪಟ್ಟಿದ್ದಾನೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಏಳನೇ ತರಗತಿ ವಿದ್ಯಾರ್ಥಿ ಆಯುಷ್ ಕದಮ್ (13) ಮೃತ ದುರ್ದೈವಿ.

ಸ್ನೇಹಿತರೊಂದಿಗೆ ಆಟವಾಡುತ್ತಿದ್ದ ವೇಳೆ ಕಾಲು ಜಾರಿ ತೆರೆದ ಚರಂಡಿಗೆ ಆಯುಷ್ ಬಿದ್ದಿದ್ದಾನೆ. ವಿಚಾರ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದೊಂದಿಗೆ ಘಟನಾಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆ ನಡೆಸಿ ಬಾಲಕನ ಮೃತದೇಹ ಹೊರಗೆ ತೆಗೆಯಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರ ಚೋಪ್ಡೆ ತಿಳಿಸಿದ್ದಾರೆ. ಘಟನೆಗೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆನ್‌ಲೈನ್‌ನಲ್ಲಿ ಹಬ್ಬದ ಖರೀದಿ ಜೋರು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಬ್ಬಗಳ ಋತುವಿನ ಮೊದಲ ಆರು ದಿನಗಳ ಅವಧಿಯಲ್ಲಿ ಗ್ರಾಹಕರು ಇ-ವಾಣಿಜ್ಯ ವೇದಿಕೆಗಳ ಮೂಲಕ ಖರೀದಿಸಿದ ವಸ್ತುಗಳ ಪ್ರಮಾಣವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ಶೇಕಡ 21ರಷ್ಟು ಹೆಚ್ಚಳ ಕಂಡಿದೆ.

ತಂತ್ರಾಂಶ ಸೇವೆ ಒದಗಿಸುವ ಯೂನಿಕಾಮರ್ಸ್ ಕಂಪನಿಯು ದೇಶದ ವಿವಿಧ ಇ-ವಾಣಿಜ್ಯ ಕಂಪನಿಗಳ ಮೂಲಕ ನಡೆದ 4 ಕೋಟಿ ವಹಿವಾಟುಗಳನ್ನು ವಿಶ್ಲೇಷಿಸಿ ಸಿದ್ಧಪಡಿಸಿದ ವರದಿಯು ಈ ಸಂಗತಿಯನ್ನು ತಿಳಿಸಿದೆ.

ದೇಶದ ಪ್ರಮುಖ ಇ-ವಾಣಿಜ್ಯ ವೇದಿಕೆಗಳಲ್ಲಿ ನವೆಂಬರ್ 22ರಿಂದ ಹಬ್ಬಗಳ ಸಂದರ್ಭದ ಮಾರಾಟ ಮೇಳ ಆರಂಭವಾಗಿದೆ. ಜಿಎಸ್‌ಟಿ ತೆರಿಗೆ ಇಳಿಕೆಯು ಕೂಡ ಅದೇ ದಿನದಿಂದ ಜಾರಿಗೆ ಬಂದಿದೆ.

ಯೂನಿಕಾಮರ್ಸ್ ನೀಡಿರುವ ದತ್ತಾಂಶದ ಪ್ರಕಾರ, ವಿವಿಧ ಉತ್ಪನ್ನಗಳನ್ನು ಗ್ರಾಹಕರ ಮನೆಬಾಗಿಲಿಗೆ ತ್ವರಿತವಾಗಿ ತಲುಪಿಸುವ ಕ್ವಿಕ್-ಕಾಮರ್ಸ್ ವೇದಿಕೆಗಳ ಮೂಲಕ ನಡೆದಿರುವ ವಹಿವಾಟು ಹಬ್ಬದ ಅವಧಿಯ ಮೊದಲ ಆರು ದಿನಗಳ ಅವಧಿಯಲ್ಲಿ ಶೇಕಡ 85ರಷ್ಟು ಹೆಚ್ಚಳ ಕಂಡಿದೆ.

ತಾವು ಬಯಸುವ ಉತ್ಪನ್ನಗಳು ಮನೆ ಬಾಗಿಲಿಗೆ ತ್ವರಿತವಾಗಿ ಬರಬೇಕು ಎಂದು ಗ್ರಾಹಕರು ಬಯಸುತ್ತಿರುವುದನ್ನು ಇದು ತೋರಿಸುತ್ತಿದೆ ಎಂದು ಯೂನಿಕಾಮರ್ಸ್ ಹೇಳಿದೆ.

ಎಫ್‌ಎಂಸಿಜಿ ಉತ್ಪನ್ನಗಳು, ಸೌಂದರ್ಯ ವರ್ಧಕಗಳು, ಆರೋಗ್ಯಕ್ಕೆ ಸಂಬಂಧಿಸಿದ ಉತ್ಪನ್ನಗಳು, ಎಲೆಕ್ಟ್ರಾನಿಕ್ ಉಪಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಆಗಿವೆ.

ಹಬ್ಬದ ಸಂದರ್ಭದಲ್ಲಿ ನಡೆದ ವಹಿವಾಟಿನಲ್ಲಿ ಶೇ 58ರಷ್ಟು 2ನೆಯ ಹಾಗೂ 3ನೆಯ ಹಂತಗಳ ನಗರಗಳಿಂದ ಆಗಿವೆ. ಮಹಾನಗರ ಪ್ರದೇಶಗಳಲ್ಲಿ ವಹಿವಾಟು ಶೇ 22ರಷ್ಟು ಹೆಚ್ಚಳ ಕಂಡಿದ್ದರೆ, 2ನೆಯ ಹಾಗೂ 3ನೆಯ ಹಂತಗಳ ನಗರಗಳಲ್ಲಿನ ವಹಿವಾಟು ಪ್ರಮಾಣದಲ್ಲಿ ಶೇ 20ರಷ್ಟು ಹೆಚ್ಚಳ ಆಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾವಾಣಿ

ನವವರ್ಣ

ಗುಲಾಬಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಮಂಗಳವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಅನಿತಾ & ಗೆಳತಿಯರು, ಜೆಪಿ ನಗರ


ವಿನಾಯಕ್ ವಿದ್ಯಾನಿಕೇತನ ಸಿಬ್ಬಂದಿ, ನೆಲಮಂಗಲ


ಜ್ಞಾನಾಕ್ಷಿ ವಿದ್ಯಾಮಂದಿರ ಸಿಬ್ಬಂದಿ, ಯಲಹಂಕ


ಅಶ್ವಿನಿ & ಗೆಳತಿಯರು, ನೆಲಮಂಗಲ


ಹೇಮಾ & ಗೆಳತಿಯರು, ತುಮಕೂರು


ಸುಮಾ & ಗೆಳತಿಯರು, ಯಶವಂತಪುರ


ಲಲಿತಾ & ಕುಟುಂಬ, ಬೆಂಗಳೂರು


ಕೋಕಿಲಾ & ಗೆಳತಿ, ದೊಡ್ಡಬಳ್ಳಾಪುರ


ಅರಿವು ಗ್ರೂಪ್, ಭೂಪಸಂದ್ರ


ದೇವಿಕಾ & ಗೆಳತಿಯರು, ಜೆಪಿ ನಗರ


ಪ್ರೇಮಾ & ಗೆಳತಿಯರು, ಬೆಂಗಳೂರು


ಮಾರುತಿ ಯೋಗ ಪರಿವಾರ, ಜಾಲಹಳ್ಳಿ


ಸವಿತಾ & ಗೆಳತಿಯರು, ನಾಗರಭಾವಿ


ಭವಾನಿ, ವಿಲ್ಸನ್ ಗಾರ್ಡನ್


ಪದ್ಮಾ & ಗೆಳತಿಯರು, RR ನಗರ


ಕವಿತಾ & ಗೆಳತಿಯರು, CEX ಲೇಔಟ್


ಕಾರ್ಯಸಿದ್ಧಿ ಭಜನಾ ಮಂಡಳಿ, ವಿಶ್ವೇಶ್ವರಯ್ಯ ಬಡಾವಣೆ

ಇಂದಿನ ಬಣ್ಣ - ಗುಲಾಬಿ


ಸತ್ಯವತಿ & ಗೆಳತಿಯರು, ಶ್ರೀರಾಮಪುರ


ರಾಜರಾಜೇಶ್ವರಿ ಭಜನಾ ಮಂಡಳಿ, ರಾಜಾಜಿನಗರ


ಸ್ವರ್ಣಾಂಬ ತಂಡ, ಬೆಂಗಳೂರು


ಶ್ರೀ ಮಾತಾ ಭಕ್ತವೃಂದ, ಬ್ಯಾಡರಹಳ್ಳಿ


ಪದ್ಮಾ & ಗೆಳತಿಯರು, ಬೆಂಗಳೂರು


ಶರ್ಮಿಳಾ & ಗೆಳತಿಯರು, ಗಿರಿನಗರ


ಸಂಯಮ್ ಯೋಗ ವಿದ್ಯಾಲಯ, ಬೆಂಗಳೂರು

ಐಸಿಸಿ ಪ್ರಶಸ್ತಿ ಮೇಲೆ ಭಾರತದ ಕಣ್ಣು

ಹರ್ಮನ್ ಪಡೆಗೆ ತವರಿನ ಲಾಭದ ವಿಶ್ವಾಸ
ಉದ್ಘಾಟನಾ ಪಂದ್ಯದಲ್ಲಿ ಲಂಕಾ ಎದುರಾಳಿ

ಗುವಾಹಟಿ (ಪಿಟಿಐ): ತವರಿನಲ್ಲಿ ಆಡುತ್ತಿರುವುದು ಮತ್ತು ಉತ್ತಮ ಲಯದಲ್ಲಿರುವುದರಿಂದ ಭಾರತ ತಂಡ, ಇದೇ ಮೊದಲ ಬಾರಿ ಮಹಿಳೆಯರ ಐಸಿಸಿ ಏಕದಿನ ಕ್ರಿಕೆಟ್ ವಿಶ್ವಕಪ್ ಗೆಲ್ಲುವ ವಿಶ್ವಾಸದಲ್ಲಿದೆ. ಆತಿಥೇಯರು ಮಂಗಳವಾರ ಬರಸಾಪಾರಾ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಿ ಅಭಿಯಾನ ಆರಂಭಿಸಲಿದ್ದಾರೆ.


ಹರ್ಮನ್‌ಪ್ರೀತ್


ಚಾಮರಿ

ಇಲ್ಲಿ ಪ್ರಶಸ್ತಿ ಗೆದ್ದರೆ, ತಂಡಕ್ಕೆ ಅದು ಚೊಚ್ಚಲ ಐಸಿಸಿ ಪ್ರಶಸ್ತಿಯೂ ಆಗಲಿದೆ. 47 ವರ್ಷಗಳ ಕಾಯುವಿಕೆಗೆ ತೆರೆಬೀಳಲಿದೆ. ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಹರ್ಮನ್‌ಪ್ರೀತ್ ಸಾರಥ್ಯದ ತಂಡವು, ತವರಿನಲ್ಲಿ ಆಡುವ ಲಾಭವನ್ನು ಗರಿಷ್ಠ ಮಟ್ಟಕ್ಕೆ ಪಡೆಯಲು ಯತ್ನಿಸಲಿದೆ. 12 ವರ್ಷಗಳ ನಂತರ ಪ್ರತಿಷ್ಠಿತ ಟೂರ್ನಿಯು ಭಾರತದಲ್ಲಿ ನಡೆಯುತ್ತಿದೆ.

ಎಂಟು ತಂಡಗಳು– ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ– ಕಣದಲ್ಲಿವೆ. ರೌಂಡ್‌ರಾಬಿನ್ ಮಾದರಿಯಲ್ಲಿ 28 ಲೀಗ್ ಪಂದ್ಯಗಳು ನಡೆಯಲಿವೆ. ಭಾರತದ ನಾಲ್ಕು ಕಡೆ ಮತ್ತು ಶ್ರೀಲಂಕಾದ ಕೊಲಂಬೊದಲ್ಲಿ ಪಂದ್ಯಗಳು ನಡೆಯಲಿವೆ. ಟೂರ್ನಿಯು ದಾಖಲೆಯ ₹123 ಕೋಟಿ ಬಹುಮಾನ ಹೊಂದಿದೆ. 2022ರ ಟೂರ್ನಿಗೆ ಹೋಲಿಸಿದರೆ ನಾಲ್ಕು ಪಟ್ಟು ಅಧಿಕ.

ಕೊಲಂಬೊದಲ್ಲಿ 11 ಪಂದ್ಯಗಳು ನಡೆಯಲಿವೆ. ಪಾಕಿಸ್ತಾನ ತಂಡ ತನ್ನೆಲ್ಲಾ ಪಂದ್ಯಗಳನ್ನು ಇಲ್ಲಿ ಆಡಲಿದೆ. ಅಕ್ಟೋಬರ್ 5ರಂದು ಭಾರತ – ಪಾಕಿಸ್ತಾನ ಪಂದ್ಯವೂ ಇಲ್ಲಿ ನಿಗದಿಯಾಗಿದೆ. ಪಾಕಿಸ್ತಾನ ಒಂದೊಮ್ಮೆ ಸೆಮಿಫೈನಲ್, ಫೈನಲ್ ತಲುಪಿದರೆ ಆ ಪಂದ್ಯಗಳಿಗೂ ಕೊಲಂಬೊ ಆತಿಥ್ಯ ವಹಿಸಲಿದೆ.

ತಂಡಕ್ಕೆ ವಿಶ್ವಾಸ: ಭಾರತ ತಂಡ, ಇತ್ತೀಚೆಗೆ ಇಂಗ್ಲೆಂಡ್ ತಂಡವನ್ನು ಏಕದಿನ ಮತ್ತು ಟಿ20 ಮಾದರಿಯ ಸರಣಿಗಳಲ್ಲಿ ಸೋಲಿಸಿ ವಿಶ್ವಾಸದಲ್ಲಿದೆ. ಟೂರ್ನಿಗೆ ತಾಲೀಮು ಆಗಿ ಆಸ್ಟ್ರೇಲಿಯಾ ವಿರುದ್ಧ ಸರಣಿಯಲ್ಲಿ ಸೋತರೂ ತಂಡ ಉತ್ತಮ ಪ್ರದರ್ಶನ ನೀಡಿತ್ತು. ಆಸ್ಟ್ರೇಲಿಯಾ ದಾಖಲೆಯ ಎಂಟನೇ ಪ್ರಶಸ್ತಿ ಗೆಲ್ಲುವ ಗುರಿಯಲ್ಲಿದೆ.

ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಬ್ಯಾಟಿಂಗ್ ವಿಭಾಗದ ಆಧಾರಸ್ತಂಭ. ಆಸ್ಟ್ರೇಲಿಯಾ ವಿರುದ್ಧ ಈ ವರ್ಷ ಸತತ ಎರಡು ಶತಕ ಸೇರಿ ಏಕದಿನ ಪಂದ್ಯಗಳಲ್ಲಿ ನಾಲ್ಕು ಶತಕ ಬಾರಿಸಿದ್ದಾರೆ. ಉಪನಾಯಕಿಯಾಗಿರುವ ಈ ಎಡಗೈ ಆಟಗಾರ್ತಿಗೆ, ಪ್ರತಿಕಾ ರಾವಲ್ ಉತ್ತಮ ಜೊತೆಗಾತಿ ಎನಿಸಿದ್ದಾರೆ.

ನಾಯಕಿ ಹರ್ಮನ್‌ಪ್ರೀತ್ ಅವರಿಗೆ ಇದು ಐದನೇ ವಿಶ್ವಕಪ್. ಅವರ ಅನುಭವದ ಜೊತೆಗೆ ಜೆಮಿಮಾ ರಾಡ್ರಿಗ್‌ಸ್, ರಿಚಾ ಘೋಷ್, ಹರ್ಲೀನ್ ಡಿಯೋಲ್, ದೀಪ್ತಿ ಶರ್ಮಾ ಅವರಿಂದಾಗಿ ಬ್ಯಾಟಿಂಗ್ ಕ್ರಮಾಂಕ ಬಲಿಷ್ಠವಾಗಿದೆ.


ಭಾರತ ತಂಡದ ಆಟಗಾರ್ತಿಯರಾದ ಸ್ಮೃತಿ ಮಂದಾನ, ದೀಪ್ತಿ ಶರ್ಮಾ ಹಾಗೂ ರಿಚಾ ಘೋಷ್ ಅವರು ಸೋಮವಾರ ಅಭ್ಯಾಸ ನಡೆಸಿದರು ಪಿಟಿಐ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ವಿಜೇತರು

ವರ್ಷ	ಆತಿಥ್ಯ	ಚಾಂಪಿಯನ್	ರನ್ನರ್ಸ್ ಅಪ್	ಒಟ್ಟು ತಂಡ
1973	ಇಂಗ್ಲೆಂಡ್	ಇಂಗ್ಲೆಂಡ್	ಆಸ್ಟ್ರೇಲಿಯಾ	7
1978	ಭಾರತ	ಆಸ್ಟ್ರೇಲಿಯಾ	ಇಂಗ್ಲೆಂಡ್	4
1982	ನ್ಯೂಜಿಲೆಂಡ್	ಆಸ್ಟ್ರೇಲಿಯಾ	ಇಂಗ್ಲೆಂಡ್	5
1988	ಆಸ್ಟ್ರೇಲಿಯಾ	ಆಸ್ಟ್ರೇಲಿಯಾ	ಇಂಗ್ಲೆಂಡ್	5
1993	ಇಂಗ್ಲೆಂಡ್	ಇಂಗ್ಲೆಂಡ್	ನ್ಯೂಜಿಲೆಂಡ್	8
1997	ಭಾರತ	ಆಸ್ಟ್ರೇಲಿಯಾ	ನ್ಯೂಜಿಲೆಂಡ್	11
2000	ನ್ಯೂಜಿಲೆಂಡ್	ನ್ಯೂಜಿಲೆಂಡ್	ಆಸ್ಟ್ರೇಲಿಯಾ	8
2005	ದಕ್ಷಿಣ ಆಫ್ರಿಕಾ	ಆಸ್ಟ್ರೇಲಿಯಾ	ಭಾರತ	8
2009	ಆಸ್ಟ್ರೇಲಿಯಾ	ಇಂಗ್ಲೆಂಡ್	ನ್ಯೂಜಿಲೆಂಡ್	8
2013	ಭಾರತ	ಆಸ್ಟ್ರೇಲಿಯಾ	ವೆಸ್ಟ್ ಇಂಡೀಸ್	8
2017	ಇಂಗ್ಲೆಂಡ್	ಇಂಗ್ಲೆಂಡ್	ಭಾರತ	8
2022	ನ್ಯೂಜಿಲೆಂಡ್	ಆಸ್ಟ್ರೇಲಿಯಾ	ಇಂಗ್ಲೆಂಡ್	8

ಆದರೆ ಸವಾಲು ಇರುವುದು ತಂಡದ ಮನೋಬಲದಲ್ಲಿ. ನಿರ್ಣಾಯಕ ಗಳಿಗೆಯಲ್ಲಿ ತಂಡ ಒತ್ತಡಕ್ಕೆ ಒಳಗಾಗಿರುವ ಇತಿಹಾಸವಿದೆ.

ಶ್ರೀಲಂಕಾ ತಂಡವನ್ನು ಚಾಮರಿ ಅಟಪಟ್ಟು ಮುನ್ನಡೆಸುತ್ತಿದ್ದಾರೆ. ಭರವಸೆ ಮೂಡಿಸಿರುವ 20 ವರ್ಷ ವಯಸ್ಸಿನ ಆಲ್‌ರೌಂಡರ್ ದೆವ್ಮಿ ವಿಹಂಗ ಅವರ ನಿರ್ವಹಣೆಯ ಮೇಲೆ ಗಮನವಿದೆ. ಇತ್ತೀಚೆಗೆ ತ್ರಿಕೋನ ಸರಣಿಯಲ್ಲಿ ಅವರು 11 ವಿಕೆಟ್ ಪಡೆದಿದ್ದರು.

ಹೆಚ್ಚಿನ ಲೀಗ್ ಪಂದ್ಯಗಳನ್ನು ತವರಿನಲ್ಲಿ ಆಡುತ್ತಿರುವುದು ಲಂಕಾ ಸವಾಲಿಗೆ ಬಲ ತುಂಬಿದೆ.

ಇತರ ಆಕಾಂಕ್ಷಿಗಳು: ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಈ ಬಾರಿಯೂ ಪ್ರಶಸ್ತಿಗೆ ನೆಚ್ಚಿನ ತಂಡವಾಗಿದೆ. 2022ರ ಟೂರ್ನಿಯಲ್ಲಿ ಈ ತಂಡ ಪ್ರಾಬಲ್ಯ ಮೆರೆದಿತ್ತು. ಫೈನಲ್‌ನಲ್ಲಿ ಅಲಿಸಾ ಹೀಲಿ ಅವರು ದಾಖಲೆಯ 170 ರನ್ ಬಾರಿಸಿ ತಂಡ ಗೆಲ್ಲಲು ನೆರವಾಗಿದ್ದರು.

ಈಗ ಅಲಿಸಾ ನೇತೃತ್ವದ ಪ್ರಬಲ ಆಸ್ಟ್ರೇಲಿಯಾ ದಾಖಲೆಯ ಹಿನ್ನೆಲೆ, ಸ್ಫೂರ್ತಿಯೊಡನೆ ಸವಾಲಿಗೆ ಸಜ್ಜಾಗಿದೆ.

ಎರಡನೇ ಕ್ರಮಾಂಕದ ಇಂಗ್ಲೆಂಡ್ ತಂಡ, ಎಂಟು ವರ್ಷಗಳ ಹಿಂದೆ ಗೆದ್ದ ಟ್ರೋಫಿಯನ್ನು ಮರಳಿ ಪಡೆಯಲು ತವಕದಲ್ಲಿದೆ.

ತಂಡಗಳು: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪ ನಾಯಕಿ), ಪ್ರತಿಕಾ ರಾವಲ್, ಹರ್ಲೀನ್ ಡಿಯೋಲ್, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್, ಉಮಾ ಚೆಟ್ರಿ, ರೇಣುಕಾ ಸಿಂಗ್ ಠಾಕೂರ್, ದೀಪ್ತಿ ಶರ್ಮಾ, ಸ್ನೇಹ ರಾಣಾ, ಶ್ರೀ ಚರಣಿ, ರಾಧಾ ಯಾದವ್, ಅಮನ್‌ಜೋತ್ ಕೌರ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ.

ಶ್ರೀಲಂಕಾ: ಚಾಮರಿ ಅಟಪಟ್ಟು (ನಾಯಕಿ), ಹಸಿನಿ ಪೆರೇರಾ, ವಿಷ್ಮಿ ಗುಣರತ್ನೆ, ಹರ್ಷಿತಾ ಸಮರವಿಕ್ರಮ, ಕವಿಶಾ ದಿಲ್ಹಾರಿ, ನಿಲಾಕ್ಷಿ ಡಿಸಿಲ್ವ, ಅನುಷ್ಕಾ ಸಂಜೀವನಿ, ಇಮೇಶಾ ದುಲಾನಿ, ದೇವ್ಮಿ ವಿಹಂಗ, ಪಿಯುಮಿ ವತ್ಸಲ, ಇನೊಕಾ ರಣವೀರ, ಸುಗಂಧಿಕಾ ಕುಮಾರಿ, ಉದೇಶಿಕ ಪ್ರಬೋದನಿ, ಮಲ್ಕಿ ಮದರಾ, ಅಚಿನಿ ಕುಲಸೂರಿಯ.

ಪಂದ್ಯ ಆರಂಭ: ಮಧ್ಯಾಹ್ನ 3.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವೀಕ್ಷಣೆಗೆ ಬಂದ ಅಫ್ಗನ್ ವನಿತೆಯರು

ಗುವಾಹಟಿ (ಪಿಟಿಐ): ಮಂಗಳವಾರ ಆರಂಭವಾಗುವ ಐಸಿಸಿ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಅಫ್ಗಾನಿಸ್ತಾನ ತಂಡ ಭಾಗವಹಿಸುತ್ತಿಲ್ಲ. ಆದರೆ ದೇಶ ತೊರೆದು ಆಸ್ಟ್ರೇಲಿಯಾದಲ್ಲಿ ನೆಲೆ ಮಾಡಿಕೊಂಡಿರುವ ಅಲ್ಲಿನ 16 ಆಟಗಾರ್ತಿಯರ ತಂಡ ಸೋಮವಾರ ಇಲ್ಲಿಗೆ ತಲುಪಿದೆ.

ಈ ತಂಡ ಕಲಿಕೆಯ ಭಾಗವಾಗಿ ಪಂದ್ಯ ನಡೆಯುವ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲಿದೆ. 2021ರಲ್ಲಿ ಅಫ್ಗಾನಿಸ್ತಾನವು ತಾಲಿಬಾನ್ ಪಡೆಗಳ ನಿಯಂತ್ರಣಕ್ಕೆ ಬಂದ ಬಳಿಕ ಅಲ್ಲಿನ ಕ್ರಿಕೆಟ್ ಆಟಗಾರ್ತಿಯರು ಆಸ್ಟ್ರೇಲಿಯಾದಲ್ಲಿ ಆಶ್ರಯ ಪಡೆದಿದ್ದಾರೆ. ಕ್ರಿಕೆಟ್ ಪಂದ್ಯಗಳನ್ನು ನೋಡಲು ಈ ಆಟಗಾರ್ತಿಯರ ಗುಂಪನ್ನು ಆಹ್ವಾನಿಸಲಾಗಿದೆ.



ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪ್ರಶಸ್ತಿಯೊಂದಿಗೆ ಮಧ್ಯಪ್ರದೇಶ ತಂಡದ ಆಟಗಾರರು ಚಿತ್ರ: ರಂಜು ಪಿ

ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ತಂಡಕ್ಕೆ ನಿರಾಸೆ

ಮಧ್ಯಪ್ರದೇಶಕ್ಕೆ ತಿಮ್ಮಪ್ಪಯ್ಯ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶ ತಂಡವು ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ವಿರುದ್ಧದ ಫೈನಲ್ ಪಂದ್ಯವು ಸೋಮವಾರ ಡ್ರಾನಲ್ಲಿ ಮುಕ್ತಾಯಗೊಂಡಿತು.

20 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಮಧ್ಯಪ್ರದೇಶ ಪ್ರಶಸ್ತಿ ಗೆದ್ದಿತು.

ಕೊನೆಯ ದಿನ ಮಧ್ಯಪ್ರದೇಶ ತಂಡವು ಎರಡನೇ ಇನಿಂಗ್ಸ್‌ನಲ್ಲಿ 85.1 ಓವರ್‌ಗಳಲ್ಲಿ 242 ರನ್ ಗಳಿಸಿ ಆಲೌಟ್ ಆಯಿತು. ಭಾನುವಾರ 4 ವಿಕೆಟ್‌ಗೆ 96 ರನ್ ಗಳಿಸಿದ್ದ ತಂಡಕ್ಕೆ ವೆಂಕಟೇಶ್ ಅಯ್ಯರ್ (79) ಆಸರೆಯಾದರು. ಇಲೆವೆನ್ ತಂಡದ ಧ್ರುವ್ ಪಿ. ಮತ್ತು ಮಾಧವ್ ಪಿ. ಬಜಾಜ್ ಕ್ರಮವಾಗಿ ನಾಲ್ಕು ಮತ್ತು ಮೂರು ವಿಕೆಟ್ ಪಡೆದರು.

ಗೆಲುವಿಗೆ 263 ರನ್‌ಗಳ ಗುರಿ ಪಡೆದ ಇಲೆವೆನ್ ತಂಡವು ಆತ್ಮವಿಶ್ವಾಸದಿಂದ ಬ್ಯಾಟಿಂಗ್ ಇಳಿಯಿತು. ಆದರೆ, ರನ್ ವೇಗವನ್ನು ಹೆಚ್ಚಿಸುವ ಭರದಲ್ಲಿ ನಿಯಮಿತವಾಗಿ ವಿಕೆಟ್ ಕಳೆದುಕೊಂಡಿತು. ಪಂದ್ಯ ಕೊನೆಗೊಂಡಾಗ ಇಲೆವೆನ್ ತಂಡ 29 ಓವರ್‌ಗಳಲ್ಲಿ 7 ವಿಕೆಟ್‌ಗೆ 168 ರನ್ ಗಳಿಸಿತ್ತು. ವೆಂಕಟೇಶ್ ಎಂ. (38), ಕೃತಿಕ್ ಕೃಷ್ಣ (34) ಕೊಂಚ ಹೋರಾಟ ತೋರಿದರು.

ಸಂಕ್ಷಿಪ್ತ ಸ್ಕೋರ್: ಮಧ್ಯಪ್ರದೇಶ: 338 ಮತ್ತು 85.1 ಓವರ್‌ಗಳಲ್ಲಿ 242 (ರಿಷಭ್ ಚವ್ಹಾಣ್ 35, ವೆಂಕಟೇಶ್ ಅಯ್ಯರ್ 79, ಆರ್ಯನ್ ಪಾಂಡೆ 42; ಧ್ರುವ್ ಪಿ. 52ಕ್ಕೆ 4, ಮಾಧವ್ ಪಿ. ಬಜಾಜ್ 86ಕ್ಕೆ 3). ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್: 318 ಮತ್ತು 29 ಓವರ್‌ಗಳಲ್ಲಿ 7 ವಿಕೆಟ್‌ಗೆ 168 (ವೆಂಕಟೇಶ್ ಎಂ. 38, ರಾಜವೀರ್ ವಾಧ್ವಾ 32, ಕೃತಿಕ್ ಕೃಷ್ಣ 34; ಆರ್ಯನ್ ಪಾಂಡೆ 46ಕ್ಕೆ 3, ಅರ್ಷದ್ ಖಾನ್ 46ಕ್ಕೆ 2).

ಫಲಿತಾಂಶ: ಪಂದ್ಯ ಡ್ರಾ. ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಮಧ್ಯಪ್ರದೇಶಕ್ಕೆ ಪ್ರಶಸ್ತಿ

ಟೆನಿಸ್: ಬೋಪಣ್ಣ– ಯುಜುಕಿ ಜೋಡಿ ಫೈನಲ್‌ಗೆ

ಟೋಕಿಯೊ (ಪಿಟಿಐ): ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಮತ್ತು ಅವರ ಜಪಾನ್‌ನ ಜೊತೆಗಾರ ತಕೇರು ಯುಜುಕಿ ಅವರು ಜಪಾನ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ.


ರೋಹನ್ ಬೋಪಣ್ಣ

ಸೋಮವಾರ ನಡೆದ ಡಬಲ್ಸ್ ಸೆಮಿಫೈನಲ್‌ನಲ್ಲಿ ಶ್ರೇಯಾಂಕರಹಿತ ಬೋಪಣ್ಣ– ಯುಜುಕಿ ಜೋಡಿಯು 4-6, 6-3, 18-16ರಿಂದ ಅಗ್ರಶ್ರೇಯಾಂಕದ ಕ್ರಿಶ್ಚಿಯನ್ ಹ್ಯಾರಿಸನ್ ಮತ್ತು ಇವಾನ್ ಕಿಂಗ್ (ಅಮೆರಿಕ) ಅವರಿಗೆ ಆಘಾತ ನೀಡಿತು.

ಕರ್ನಾಟಕದ ಬೋಪಣ್ಣ– ಯುಜುಕಿ ಅವರು ಈ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು. ಮೊದಲ ಸೆಟ್ ಸೋತ ಇಂಡೊ–ಜಪಾನ್ ಜೋಡಿ ಚೇತರಿಸಿ ಸೆಟ್ ಸಮಬಲ ಸಾಧಿಸಿತು. ನಿರ್ಣಾಯಕ ಸೆಟ್ ಅನ್ನು ಸೂಪರ್ ಟೈಬ್ರೇಕರ್‌ನಲ್ಲಿ ಗೆದ್ದು, ಪ್ರಶಸ್ತಿ ಸುತ್ತಿಗೆ ಮುನ್ನಡೆಯಿತು.

ಬೋಪಣ್ಣ– ಯುಜುಕಿ ಅವರು ಮಂಗಳವಾರ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಎಡ್ವರ್ಡ್ ರೋಜರ್ ವಾಸೆಲಿನ್ (ಫ್ರಾನ್ಸ್) ಮತ್ತು ಹ್ಯೂಗೊ ನೈಸ್ (ಮೊನಾಕೊ) ಜೋಡಿಯನ್ನು ಎದುರಿಸಲಿದ್ದಾರೆ.

ಶೂಟಿಂಗ್: ಓಜಸ್ವಿ, ಹಿಮಾಂಶುಗೆ ಚಿನ್ನ

ನವದೆಹಲಿ (ಪಿಟಿಐ): ಉದಯೋನ್ಮುಖ ಶೂಟರ್ ಓಜಸ್ವಿ ಠಾಕೂರ್ ಅವರು ಸೋಮವಾರ ನಡೆದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು. ಈ ಸ್ಪರ್ಧೆಯಲ್ಲಿ ಮೂರೂ ಪದಕಗಳನ್ನು ಗೆದ್ದು ಭಾರತ ಕ್ಲೀನ್‌ಸ್ವೀಪ್ ಮಾಡಿಕೊಂಡಿತು.

ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಕೂಟದಲ್ಲಿ 16 ವರ್ಷದ ಓಜಸ್ವಿ 252.7 ಅಂಕಗಳೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದರು. 250.2 ಅಂಕ ಗಳಿಸಿದ ಹೃದಯಶ್ರೀ ಕೊಂಡೂರ್ ಬೆಳ್ಳಿ ಗೆದ್ದರೆ, ಶಾಂಭವಿ ಕ್ಷೀರಸಾಗರ್ (229.4) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಹಿಮಾಂಶುಗೆ ಚಿನ್ನ: ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ಹಿಮಾಂಶು ಚಿನ್ನಕ್ಕೆ ಗುರಿಯಿಟ್ಟರು. 633.7 ಸ್ಕೋರ್‌ನೊಂದಿಗೆ ಅರ್ಹತಾ ಸುತ್ತಿನಲ್ಲೂ ಅಗ್ರಸ್ಥಾನ ಪಡೆದಿದ್ದ ಹಿಮಾಂಶು, ಫೈನಲ್‌ನಲ್ಲಿ (250.9) ಪ್ರಾಬಲ್ಯ ಮುಂದುವರಿಸಿದರು. ಸ್ವತಂತ್ರ ತಟಸ್ಥ ಸ್ಪರ್ಧಿ (ಎಐಎನ್‌ಎ) ಡಿಮಿತ್ರಿ ಪಿಮೆನೋವ್ (249.9) ಬೆಳ್ಳಿ ಪದಕ ಗೆದ್ದರೆ, ಅಭಿನವ್ ಶಾ (228.4) ಕಂಚು ಜಯಿಸಿದರು. ನರೇನ್ ಪ್ರಣವ್ (187.0) ಐದನೇ ಸ್ಥಾನ ಪಡೆದರು.

ಪುರುಷರ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್‌ನಲ್ಲಿ ಸ್ವತಂತ್ರ ತಟಸ್ಥ ಸ್ಪರ್ಧಿ ಅಲೆಕ್ಸಾಂಡರ್ ಕೊವಾಲೆವ್ ಅವರು ಭಾರತದ ಮುಕೇಶ್ ನೆಲವಲ್ಲಿ ಅವರನ್ನು ರೋಚಕ ಶೂಟ್‌ಆಫ್‌ನಲ್ಲಿ ಮಣಿಸಿ ಚಿನ್ನ ಗೆದ್ದರು.

ಕಬಡ್ಡಿ: ಜೈಂಟ್ಸ್‌ಗೆ ಎರಡನೇ ಜಯ

ಚೆನ್ನೈ (ಪಿಟಿಐ): ಅಂಕಿತ್ ದಹಿಯಾ ಮತ್ತು ಮಹಮ್ಮದ್ ರೇಜಾ ಶಾಡ್ಲೊಯಿ ಅವರ ಆಲ್‌ರೌಂಡ್ ಆಟದ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪ್ರಸಕ್ತ ಆವೃತ್ತಿಯಲ್ಲಿ ಎರಡನೇ ಜಯ ದಾಖಲಿಸಿತು.

ಇಲ್ಲಿನ ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ಆರಂಭವಾದ ‘ಚೆನ್ನೈ ಲೆಗ್’ನ ಮೊದಲ ಪಂದ್ಯದಲ್ಲಿ ಜೈಂಟ್ಸ್ ತಂಡವು 33–27ರಿಂದ ಯುಪಿ ಯೋಧಾಸ್ ತಂಡವನ್ನು ಮಣಿಸಿತು. ಜೈಂಟ್ಸ್ ತಂಡವು ಸತತ ಐದು ಪಂದ್ಯಗಳ ಸೋಲಿನ ಬಳಿಕ ಗೆಲುವಿನ ಹಳಿಗೆ ಮರಳಿತು.

ದಿನದ ಮತ್ತೊಂದು ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡವು 38–37ರಿಂದ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ಎದುರು ರೋಚಕ ಜಯ ಸಾಧಿಸಿತು. ಡೆಲ್ಲಿ ತಂಡವು 9 ಪಂದ್ಯಗಳಲ್ಲಿ 8ನೇ ಗೆಲುವಿನೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಕ್ರಿಕೆಟ್: ಕ್ರಿಸ್ ವೋಕ್ಸ್ ವಿದಾಯ

ಲಂಡನ್ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಆ್ಯಷಸ್ ಸರಣಿಯಿಂದ ಹೊರಗುಳಿದ ಇಂಗ್ಲೆಂಡ್ ಆಲ್‌ರೌಂಡರ್ ಕ್ರಿಸ್ ವೋಕ್ಸ್ ಅವರು ಸೋಮವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು.



15 ವರ್ಷಗಳ ವೃತ್ತಿಜೀವನದಲ್ಲಿ ಅವರು 62 ಟೆಸ್ಟ್ ಪಂದ್ಯಗಳನ್ನು ಆಡಿ, 2,034 ರನ್ ಗಳಿಸಿದ್ದಾರೆ. ವೇಗದ ಬೌಲಿಂಗ್ ದಾಳಿಯಲ್ಲಿ 192 ವಿಕೆಟ್‌ಗಳನ್ನು ಪಡೆದಿದ್ದಾರೆ.

ಜುಲೈನಲ್ಲಿ ಭಾರತದ ವಿರುದ್ಧ ಅವರು ಕೊನೆಯ ಸಲ ಟೆಸ್ಟ್ ಆಡಿದ್ದರು. ಓವಲ್ ಕ್ರೀಡಾಂಗಣದಲ್ಲಿ ನಡೆದ ಐದನೇ ಟೆಸ್ಟ್‌ನಲ್ಲಿ ಅವರು ತಮ್ಮ ಮುರಿದ ಕೈಗೆ ಬ್ಯಾಂಡೇಜ್ ಹಾಕಿಕೊಂಡೇ ಕ್ರೀಸ್‌ಗೆ ಬಂದಿದ್ದರು.

36 ವರ್ಷದ ವೋಕ್ಸ್ ಅವರು 122 ಏಕದಿನ ಮತ್ತು 33 ಟಿ20 ಪಂದ್ಯಗಳನ್ನು ಆಡಿದ್ದು, ಕ್ರಮವಾಗಿ 1,524 ಮತ್ತು 147 ರನ್ ಗಳಿಸಿದ್ದಾರೆ. ಸೀಮಿತ ಓವರ್‌ಗಳ ಮಾದರಿಯಲ್ಲಿ ಒಟ್ಟು 204 ವಿಕೆಟ್‌ಗಳನ್ನು ಗಳಿಸಿದ್ದಾರೆ. 2023ರ ನವೆಂಬರ್‌ನಲ್ಲಿ ಕೊನೆಯ ಬಾರಿ ಏಕದಿನ ಮತ್ತು ಅದೇ ವರ್ಷ ಡಿಸೆಂಬರ್‌ನಲ್ಲಿ ಕೊನೆಯ ಬಾರಿ ಟಿ20 ಪಂದ್ಯವನ್ನು ಅವರು ಆಡಿದ್ದರು.

‘ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಲು ಇದು ಸಕಾಲ. ಇಂಗ್ಲೆಂಡ್ ಪರ ಆಡುವುದು ಬಾಲ್ಯದ ಕನಸಾಗಿತ್ತು. ಅದು ನನಸಾಗಿಸಲು ಸಾಧ್ಯವಾದದ್ದು ನನ್ನ ಅದೃಷ್ಟ ಎಂದು ಭಾವಿಸುತ್ತೇನೆ’ ಎಂದು ವೋಕ್ಸ್ ಹೇಳಿದರು.

ಚೆಸ್: ಅಗ್ರಸ್ಥಾನದಲ್ಲಿ ಕೇರಳದ ನಿತಿನ್

ಮಂಗಳೂರು: ಇಂಟರ್‌ನ್ಯಾಷನಲ್ ಮಾಸ್ಟರ್ ಬಿ.ಟಿ.ಮುರಳೀಕೃಷ್ಣ ಅವರಿಗೆ ದಿನದ ಕೊನೆಯ ಸುತ್ತಿನಲ್ಲಿ ಆಘಾತ ನೀಡಿದ ಕೇರಳದ ನಿತಿನ್ ಬಾಬು ಇಲ್ಲಿ ನಡೆಯುತ್ತಿರುವ ಗ್ರ್ಯಾಂಡ್ ಆರ್‌ಸಿಸಿ ಫಿಡೆ ರೇಟೆಡ್ ಅಂತರರಾಷ್ಟ್ರೀಯ ಚೆಸ್ ಟೂರ್ನಿಯಲ್ಲಿ ಸೋಮವಾರ ಅಗ್ರಸ್ಥಾನಕ್ಕೇರಿದರು. ಏಳು ಸುತ್ತುಗಳ ಕೊನೆಗೆ ನಿತಿನ್ ಗರಿಷ್ಠ 7 ಪಾಯಿಂಟ್‌ಗಳೊಂದಿಗೆ ಮುನ್ನಡೆ ಸಾಧಿಸಿದ್ದಾರೆ. ಮಂಗಳವಾರ ಕೊನೆಯ ಎರಡು ಸುತ್ತುಗಳು ನಡೆಯಲಿವೆ.

ಏಷ್ಯಾ ಕಪ್ ಟ್ರೋಫಿ ‘ಹೊತ್ತೊಯ್ದ’ ನಕ್ವಿ

• ಆರ್.ಕೌಶಿಕ್

ದುಬೈ: ಗಲ್ಲಿ ಕ್ರಿಕೆಟ್‌ನಲ್ಲಿ ಔಟಾದ ತಕ್ಷಣ ಬ್ಯಾಟನ್ನು ತಾನೇ ತಂದೆ ಎಂದು ಮುನಿಸಿಕೊಂಡು ಮನೆಗೆ ಒಯ್ಯುವ ಹುಡುಗನ ರೀತಿಯ ವರ್ತನೆಯನ್ನು ನೆನಪಿಸುವಂತಿತ್ತು– ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಕ್ವಿ ನಡೆ.

ಏಷ್ಯಾ ಕಪ್ ಟಿ20 ಟೂರ್ನಿ ಗೆದ್ದ ನಂತರ ಭಾರತ ತಂಡವು, ಪಾಕಿಸ್ತಾನದ ಗೃಹ ಸಚಿವ ನಕ್ವಿ ಅವರ ಕೈಯಿಂದ ಟ್ರೋಫಿ ಸ್ವೀಕರಿಸಲು ಸುತರಾಂ ಒಪ್ಪಲಿಲ್ಲ. ಏಷ್ಯಾ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷರಾಗಿ ಟ್ರೋಫಿ ಪ್ರದಾನ ಮಾಡುವುದು ತಮ್ಮ ಹಕ್ಕು ಎಂದು ಪ್ರತಿಪಾದಿಸಿದ ನಕ್ವಿ ಅವರು ಟ್ರೋಫಿಯೊಡನೆ ಹೊರಟರು. ಅವರ ಪ್ರತಿಷ್ಠೆಗೆ ಪೆಟ್ಟುಬಿದ್ದಂತಾಗಿತ್ತು.

ಭಾರತ ತಂಡದ ಅಭೂತಪೂರ್ವ ಒಂಬತ್ತನೇ ಟ್ರೋಫಿ ಗೆಲುವಿನ ಸಂಭ್ರಮವನ್ನು, ಪಂದ್ಯಾನಂತರದ ಈ ಅಹಿತಕರ ಬೆಳವಣಿಗೆಗಳು ಮಸುಕುಗೊಳಿಸಿದವು.

ಪ್ರಶಸ್ತಿಪ್ರದಾನ ಸಮಾರಂಭ ಒಂದು ಗಂಟೆ ತಡವಾಯಿತು. ಅನೌನ್ಸರ್ ಆಗಿದ್ದ ನ್ಯೂಜಿಲೆಂಡ್‌ನ ಮಾಜಿ ವೇಗಿ ಸೈಮನ್ ಡೂಲ್ ಅವರು ‘ಭಾರತ ತಂಡ ಇವತ್ತಿನ ರಾತ್ರಿ ಟ್ರೋಫಿಯನ್ನು ಸ್ವೀಕರಿಸುತ್ತಿಲ್ಲ ಎಂದು ಎಸಿಸಿ ತನಗೆ ತಿಳಿಸಿದೆ. ಪಂದ್ಯಾನಂತರದ ಸಮಾರಂಭ ಇಲ್ಲಿಗೇ ಮುಗಿಸಲಾಗಿದೆ’ ಎಂದರು.

ನಕ್ವಿ ಅವರಿಂದ ಪ್ರಶಸ್ತಿ ಸ್ವೀಕರಿಸಬಾರದೆಂಬುದು ತಂಡದ ನಿರ್ಧಾರವಾಗಿತ್ತು ಎಂದು ಮಧ್ಯರಾತ್ರಿ ಕಳೆದ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ ತಂಡದ ನಾಯಕ ಸೂರ್ಯಕುಮಾರ್ ಪ್ರತಿಕ್ರಿಯಿಸಿದರು. ಆಟಗಾರರೆಲ್ಲರೂ ಸೂಚನೆಗಳಂತೆ ನಡೆದುಕೊಳ್ಳುತ್ತಿದ್ದುದು ಸ್ಪಷ್ಟವಾಗಿತ್ತು. ಅದು ಯಾರದು ಎಂಬುದನ್ನು ಯಾರೂ ಊಹಿಸಬಹುದಿತ್ತು.

ಪ್ರಶಸ್ತಿ ಪ್ರದಾನ ಮಾಡುವುದಕ್ಕಾಗಿಯೇ ನಕ್ವಿ ಅವರು ಅಮೆರಿಕದಿಂದ ಭಾನುವಾರ ಬೆಳಗಿನ ಜಾವ ಇಲ್ಲಿಗೆ ತಲುಪಿದ್ದರು. ಏಪ್ರಿಲ್ 22ರ ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನದ ಬಗ್ಗೆ ಭಾರತದ ನಿಲುವು ಅವರಿಗೆ ತಿಳಿಯದ ವಿಷಯೇನೂ ಆಗಿರಲಿಲ್ಲ. ಗಡಿ ಸಂಘರ್ಷದ ವೇಳೆ ಅವರು ಭಾರತ ವಿರೋಧಿ ಹೇಳಿಕೆಗಳನ್ನು ನೀಡಿದ್ದರು.

ಆದರೆ ಎಸಿಸಿ ಅಧ್ಯಕ್ಷರೇ ರಜತ ಟ್ರೋಫಿ ಪ್ರದಾನ ಮಾಡಬೇಕೆಂಬ ನಿಯಮವೇನೂ ಇಲ್ಲ. ಲಿಖಿತವಾಗಿಯೂ ಇಲ್ಲ, ಸಂಪ್ರದಾಯವಾಗಿಯೂ ಇಲ್ಲ. 2022ರಲ್ಲಿ ಇಲ್ಲಿಯೇ (ದುಬೈ) ಶ್ರೀಲಂಕಾ ತಂಡ ಚಾಂಪಿಯನ್ ಆದಾಗ, ದಸುನ್ ಶನಕ ಅವರು ಶ್ರೀಲಂಕಾ ಮಂಡಳಿ ಅಧ್ಯಕ್ಷ ಶಮ್ಮಿ ಸಿಲ್ವ ಅವರಿಂದ ಟ್ರೋಫಿ ಸ್ವೀಕರಿಸಿದ್ದರು. ಆಗ ಎಸಿಸಿ ಮುಖ್ಯಸ್ಥರಾಗಿದ್ದವರು ಜಯ್ ಶಾ. ಈಗಿನ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಅಧ್ಯಕ್ಷ.

ಅಭೂತಪೂರ್ವ ಎನ್ನುವಂತೆ ಭಾರತ ತಂಡದವರು ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಒಂದು ಗಂಟೆಗೂ ಹೆಚ್ಚು ಹೊತ್ತು ಕಾದರು. ರಿಂಕು ಸಿಂಗ್ ವಿಜಯದ ಬೌಂಡರಿ ಗಳಿಸಿದ ತಕ್ಷಣ ಡ್ರೆಸಿಂಗ್ ರೂಮ್ ಸೇರಿಕೊಂಡಿದ್ದ ಸಲ್ಮಾನ್ ಆಘಾ ನೇತೃತ್ವದ ಪಾಕ್ ತಂಡದ ಆಟಗಾರರು 55 ನಿಮಿಷಗಳ ನಂತರ ಕ್ರೀಡಾಂಗಣಕ್ಕೆ ಮರಳಿದರು. ಆ ವೇಳೆಗೆ ಟ್ರೋಫಿಯೂ ವೇದಿಕೆಗೆ ಬಂದಿತ್ತು.

ತಾವು ಪ್ರದಾನ ಮಾಡದಿದ್ದರೆ ಬೇರೆಯಾರೂ ಮಾಡುವಂತಿಲ್ಲ ಎಂದು ನಕ್ವಿ ನಿರ್ಧರಿಸಿ ಬಂದಂತಿತ್ತು.

ತಮಗೆ ಸಲ್ಲಬೇಕಾದ ಟ್ರೋಫಿ (ಸಹ ಆಟಗಾರರ ಮತ್ತು ನೆರವು ಸಿಬ್ಬಂದಿ ಉಲ್ಲೇಖಿಸಿ) ಡ್ರೆಸಿಂಗ್ ರೂಮ್‌ನಲ್ಲಿದೆ ಎಂದು ಸೂರ್ಯಕುಮಾರ್ ಹೇಳಿದರು.

ಎಲ್ಲಿದೆ ಟ್ರೋಫಿ: ಭಾರತ ತಂಡ ತಮ್ಮಿಂದ ಟ್ರೋಫಿ ಸ್ವೀಕರಿಸಲು ಬರದ ಕಾರಣ ನಕ್ವಿ ಅವರು ಪೋಡಿಯಂನಿಂದ ಇಳಿದು ಹೊರನಡೆದರು. ಎಲ್ಲರಿಗೂ ಅಚ್ಚರಿಯಾಗುವ ರೀತಿ ಅವರ ಜೊತೆಗೆ ಕಾರ್ಯಕ್ರಮ ಆಯೋಜನಾ ಸಿಬ್ಬಂದಿಯೂ ಟ್ರೋಫಿಯೊಂದಿಗೆ ಹೆಜ್ಜೆಹಾಕಿದರು. ಟ್ರೋಫಿಯು ಎಸಿಸಿ ಹೆಡ್‌ಕ್ವಾರ್ಟರ್ಸ್‌ನಲ್ಲಿದೆ ಎಂದು ಹೇಳಲಾಗುತ್ತಿದೆ.


ಟ್ರೋಫಿ ಇಲ್ಲದೆ ಸಂಭ್ರಮಿಸಿದ ಭಾರತ ತಂಡದ ಆಟಗಾರರು ಎಎಫ್‌ಪಿ ಚಿತ್ರ

ನಕ್ವಿ ಅಸಮಾಧಾನ



ಭಾನುವಾರ ರಾತ್ರಿ ನಡೆದ ಬೆಳವಣಿಗೆಗಳ ಬಗ್ಗೆ ನಕ್ವಿ ಸಂಜೆಯವರೆಗೆ ಏನೂ ಪ್ರತಿಕ್ರಿಯಿಸಲಿಲ್ಲ. ಆದರೆ ಭಾರತ ತಂಡದ ಗೆಲುವಿಗೆ ಅಭಿನಂದಿಸಿ ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಾಕಿದ ಸಂದೇಶಕ್ಕೆ ಅಸಮಾಧಾನ ವ್ಯಕ್ತ ಪಡಿಸಿದರು. ಇದು ಆಟದ ಸ್ಫೂರ್ತಿಗೆ ವಿರುದ್ಧವಾಗಿದೆ ಎಂದರು.

‘ಆಟದ ಮೈದಾನದಲ್ಲೂ ‘ಅಪರೇಷನ್ ಸಿಂಧೂರ’.. ಫಲಿತಾಂಶ ಒಂದೇ– ಭಾರತದ ಆಟಗಾರರ ವಿಜಯ’ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದರು.

ಸೂರ್ಯ ಅಗೌರವ– ಆಘಾ: ಸೂರ್ಯಕುಮಾರ್ ಯಾದವ್ ಅವರನ್ನು ಟೀಕಿಸಿರುವ ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಅವರು, ಭಾರತ ತಂಡದ ನಾಯಕನ ವರ್ತನೆ ಆಟಕ್ಕೆ ಅಗೌರವ ತಂದಿದೆ ಎಂದಿದ್ದಾರೆ.

ಸಂಭಾವನೆ ದೇಣಿಗೆ ನೀಡುವೆ: ಸೂರ್ಯ

ದುಬೈ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿ ಪಡೆದ ಪೂರ್ಣ ಸಂಭಾವನೆಯನ್ನು ದೇಶದ ಸೇನಾಪಡೆ ಮತ್ತು ಪಹಲ್ಗಾಮ್ ದಾಳಿಯ ಸಂತ್ರಸ್ತರ ಕುಟುಂಬಕ್ಕೆ ನೀಡುವುದಾಗಿ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಹೇಳಿದ್ದಾರೆ. ಭಾನುವಾರ ರಾತ್ರಿ ನಡೆದ ತೀವ್ರ ಹೋರಾಟದ ಫೈನಲ್‌ನಲ್ಲಿ ತನ್ನ ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಿತ್ತು.

ಭಾರತದ ಆಟಗಾರರು ಟಿ20 ಮಾದರಿ ಪಂದ್ಯವೊಂದಕ್ಕೆ ತಲಾ ₹4 ಲಕ್ಷ ಪಡೆಯುತ್ತಾರೆ. ಇಲ್ಲಿ ಏಳು ಪಂದ್ಯ ಆಡಿರುವ ಸೂರ್ಯ ಒಟ್ಟು ₹28 ಲಕ್ಷ ಪಡೆದಿದ್ದು, ಅದನ್ನು ದೇಣಿಗೆಯಾಗಿ ನೀಡಲಿದ್ದಾರೆ.

₹21 ಕೋಟಿ ಬಹುಮಾನ ಪ್ರಕಟ

ಮುಂಬೈ (ಪಿಟಿಐ): ಯುಎಇಯಲ್ಲಿ ಅಜೇಯ ಸಾಧನೆಯೊಡನೆ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿ ಗೆದ್ದ ಭಾರತ ತಂಡ ಮತ್ತು ನೆರವು ಸಿಬ್ಬಂದಿಗೆ ₹21 ಕೋಟಿ ಬಹುಮಾನ ನೀಡುವುದಾಗಿ ಬಿಸಿಸಿಐ ಘೋಷಿಸಿದೆ.

2025ರ ಏಷ್ಯಾ ಕಪ್: ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ದೇಶ	ಪಂದ್ಯ	ರನ್	ಶ್ರೇಷ್ಠ	ಅರ್ಧಶತಕ
ಅಭಿಷೇಕ್ ಶರ್ಮಾ	ಭಾರತ	7	314	75	3
ಪಥುಮ್ ನಿಸಾಂಕ	ಶ್ರೀಲಂಕಾ	6	261	107	2
ಸಾಹೀಬ್‌ಝಾದಾ ಫರ್ಹಾನ್	ಪಾಕಿಸ್ತಾನ	7	217	58	2
ತಿಲಕ್ ವರ್ಮಾ	ಭಾರತ	7	213	69*	1
ಫಕರ್ ಜಮಾನ್	ಪಾಕಿಸ್ತಾನ	7	181	50	1

ಏಷ್ಯಾ ಕಪ್: ಹೆಚ್ಚು ವಿಕೆಟ್ ಪಡೆದವರು

ಬೌಲರ್	ದೇಶ	ಪಂದ್ಯ	ವಿಕೆಟ್	ಶ್ರೇಷ್ಠ	ಸರಾಸರಿ
ಕುಲದೀಪ್ ಯಾದವ್	ಭಾರತ	7	17	7ಕ್ಕೆ 4	9.29
ಶಾಹೀನ್ ಶಾ ಆಫ್ರಿದಿ	ಪಾಕಿಸ್ತಾನ	7	10	17ಕ್ಕೆ 3	16.40
ಜುನೈದ್ ಸಿದ್ದೀಕ್	ಯುಎಇ	3	9	18ಕ್ಕೆ 4	6.33
ಮುಸ್ತಫಿಜುರ್ ರೆಹಮಾನ್	ಬಾಂಗ್ಲಾದೇಶ	6	9	20ಕ್ಕೆ 3	19.00
ಹ್ಯಾರಿಸ್ ರವೂಫ್	ಪಾಕಿಸ್ತಾನ	5	9	33ಕ್ಕೆ 3	18.33

ರಾಷ್ಟ್ರೀಯ ಶಿಬಿರ ಸೇರಿಕೊಂಡ ಚೆಟ್ರಿ, ಭೆಕೆ

ನವದೆಹಲಿ (ಪಿಟಿಐ): ದಿಗ್ಗಜ ಆಟಗಾರ ಸುನಿಲ್ ಚೆಟ್ರಿ ಮತ್ತು ಅವರ ಬಿಎಫ್‌ಸಿ ತಂಡದ ಇನ್ನಿಬ್ಬರು ಸಹ ಆಟಗಾರರಾದ ರಾಹುಲ್ ಭೆಕೆ ಮತ್ತು ರೋಶನ್ ಸಿಂಗ್ ನವೋರೆಮ್ ಅವರು ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತಂಡದ ಸಿದ್ಧತಾ ಶಿಬಿರವನ್ನು ಸೋಮವಾರ ಸೇರಿಕೊಂಡರು.

ಮುಂಬರುವ ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈಯರ್ಸ್‌ನಲ್ಲಿ ಸಿಂಗಪುರ ವಿರುದ್ಧ ಪಂದ್ಯಗಳಿಗೆ ಸಜ್ಜಾಗಲು ಈ ಶಿಬಿರ ನಡೆಯುತ್ತಿದೆ. ಈ ಮೂವರ ಸೇರ್ಪಡೆಯಿಂದ ಶಿಬಿರದಲ್ಲಿ ಭಾಗವಹಿಸಿರುವ ಆಟಗಾರರ ಸಂಖ್ಯೆ 28ಕ್ಕೆ ಏರಿದೆ. ಹೆಡ್ ಕೋಚ್ ಖಾಲಿದ್ ಜಮಿಲ್ ಅವರು 30 ಮಂದಿ ಸಂಭವನೀಯ ಆಟಗಾರರನ್ನು ಆಯ್ಕೆ ಮಾಡಿದ್ದರು. ಸಿಂಗಪುರ ವಿರುದ್ಧ ಭಾರತವು ಅ. 9ರಂದು (ತವರಿನಿಂದಾಚೆ) ಮತ್ತು ಅ. 14ರಂದು (ತವರಿನಲ್ಲಿ) ಪಂದ್ಯಗಳನ್ನು ಆಡಲಿದೆ.


ಸುನಿಲ್ ಚೆಟ್ರಿ

ಸೆ. 20ರಂದು ಶಿಬಿರ ಆರಂಭವಾದಾಗ ಬರೇ 18 ಮಂದಿ ಭಾಗವಹಿಸಿದ್ದರು. ಚೆಟ್ರಿ ಸೇರಿದಂತೆ 14 ಮಂದಿಯನ್ನು ಆಯಾ ಆಟಗಾರರ ಕ್ಲಬ್‌ಗಳು ನಿಟ್ಟುಕೊಟ್ಟಿರಲಿಲ್ಲ.

‘ಸುನಿಲ್ ಚೆಟ್ರಿ, ರಾಹುಲ್ ಭೆಕೆ ಮತ್ತು ರೋಷನ್ ಸಿಂಗ್ ನವೋರೆಮ್ ಅವರು ಇಂದು ರಾಷ್ಟ್ರೀಯ ಶಿಬಿರ ಸೇರಿಕೊಂಡಿದ್ದಾರೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಎಕ್ಸ್‌ನಲ್ಲಿ ತಿಳಿಸಿದೆ.

ಹೈದರಾಬಾದ್ ರೇಸ್

ಕ್ರಿಮ್‌ಸನ್ ಫ್ಲೇಮ್ ಗೆಲ್ಲುವ ನಿರೀಕ್ಷೆ

ಬೀ ಮೈ ಗೆಸ್ಟ್ ಪ್ಲೇಟ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ರಿಮ್‌ಸನ್ ಫ್ಲೇಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1:20ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫ್ಲಾಶಿಂಗ್ ಮೆಮೋರೀಸ್ 3, ಫಾರ್ಚೂನ್ ಆರ್ಟ್ 6, ಲಂಡನ್ ಬೆಲ್ 1
2ನೇ ರೇಸ್: ಲಾ ಫ್ಲೂರೀರ್ 6, ಸ್ಟೇಟ್ ಮ್ಯಾನ್ 4, ಗಸ್ಟೋಸ್ ಬೇಬಿ 5
3ನೇ ರೇಸ್: ಕಾಸ್ಮಿಕೊ 3, ಕೋಲ್ಟ್ ಪಿಸ್ಟೋಲ್ 1, ಎಮಿನೆನ್ಸಿ 7
4ನೇ ರೇಸ್: ಶಾರಂಗ 3, ಬೆಸ್ಟಿ 5, ಮೂನ್‌ಲೈಟ್ ರೋಸ್ 8
5ನೇ ರೇಸ್: ಸ್ಟಾರ್ ಮೆಡಲ್ 2, ಕ್ಲಾಸಿಕಲ್ ಮ್ಯೂಸಿಕ್ 3, ಟಾಪ್ ಇನ್ ಕ್ಲಾಸ್ 1
6ನೇ ರೇಸ್: ಕ್ರಿಮ್‌ಸಮ್ ಫ್ಲೇಮ್ 5, ಕ್ಲಾರಾ 3, ಗ್ಲೋರಿಯಸ್ ಪವರ್ 6
7ನೇ ರೇಸ್: ಅಸ್ಯೂರ್ಡ್ ಸಕ್ಸಸ್ 4, ಬ್ಲೂ ಪ್ಯಾಂಥರೆಸ್ 3, ಅಮೆರಿಕನ್ ಫ್ಲೇಮ್ 5

ಉತ್ತಮ ಬೆಟ್: ಶಾರಂಗ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬಿಟಿಸಿಗೆ ಸ್ಟೀವರ್ಡ್ಸ್, ಸಮಿತಿ ಸದಸ್ಯರ ಆಯ್ಕೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ ವಾರ್ಷಿಕ ಸಾಮಾನ್ಯ ಸಭೆ ಸೋಮವಾರ ನಡೆಯಿತು. ಕೆಳಕಂಡ ಸ್ಟೀವರ್ಡ್ಸ್, ಸಮಿತಿ ಸದಸ್ಯರು, ಬೋರ್ಡ್ ಆಫ್ ಅಪೀಲ್ ಸದಸ್ಯರನ್ನು ಆಯ್ಕೆ ಮಾಡಲಾಗಿದೆ ಎಂದು ಬಿ.ಟಿ.ಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಟೀವರ್ಡ್ಸ್: ಕೆ.ಉದಯ್ ಈಶ್ವರನ್, ಶಂಕರ್ ಬಾಲು ಮತ್ತು ಅರವಿಂದ ಎಸ್. ಕಾತರಕಿ ; ಸಮಿತಿ ಸದಸ್ಯರು: ಎಂ.ಸಿ. ಮಂಜುನಾಥ್ ಅರಸ್, ಕೆ.ಶಾಶ ಬಿಂದು ದಾಸ್; ಬೋರ್ಡ್ ಆಫ್ ಅಪೀಲ್ ಸದಸ್ಯರು: ವೈ.ಜಗನ್ನಾಥ್, ಸತೀಶ್ ಎನ್. ಗೌಡ, ವಿವೇಕ್ ಜಿ.ಉಭಯಕರ್, ಕೆ. ಜಯರಾಮ್ ಮತ್ತು ರಂಜನ್ ಚೋನ.

ಈಜು: ಶ್ರೀಹರಿಗೆ ಮತ್ತೊಂದು ಪದಕ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಕರ್ನಾಟಕದ ಈಜು ತಾರೆ ಶ್ರೀಹರಿ ನಟರಾಜ್ ಅವರು 11ನೇ ಏಷ್ಯನ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮತ್ತೊಂದು ಪದಕ ಜಯಿಸಿದರು. ಅವರು, ಕರ್ನಾಟಕದವರೇ ಆದ ಅನೀಶ್ ಗೌಡ, ಸಜನ್ ಪ್ರಕಾಶ್ ಹಾಗೂ ಶೋನ್ ಗಂಗೂಲಿ ಜೊತೆಗೂಡಿ 4x200 ಮೀ. ಫ್ರೀಸ್ಟೈಲ್‌ನಲ್ಲಿ ಸೋಮವಾರ ಬೆಳ್ಳಿ ಪದಕ ಜಯಿಸಿದರು.

ಅಂತಿಮ ಕ್ಷಣದಲ್ಲಿ ಶ್ರೀಹರಿ ಅವರು ತೋರಿದ ಮಿಂಚಿನ ಪ್ರದರ್ಶನದಿಂದಾಗಿ ಭಾರತ ತಂಡವು 7ನಿ., 23.38 ಸೆಕೆಂಡುಗಳಲ್ಲಿ ಗುರಿ ತಲುಪಿತು. ಮಲೇಷ್ಯಾ (7:23.43) ಕಂಚಿಗೆ ತೃಪ್ತಿಪಟ್ಟಿತು.

ಡೈವಿಂಗ್‌ನಲ್ಲಿ ಚಾರಿತ್ರಿಕ ಕಂಚು: ಮಣಿಪುರದ ಸಾಯಿರಾಮ್ ಮತ್ತು ವಿಲ್ಸನ್ ಸಿಂಗ್ ನಿಂಗ್‌ತೌಜಮ್ ಅವರು ಪುರುಷರ 10 ಮೀಟರ್ ‘ಸಿಂಕ್ರೊನೈಸ್ ಡೈವಿಂಗ್’ನಲ್ಲಿ ಚಾರಿತ್ರಿಕ ಕಂಚಿನ ಪದಕ ಗೆದ್ದರು.

ಡೈವಿಂಗ್‌ನಲ್ಲಿ ಭಾರತದ ಸ್ಪರ್ಧಿಗಳು ಇದೇ ಮೊದಲ ಬಾರಿಗೆ ಪದಕದ ಸಾಧನೆ ಮಾಡಿದ್ದಾರೆ. ಈ ಮೂಲಕ ಮುಂದಿನ ವರ್ಷ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೂ ಅರ್ಹತೆ ಪಡೆಯುವ ಹೊಸ್ತಿಲಲ್ಲಿದ್ದಾರೆ.

ಸಾಯಿರಾಮ್ ಮತ್ತು ವಿಲ್ಸನ್ ಅವರು 300.66 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಚೀನಾದ ಜಾಂಗ್ಯು ಕುಯಿ ಮತ್ತು ಜಾನ್‌ಹಾಂಗ್ ಕ್ಸು (381.75) ಮತ್ತು ಮಲೇಷ್ಯಾದ ಬಟ್ರ್ರಾಂಡ್ ರೋಡಿಕ್ಟ್ ಲಿಸೆಸ್ ಮತ್ತು ಎನ್ರಿಕ್ ಎಂ. ಹೆರಾಲ್ಡ್ (329.73) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

1,500 ಮೀಟರ್ ಫ್ರೀಸ್ಟೈಲ್‌ನಲ್ಲಿ ಕುಶಾಗ್ರ ರಾವತ್ ಹಾಗೂ 200 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ರಿಷಭ್ ದಾಸ್ ಅವರು ಕಂಚು ಜಯಿಸಿದರು.

ಟಿ.ಟಿ: ಹಿಮಾಂಶಿಗೆ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶಸ್ಸಿನ ಓಟ ಮುಂದು ವರಿಸಿದ ಹಿಮಾಂಶಿ ಚೌಧರಿ ಅವರು ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 19 ವರ್ಷದೊಳಗಿನ ಬಾಲಕಿಯರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದರು.

ಜಯನಗರ ಟೇಬಲ್ ಟೆನಿಸ್ ಸಂಸ್ಥೆ (ಜೆಟಿಟಿಎ) ಆಶ್ರಯದಲ್ಲಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ನಡೆದ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಹಿಮಾಂಶಿ ಅವರು 13-11, 11-2, 9-11, 11-4, 11-8ರಿಂದ ತೃಪ್ತಿ ಪುರೋಹಿತ್ ಎದುರು ರೋಚಕ ಜಯ ಸಾಧಿಸಿದರು.

ಮಹಿಳೆಯರ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ತೃಪ್ತಿ 11-4, 11-6, 11-5, 13-11ರಿಂದ ಸಹನಾ ಮೂರ್ತಿ ವಿರುದ್ಧ; ಹಿಮಾಂಶಿ 7-11, 8-11, 11-3, 11-13, 11- 7, 11-8, 11-6ರಿಂದ ವೇದಲಕ್ಷ್ಮಿ ವಿರುದ್ಧ ಜಯ ಸಾಧಿಸಿದ್ದರು.

19 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಹಿಮಾಂಶಿ 9-11, 11-3, 5-11, 11-7, 11-8, 11-2ರಿಂದ ಇರೆನ್ ಅನ್ನಾ ಸುಭಾಷ್ ಅವರನ್ನು ಸೋಲಿಸಿದರು.

ವರುಣ್ ಚಾಂಪಿಯನ್: ವರುಣ್ ಕಶ್ಯಪ್ ಅವರು ಪುರುಷರ ವಿಭಾಗದಲ್ಲಿ 12-10, 8-11, 11-8, 7-11, 11-5, 11-5ರಿಂದ ಸಂಜಯ್ ಮಾಧವನ್ ಅವರನ್ನು ಮಣಿಸಿ, ಪ್ರಶಸ್ತಿಗೆ ಮುತ್ತಿಕ್ಕಿದರು.



(ಎಡದಿಂದ) ಪ್ರಶಸ್ತಿಯೊಂದಿಗೆ ವರುಣ್ ಕಶ್ಯಪ್, ಅಭಿನವ್ ಮೂರ್ತಿ ಹಾಗೂ ಹಿಮಾಂಶಿ ಚೌಧರಿ

ಉದಯೋನ್ಮುಖ ಆಟಗಾರ ಅಭಿನವ್ ಮೂರ್ತಿ 19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಪ್ರಶಸ್ತಿ ಸುತ್ತಿನಲ್ಲಿ ಅವರು 11-5, 6-11, 13-11, 11-7, 7-11, 11-8ರಿಂದ ಅಥರ್ವ ನವರಂಗೆ ಅವರನ್ನು ಸೋಲಿಸಿದರು.

ಪ್ರಜಾವಾಣಿ

ನವವರ್ಣ

ಗುಲಾಬಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಮಂಗಳವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಮನು & ಗೆಳತಿಯರು, MPM ಲೇಔಟ್


ರಕ್ಷಿತಾ & ತಂಡ, ಜಯನಗರ


ಸುಮನಾ & ಗೆಳತಿಯರು, ಬೆಂಗಳೂರು


ಅಪರ್ಣಾ & ಗೆಳತಿಯರು, ಚೈತನ್ಯನಗರ


ಆಶಾರಾಣಿ & ಗೆಳತಿಯರು, ಧಾರವಾಡ


ಶ್ರೀದೇವಿ & ಗೆಳತಿಯರು


ತರುಣಿ ಸತ್ಸಂಗ ತಂಡ, ಇಸ್ರೋ ಲೇಔಟ್


ಪದ್ಮಾ & ಗೆಳತಿಯರು, ಬೆಂಗಳೂರು


ಮಂಜುಳಾ & ಗೆಳತಿಯರು, ಸುಮನಹಳ್ಳಿ


ಲಕ್ಷ್ಮಿ & ಶ್ರೀವಿದ್ಯಾ, ಬೆಂಗಳೂರು


ಸವಿತಾ & ಜ್ಯೋತಿ, ನಾಗರಭಾವಿ



ಕನಕಾ ಲೇಔಟ್ ಗೆಳತಿಯರು, ಬೆಂಗಳೂರು


ಕವನಾ & ಗೆಳತಿಯರು, ಜೆಪಿ ನಗರ


ಭಾಗ್ಯ & ಗೆಳತಿಯರು, ಜಿಟಿ ಲೇಔಟ್


ನೀಲಕಂಠ ಜೆವೆಲ್ಲೇರಿ ಸಿಬ್ಬಂದಿ, ಬೆಂಗಳೂರು


ಯಮುನಾ, HSR ಲೇಔಟ್


ಮಾನಸ & ವೈನವಿ, ಚಾಮರಾಜಪೇಟೆ


ಸುಮಾ & ಗೆಳತಿಯರು, ರಾಜಾಜಿನಗರ


ಲತಾ & ಮಕ್ಕಳು, ಬೆಂಗಳೂರು


ಪೂರ್ಣಿಮಾ & ಗೆಳತಿಯರು, ಆರ್‌ಟಿ ನಗರ


PWD ಗುಣಮಟ್ಟ ಭರವಸೆ ಸಿಬ್ಬಂದಿ, ಮೈಸೂರು


ಮಂಜುಳಾ & ಗೆಳತಿಯರು, ಬನಶಂಕರಿ

ಇಂದಿನ ಬಣ್ಣ - ಗುಲಾಬಿ


ಸಾರಸ & ಗೆಳತಿಯರು, ಬೆಂಗಳೂರು


ಸುಜಾತಾ & ಗೆಳತಿಯರು, SBM ಕಾಲೋನಿ


ಶ್ರೀ ಯೋಗ ಕೇಂದ್ರ, BTM ಲೇಔಟ್


ಪಲ್ಲವಿ & ಗೆಳತಿಯರು, ಬಾಣಸವಾಡಿ


ಗಾಯತ್ರಿ & ಗೆಳತಿಯರು, ಕೊರಟಗೆರೆ


ಛಾಯಾ & ಗೆಳತಿಯರು, ಬನಶಂಕರಿ


ಶೋಭಾ & ಗೆಳತಿಯರು, ಶಾರದಾ ನಗರ


ಸತ್ಯಭಾಮಾ & ಗೆಳತಿಯರು, ವಿಕಾಸ ಸೌಧ


ಕವಿತಾ & ಗೆಳತಿಯರು, ವಿಜಯನಗರ

ಮಂಗಳವಾರ, ಸೆಪ್ಟೆಂಬರ್ 30, 2025 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬೆಳ್ಳಿ ಬೆಲೆ ₹1.50 ಲಕ್ಷ

ನವದೆಹಲಿಯ ಚಿನಿವಾರ ಪೇಟೆಯಲ್ಲಿ ಬೆಳ್ಳಿಯ ಬೆಲೆಯು ಸೋಮವಾರ ಕೆ.ಜಿ.ಗೆ ₹1.50 ಲಕ್ಷ ಆಗಿದೆ



ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..



ಭೀಮೆ ಪ್ರವಾಹ: ತಗ್ಗದ ಭೀತಿ, ಬವಣೆ

ನೆರೆ ಸಂತ್ರಸ್ತರಿಗೆ ಆತಂಕ • ಮಹಾರಾಷ್ಟ್ರದಿಂದ ಮತ್ತೆ 3.25 ಲಕ್ಷ ಕ್ಯೂಸೆಕ್ ನೀರು ನದಿಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಸೋಮವಾರ ಮಳೆ ಬಿಡುವು ಕೊಟ್ಟಿದ್ದರೂ ಪ್ರವಾಹ ಮಾತ್ರ ಇನ್ನೂ ತಗ್ಗಿಲ್ಲ. ಮೂರ್ನಾಲ್ಕು ದಿನಗಳ ಬಳಿಕ ಬಿಸಿಲು ಕಾಣಿಸಿಕೊಂಡಿತಾದರೂ ನದಿ ಪಾತ್ರದ ಜನರ ಮೊಗದಲ್ಲಿ ನೆರೆ ಭೀತಿಯ ಛಾಯೆ ಪ್ರತಿಫಲಿಸುತ್ತಿತ್ತು.

ಕಲಬುರಗಿ ಜಿಲ್ಲಾಡಳಿತವು ಸಮರೋಪಾದಿಯಲ್ಲಿ ಪರಿಹಾರ ಕಾರ್ಯಾಚರಣೆ ನಡೆಸುತ್ತಿದ್ದು, ಭೀಮಾ ನದಿಯ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ ನೆರೆಪೀಡಿತ ಗ್ರಾಮಗಳ ಹಲವು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿತು. ನೆರೆ ಸಂತ್ರಸ್ತರ ಪೈಕಿ ಹಲವರು ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಕೆಲವರು ಪ್ರವಾಹ ತಗ್ಗುವ ನಿರೀಕ್ಷೆಯಿಂದ ಜಲಾವೃತಗೊಂಡಿರುವ ಗ್ರಾಮಗಳಲ್ಲಿರುವ ತಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದಾರೆ. ಪ್ರವಾಹದ ನೀರು ಮನೆಯನ್ನು ಹೊಕ್ಕಿದ್ದರಿಂದ ಹಾವು, ಚೇಳುಗಳಂತಹ ವಿಷ ಜಂತುಗಳು ಸೇರಿಕೊಂಡ ಭೀತಿ ಸಂತ್ರಸ್ತರನ್ನು ಕಾಡುತ್ತಿದೆ.

ಮಹಾರಾಷ್ಟ್ರದ ಉಜನಿ, ವೀರ್ ಮತ್ತು ಸೀನಾ ಜಲಾಶಯಗಳಿಂದ ಸೋಮವಾರ 3.25 ಲಕ್ಷ ಕ್ಯೂಸೆಕ್ ನೀರನ್ನು ಹರಿಬಿಟ್ಟಿರುವುದರಿಂದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಭೀಮಾ ನದಿ ಪಾತ್ರದಲ್ಲಿ ಮತ್ತೆ ಪ್ರವಾಹದ ಭೀತಿ ಆವರಿಸಿದೆ. ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದೊಂದಿಗೆ ಸಂಪರ್ಕಿಸುವ ಜೇವರ್ಗಿ ಸಮೀಪದ ಕಟ್ಟಿಸಂಗಾವಿ ಸಮೀಪದ ಎರಡೂ ಸೇತುವೆಗಳು ಸೋಮವಾರ ಸಂಚಾರಕ್ಕೆ ಮುಕ್ತವಾಗಿವೆ. ಎರಡು ದಿನಗಳಿಂದ ನಿಂತು ಕೊಂಡಿದ್ದ ನೂರಾರು ಲಾರಿಗಳು ಸಂಚರಿಸಿದವು.

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕಡಬೂರು, ಜೇವರ್ಗಿ ತಾಲ್ಲೂಕಿನ ಮಂದರವಾಡ, ಕೋಬಾಳ, ಕೂಡಿ, ಕಲಬುರಗಿ ತಾಲ್ಲೂಕಿನ ಸರಡಗಿ, ಫಿರೋಜಾಬಾದ್, ನದಿ ಸಿನ್ನೂರ, ಶಹಾಬಾದ್ ತಾಲ್ಲೂಕಿನ ಹೊನಗುಂಟಾ, ಅಫಜಲಪುರ ತಾಲ್ಲೂಕಿನ ಭೀಮಾ ನದಿ ಪಾತ್ರದ ಗ್ರಾಮಗಳಲ್ಲಿ ಪ್ರವಾಹ ಕೊಂಚ ಕಡಿಮೆಯಾಗಿದೆಯಾದರೂ ಜಲ ದಿಗ್ಬಂಧನ ಇನ್ನೂ ತೆರವುಗೊಂಡಿಲ್ಲ.

ಅಫಜಲಪುರದ ಸೊನ್ನ ಬ್ಯಾರೇಜಿನಿಂದ ಭೀಮಾ ನದಿಗೆ 2.85 ಲಕ್ಷ ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ. ಮಹಾರಾಷ್ಟ್ರದ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಬಂದಿರುವ ನೀರು ಮುಂದಿನ 48 ಗಂಟೆಗಳಲ್ಲಿ ಸೊನ್ನ ಭೀಮಾ ಬ್ಯಾರೇಜ್ ತಲುಪಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯ ವಾಡಿ ಸಮೀಪದ ಗ್ರಾಮಗಳಲ್ಲಿ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ (ಎನ್‌ಡಿಆರ್‌ಎಫ್) ಹಾಗೂ ಅಫಜಲಪುರ, ಜೇವರ್ಗಿ, ಚಿತ್ತಾಪುರ, ಚಿಂಚೋಳಿ ತಾಲ್ಲೂಕುಗಳಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆ (ಎಸ್‌ಡಿಆರ್‌ಎಫ್) ಹಾಗೂ ಅಗ್ನಿಶಾಮಕ ತಂಡಗಳು ಬೀಡುಬಿಟ್ಟಿವೆ. ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುತ್ತಿವೆ. ಜಿಲ್ಲೆಯ 88 ಗ್ರಾಮಗಳು ಪ್ರವಾಹಕ್ಕೆ ತುತ್ತಾಗಿದ್ದು, ಒಟ್ಟಾರೆ 37 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಇದುವರೆಗೆ ಕಲಬುರಗಿ ಜಿಲ್ಲೆಯಲ್ಲಿ 5,785 ಜನರನ್ನು ಸುರಕ್ಷಿತ ನೆಲೆಗಳಿಗೆ ಸ್ಥಳಾಂತರಿಸಲಾಗಿದೆ.

▶2



ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕಡಬೂರ ಗ್ರಾಮವು ಭೀಮಾ ನದಿ ಪ್ರವಾಹದಿಂದ ಜಲಾವೃತವಾಗಿದ್ದು, ಅಗ್ನಿಶಾಮಕ ದಳ ಹಾಗೂ ಎಸ್‌ಡಿಆರ್‌ಎಫ್ ತಂಡದವರು ಸೋಮವಾರ ನೆರೆ ಸಂತ್ರಸ್ತರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಾಳಜಿ ಕೇಂದ್ರದಲ್ಲಿ ವೃದ್ಧ ಸಾವು

ಯಾದಗಿರಿ: ಜಿಲ್ಲೆಯ ವಡಗೇರಾ ತಾಲ್ಲೂಕಿನ ಬೆಂಡೆಬೆಂಬಳಿ ಗ್ರಾಮದ ಮೊರಾರ್ಜಿ ವಸತಿ ಶಾಲೆಯ ಕಾಳಜಿ ಕೇಂದ್ರದಲ್ಲಿ ಶಿವನೂರ ಗ್ರಾಮದ ನೆರೆ ಸಂತ್ರಸ್ತ ಗ್ರಾಮದ ಹಣಮಂತರಾಯ ಸಿದ್ದಪ್ಪ (75) ಅನಾರೋಗ್ಯದಿಂದ ಮೃತಪಟ್ಟಿದ್ದಾರೆ. ಸಿದ್ದಪ್ಪ ಅವರು ದಮ್ಮು ಮತ್ತು ಕೆಮ್ಮಿನಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ ಮಾತ್ರ ಇದ್ದು, ಗ್ರಾಮಸ್ಥರೇ ಅಂತ್ಯ ಸಂಸ್ಕಾರ ಮಾಡಿದರು.

ಸಿ.ಎಂ ವೈಮಾನಿಕ ಸಮೀಕ್ಷೆ ಇಂದು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ವಿಮಾನದ ಮೂಲಕ ಇದೇ 30ರಂದು ಬೆಳಿಗ್ಗೆ 10.40ಕ್ಕೆ ಕಲಬುರಗಿಗೆ ಬರಲಿದ್ದು, ಪ್ರವಾಹ ಪರಿಸ್ಥಿತಿ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸುವರು.



ಬಳಿಕ ಮಧ್ಯಾಹ್ನ 12.30ರಿಂದ ಮಧ್ಯಾಹ್ನ 1.30ರವರೆಗೆ ಜಿಲ್ಲೆ ಸೇರಿದಂತೆ ಮಳೆ ಹಾನಿ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸುವರು. ನಂತರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಲಬುರಗಿ, ಬೀದರ್, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಗಳ ಮಳೆಹಾನಿ ಪ್ರದೇಶಗಳಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ.

ನೆರೆ ಹಾವಳಿ ವೀಕ್ಷಿಸಿದ ಬಿಜೆಪಿ ನಿಯೋಗ

ಬೀದರ್: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮೇಲ್ಮನೆಯ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ನಿಯೋಗವು ಸೋಮವಾರ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ರೈತರ ಸಮಸ್ಯೆ ಆಲಿಸಿತು. ಬೀದರ್, ಕಮಲನಗರ, ಭಾಲ್ಕಿ ಹಾಗೂ ಹುಮನಾಬಾದ್ ತಾಲ್ಲೂಕಿನಲ್ಲಿ ಪ್ರವಾಹದಿಂದ ಆಗಿರುವ ಸಮಸ್ಯೆಯನ್ನು ವೀಕ್ಷಿಸಿದರು.

▶2

8.60 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ



ಕೃಷ್ಣಬೈರೇಗೌಡ

ಬೆಂಗಳೂರು: ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ಸುಮಾರು 8.60 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಈ ವಿಷಯ ತಿಳಿಸಿದ ಅವರು, ಸಂತ್ರಸ್ತರ ಪರಿಹಾರಕ್ಕೆ ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಯಲ್ಲಿ ₹1,354 ಕೋಟಿ ಇದೆ. ಆ ಹಣವನ್ನು ಪರಿಹಾರ ವಿತರಣೆಗೆ ಬಳಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಮಳೆ ಸಂಪೂರ್ಣ ನಿಂತ ಬಳಿಕ ಬೆಳೆ ಸಮೀಕ್ಷೆ ಆರಂಭಿಸಲಾಗುವುದು ಎಂದು ಅವರು ಹೇಳಿದರು.

‘ಸುಮಾರು 75 ಕಡೆಗಳಲ್ಲಿ ನೆರವು ಕೇಂದ್ರಗಳನ್ನು ಸ್ಥಾಪಿಸಿದ್ದು, 8,919 ಜನ ಈ ಕೇಂದ್ರಗಳಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಇವರಿಗೆ ಊಟ, ವಸತಿ ಮತ್ತು ಮಲಗಿಕೊಳ್ಳುವುದಕ್ಕೂ ವ್ಯವಸ್ಥೆ ಮಾಡಿದ್ದೇವೆ. ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತಿದ್ದೇವೆ’ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಈ ಬಾರಿ ವಾಡಿಕೆಗಿಂತ ಶೇ 4ರಷ್ಟು ಹೆಚ್ಚು ಮಳೆ ಬಂದಿದೆ. ಕೆಲವು ಜಿಲ್ಲೆಗಳಲ್ಲಿ ಮಳೆ ಕಡಿಮೆ ಆಗಿದೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಹೆಚ್ಚಿನ ಮಳೆಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಶೇ 58ಕ್ಕಿಂತ ಹೆಚ್ಚು ಮಳೆಯಾಗಿದೆ. ಮಲೆನಾಡು, ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಮಳೆಯ ಅಬ್ಬರ ಕಡಿಮೆ ಆಗಿದೆ ಎಂದರು.



‘ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗಿರುವುದರಿಂದ ಬೆಳೆ ಹಾನಿಯೂ ಹೆಚ್ಚಾಗಿದೆ. ಈ ಭಾಗದಲ್ಲಿ ನಿರಂತರವಾಗಿ ಮಳೆ ಆಗುತ್ತಿರುವುದರಿಂದ ಕೃಷ್ಣಾ ಮತ್ತು ಭೀಮಾ ನದಿ ಪಾತ್ರದಲ್ಲಿ ಪ್ರವಾಹ ಬಂದಿದೆ. ಉಜನಿ ಜಲಾಶಯದಿಂದ ಹೆಚ್ಚು ನೀರು ಬಿಡಲಾಗಿದೆ. ಭೀಮಾದಲ್ಲಿ 2.8 ಲಕ್ಷ ಕ್ಯೂಸೆಕ್ ನೀರು ಹರಿಯುತ್ತಿದೆ. ಬೆಣ್ಣೆತೊರಾ, ಕಾಗಿಣ ನದಿಗಳಲ್ಲೂ ನೀರಿನ ಹರಿವು ಹೆಚ್ಚಾಗಿದೆ’ ಎಂದರು.

‘ಎಲ್ಲಿಯೂ ಪ್ರಾಣ ಹಾನಿಯಾಗಿಲ್ಲ. ಇದು ನಮಗೆ ಸಮಾಧಾನ ತಂದಿದೆ. ಬೆಳೆ ಹಾನಿಗೆ ಪರಿಹಾರ ಪಾವತಿಸುತ್ತೇವೆ. ಆಸ್ತಿಗಳಿಗೆ ಸೀಮಿತವಾಗಿ ಹಾನಿಯಾಗಿದೆ. ರಸ್ತೆ–ಮೋರಿಗಳಿಗೂ ಹಾನಿಯಾಗಿದೆ’ ಎಂದು ಸಚಿವರು ಹೇಳಿದರು.

‘ನಾವು ಒಂದು ತಿಂಗಳಿಂದ ಮಳೆ–ಪ್ರವಾಹ ಪೀಡಿತ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದೇವೆ. ವಿರೋಧ ಪಕ್ಷದ ನಾಯಕರು ಈಗ ನಿದ್ದೆಯಿಂದ ಎದ್ದಂತೆ ಕಾಣುತ್ತಿದೆ. ಹೀಗಾಗಿ ಅವರು ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ನೀಡುತ್ತಿದ್ದಾರೆ. ಅವರು ಬಂದು ಪರಿಶೀಲನೆ ನಡೆಸಲಿ. ಜನರಿಗೆ ಒಳ್ಳೆಯದಾಗಲಿ’ ಎಂದರು.



ಕೇಂದ್ರ ಸರ್ಕಾರ ತನ್ನ ಪಾಲಿನ ಪರಿಹಾರದ ಹಣವನ್ನು ನೀಡುತ್ತದೆ. ರಾಜ್ಯ ಸರ್ಕಾರ ತಕ್ಷಣವೇ ₹3,000 ಕೋಟಿ ಪರಿಹಾರವನ್ನು ಘೋಷಿಸಿ, ಬಿಡುಗಡೆ ಮಾಡಬೇಕು

ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಮೇಲ್ಮನವಿಗೆ 14 ವರ್ಷ ವಿಳಂಬ ಸರ್ಕಾರಕ್ಕೆ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀರಾಮ ಹದಿನಾಲ್ಕು ವರ್ಷಗಳ ವನವಾಸ ಪೂರೈಸಿ ಬಂದಂತೆ ಮೇಲ್ಮನವಿ ಸಲ್ಲಿಸಲು 13 ವರ್ಷ 319 ದಿನಗಳ ವಿಳಂಬ ಮಾಡಿರುವ ನಿಮ್ಮ ಧೋರಣೆ ನೋಡಿದರೆ ನೀವೂ ವನವಾಸ ಅನುಭವಿಸುತ್ತಿದ್ದೀರಾ’ ಎಂದು ರಾಜ್ಯ ಸರ್ಕಾರವನ್ನು ಖಾರವಾಗಿ ಪ್ರಶ್ನಿಸಿರುವ ಹೈಕೋರ್ಟ್, ಮೂಲ ಅಧಿಕಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ 11 ವರ್ಷಗಳ ನಂತರ ಮೇಲ್ಮನವಿ ಸಲ್ಲಿಸಿದ್ದ ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿದೆ.

ಈ ಸಂಬಂಧ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಲಿಸಿದ್ದ ಮೂಲ ಪಕ್ಷಗಾರರ ಮೇಲ್ಮನವಿಯನ್ನು (ಕಂಪನಿ ಅರ್ಜಿ) ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ. ‘ಮೇಲ್ಮನವಿ ತಡವಾಗಿರುವುದಕ್ಕೆ ನಿಶ್ಚಿತ ಸಮಯದ ಮಿತಿ ಕಾಯ್ದೆ ಕಲಂ 5ರ ಅಡಿಯಲ್ಲಿ ನೀಡಬೇಕಿದ್ದ ಸಮರ್ಪಕ ಕಾರಣ ಮತ್ತು ಮಾನದಂಡವನ್ನು ಸರ್ಕಾರ ಈ ಪ್ರಕರಣದಲ್ಲಿ ಪೂರೈಸಿಲ್ಲ. ಒಂದು ವೇಳೆ ಸಮಂಜಸ ವಿವರಣೆ ನೀಡಿದ್ದರೆ ವಿಳಂಬವನ್ನು ಮನ್ನಿಸಿ ಮೇಲ್ಮನವಿ ಪರಿಗಣಿಸಬಹುದಿತ್ತು. ಆದರೆ, ಸರ್ಕಾರದ ನಿಷ್ಕ್ರಿಯತೆ ಮತ್ತು ನಿರ್ಲಕ್ಷ್ಯವನ್ನು ಪುರಸ್ಕರಿಸಲಾಗದು’ ಎಂದಿದೆ.

ಗಡಿಯಲ್ಲಿ ಬೇಲಿ: ಕುಕಿಗಳ ವಿರೋಧ



ಇಂಫಾಲ್ (ಪಿಟಿಐ): ಭಾರತ– ಮ್ಯಾನ್ಮಾರ್ ಗಡಿಯಲ್ಲಿ ಅಳವಡಿಸುತ್ತಿರುವ ತಂತಿ ಬೇಲಿಗೆ 16 ಹಳ್ಳಿಗಳ ಕುಕಿ ಸಮುದಾಯದ ಮುಖಂಡರು ವಿರೋಧ ವ್ಯಕ್ತಪಡಿಸಿದ್ದು, ಸೂಕ್ತ ಸ್ಪಂದನ ಸಿಗುವವರೆಗೂ ‘ಅಸಹಕಾರ’ ನಿಲುವು ತಳೆಯುವುದಾಗಿ ಘೋಷಿಸಿದ್ದಾರೆ.

ಕುಕಿ–ಜೋ ಜನರ ರಾಜಕೀಯ ಬೇಡಿಕೆ ಈಡೇರಿಸುವ ತನಕ ಸಕಲ ಚಟುವಟಿಕೆ ಸ್ಥಗಿತಗೊಳಿಸಬೇಕು ಎಂದು ಗಡಿ ಗ್ರಾಮಗಳ ಕುಕಿ ಮುಖಂಡರು ಆಗ್ರಹಿಸಿದ್ದಾರೆ.

ಗಡಿಯ 16 ಕಿ.ಮೀ. ವ್ಯಾಪ್ತಿಯಲ್ಲಿ ನೆಲಸಿರುವ ಜನರು ಪರಸ್ಪರರ ಭೂಪ್ರದೇಶದೊಳಗೆ ಯಾವುದೇ ದಾಖಲೆಗಳಿಲ್ಲದೆ ಮುಕ್ತವಾಗಿ ಸಂಚರಿಸುವುದನ್ನು (ಎಫ್‌ಎಂಆರ್) ರದ್ದುಗೊಳಿಸುವ ಪ್ರಸ್ತಾವ ವಿರೋಧಿಸಿ ರ‍್ಯಾಲಿ ನಡೆಸಲಾಗುತ್ತಿದೆ. ಸಂಬಂಧಿಸಿದ ಅಧಿಕಾರಿಗಳಿಗೂ ಮನವಿ ನೀಡಲಾಗಿದೆ ಎಂದು ಮುಖ್ಯಸ್ಥರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಟಗರು ಬಂತು ಟಗರು...

ಪ್ರಜಾವಾಣಿ ಚಿತ್ರ ಗೋವಿಂದರಾಜ ಜವಳಿ



ದಸರಾ ಪ್ರಯುಕ್ತ ಹುಬ್ಬಳ್ಳಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ಸಮಿತಿ ಮತ್ತು ವಿವಿಧ ಸಂಘಟನೆಗಳ ಸಹಯೋಗದಲ್ಲಿ ರಾಜ್ಯಮಟ್ಟದ ಟಗರಿನ ಕಾಳಗ ನಡೆಯಿತು

ರಾಜ್ಯದ ಹಲವು ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿತ

812 ಉಪನ್ಯಾಸಕರಿಗೆ ಕಾರ್ಯ ‘ಭಾರ’

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿದ್ಯಾರ್ಥಿಗಳ ಸಂಖ್ಯೆ ಇಳಿಕೆಯಾದ ಸರ್ಕಾರಿ ಪದವಿಪೂರ್ವ ಕಾಲೇಜುಗಳ 812 ಉಪನ್ಯಾಸಕರನ್ನು ವಾರದಲ್ಲಿ ಮೂರು ದಿನ ಬೇರೆ ಕಾಲೇಜುಗಳಿಗೆ ನಿಯೋಜನೆ ಮಾಡಿದ್ದು, ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯದ ಈ ನಿರ್ಧಾರಕ್ಕೆ ವಿದ್ಯಾರ್ಥಿಗಳು, ಉಪನ್ಯಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ 1,232 ಸರ್ಕಾರಿ ಪದವಿಪೂರ್ವ ಕಾಲೇಜುಗಳಿದ್ದು, ಪ್ರತಿ ಕಾಲೇಜಿಗೂ ವಿಷಯವಾರು ಶಿಕ್ಷಕರ ಹುದ್ದೆ ಮಂಜೂರು ಮಾಡಲು ವಿದ್ಯಾರ್ಥಿಗಳ ಸಂಖ್ಯೆಯನ್ನೇ ಮಾನದಂಡವಾಗಿ ಬಳಸಲಾಗುತ್ತಿದೆ. ಪ್ರಾಯೋಗಿಕ ಪರೀಕ್ಷೆ ಇರುವ ವಿಜ್ಞಾನ ವಿಷಯಗಳಿಗೆ ಗರಿಷ್ಠ 120 ವಿದ್ಯಾರ್ಥಿಗಳು ಹಾಗೂ ಪ್ರಾಯೋಗಿಕ ಪರೀಕ್ಷೆ ಇಲ್ಲದ ಕಲೆ, ವಾಣಿಜ್ಯ ಮತ್ತಿತರ ವಿಷಯಗಳಲ್ಲಿ ಗರಿಷ್ಠ 320 ವಿದ್ಯಾರ್ಥಿಗಳವರೆಗೆ ತಲಾ ಒಬ್ಬರು ವಿಷಯವಾರು ಉಪನ್ಯಾಸಕರನ್ನು ನೇಮಿಸಲು ನಿಯಮವಿದೆ.

ಕೆಲ ವರ್ಷಗಳಿಂದ ಸರ್ಕಾರಿ ಕಾಲೇಜುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಖಾಸಗಿ ಕಾಲೇಜುಗಳ ದಾಖಲಾತಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಅದರಲ್ಲೂ ಕಲಾ ಮತ್ತು ವಿಜ್ಞಾನ ವಿಷಯದಲ್ಲಿ ಈ ಕೊರತೆಯ ಅಂತರ ಪ್ರತಿ ವರ್ಷವೂ ಹೆಚ್ಚಾಗುತ್ತಿದೆ. ಹೀಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದ ವಿಷಯಗಳ ಉಪನ್ಯಾಸಕರನ್ನು ಜಿಲ್ಲಾ ವ್ಯಾಪ್ತಿಯ ಒಳಗಿನ ಮತ್ತೊಂದು ಕಾಲೇಜಿಗೆ ನಿಯೋಜನೆ ಮಾಡಲಾಗುತ್ತಿದೆ. 2025–26ನೇ ಸಾಲಿನಲ್ಲಿ ಕನ್ನಡ, ಇಂಗ್ಲಿಷ್, ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ, ಜೀವವಿಜ್ಞಾನ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ವಿಷಯದ ಉಪನ್ಯಾಸಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆ ಮಾಡಲಾಗಿದೆ.

‘ನಿಯಮಕ್ಕಿಂತ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ನೆಪ ಇಟ್ಟುಕೊಂಡು ವಾರದಲ್ಲಿ ಮೂರು ದಿನ ಬೇರೆ ಕಾಲೇಜಿಗೆ ನಿಯೋಜನೆ ಮಾಡಿದ್ದಾರೆ. ನಾವು ಕೆಲಸ ಮಾಡುವ ಮೂಲ ಕಾಲೇಜಿಗೂ ನಿಯೋಜನೆಗೊಂಡ ಕಾಲೇಜಿಗೂ 70 ಕಿ.ಮೀ. ಅಂತರವಿದೆ. ಅನಿವಾರ್ಯವಾಗಿ ಅಷ್ಟು ದೂರ ಪ್ರಯಾಣ ಮಾಡಬೇಕು’ ಎನ್ನುತ್ತಾರೆ ಉಪನ್ಯಾಸಕ ರಾಜಪ್ಪ.

▶3

ಅಂಕಿ ಅಂಶಗಳು

1,229	ಸರ್ಕಾರಿ ಪಿಯು ಕಾಲೇಜುಗಳು
12,917	ಮಂಜೂರಾದ ಬೋಧಕ ಹುದ್ದೆಗಳು
8,156	ಕಾಯಂ ಉಪನ್ಯಾಸಕರು
4,761	ಖಾಲಿ ಹುದ್ದೆಗಳು
812	ವಾರದಲ್ಲಿ ಮೂರು ದಿನ ನಿಯೋಜನೆಗೊಂಡವರು

ಪಠ್ಯಕ್ರಮದಂತೆ ಅನುಪಾತದ ಅನುಕರಣೆ ಏಕಿಲ್ಲ?

ಪದವಿಪೂರ್ವ ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿ–ಉಪನ್ಯಾಸಕ ಅನುಪಾತವೇ ಅವೈಜ್ಞಾನಿಕ. ಇದು ಅತ್ಯಂತ ಹಳೆಯ ನಿಯಮ. ನಿಯಮ ಬದಲಾವಣೆ ಮಾಡದಿದ್ದರೆ ಕೆಲವೇ ವರ್ಷಗಳಲ್ಲಿ ಬಹುತೇಕ ಹುದ್ದೆಗಳು ರದ್ದಾಗುತ್ತವೆ. ಸರ್ಕಾರಿ ಕಾಲೇಜುಗಳು ಸಂಕಷ್ಟಕ್ಕೆ ಸಿಲುಕುತ್ತವೆ ಎನ್ನುತ್ತಾರೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಅಧ್ಯಕ್ಷ ಎ.ಎಚ್. ನಿಂಗೇಗೌಡ.

ರಾಜ್ಯ ಸರ್ಕಾರ ಪಠ್ಯಕ್ರಮದ ವಿಷಯದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತನ್ನು (ಎನ್‌ಸಿಇಆರ್‌ಟಿ) ಅನುಸರಿಸುತ್ತದೆ. ಅದೇ ವಿದ್ಯಾರ್ಥಿ–ಉಪನ್ಯಾಸಕ ಅನುಪಾತದಲ್ಲಿ ಅನುಸರಿಸುತ್ತಿಲ್ಲ. ಕೇಂದ್ರ ಪಠ್ಯಕ್ರಮ ಅನುಸರಿಸುವ ಸಿಬಿಎಸ್‌ಇ ಕಾಲೇಜುಗಳ 11 ಮತ್ತು 12ನೇ ತರಗತಿಗಳಲ್ಲಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ಅನುಪಾತ 45:1 ಇದೆ. ರಾಜ್ಯದ ಪಿಯು ಕಾಲೇಜುಗಳಲ್ಲಿ ಈ ಅನುಪಾತ ಅಧಿಕವಾಗಿದೆ. ಈ ಅನುಪಾತವನ್ನು ಕಡಿಮೆ ಮಾಡಬೇಕು ಎಂದು ಹಲವು ಬಾರಿ ಮನವಿ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸರ್ಕಾರವು ನಿಯಮಗಳಿಗೆ ತಿದ್ದುಪಡಿ ತಂದು ವಿದ್ಯಾರ್ಥಿ–ಉಪನ್ಯಾಸಕರ ಅನುಪಾತ ಮರು ನಿಗದಿ ಮಾಡಬೇಕು. ಪಿಯು ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು

ಎ.ಎಚ್. ನಿಂಗೇಗೌಡ, ಅಧ್ಯಕ್ಷ, ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಬೋಧಕ ಸಿಬ್ಬಂದಿಯಿಂದ ಹಣ ಸಂಗ್ರಹ; ರಾಜ್ಯಪಾಲರಿಗೆ ದೂರು

ಪಶು ವಿ.ವಿ: ‘ಎನ್‌ಪಿಎ’ ಹೆಸರಲ್ಲಿ ವಂಚನೆ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ‘ನಾನ್ ಪ್ರಾಕ್ಟಿಸಿಂಗ್ ಅಲೋವೆನ್ಸ್’ (ಎನ್‌ಪಿಎ) ಸೌಲಭ್ಯ ಜಾರಿಗೆ ತರುವುದಾಗಿ ಬೋಧಕ ಸಿಬ್ಬಂದಿಯನ್ನು ನಂಬಿಸಿ, ಕರ್ನಾಟಕ ಪಶು ವೈದ್ಯಕೀಯ, ಪಶು, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರಿಗಳು ನಿಯಮ ಬಾಹಿರವಾಗಿ ಹಣ ಸಂಗ್ರಹಿಸಿರುವ ಕುರಿತು ರಾಜ್ಯಪಾಲರಿಗೆ ದೂರು ಸಲ್ಲಿಕೆಯಾಗಿದೆ.

ವಿ.ವಿ ವ್ಯಾಪ್ತಿಯ ಬೀದರ್, ಬೆಂಗಳೂರು, ಗದಗ, ಹಾಸನ ಹಾಗೂ ಶಿವಮೊಗ್ಗ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರಿಂದ ಹಣ ಪಡೆಯಲಾಗಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ. ಎನ್‌ಪಿಎ ಜಾರಿ ಹೆಸರಿನಲ್ಲಿ ಹಣ ಪಡೆದಿರುವುದನ್ನು, ಹೆಸರು ಬಹಿರಂಗಪಡಿಸಲು ಇಚ್ಛಿಸದ ವಿ.ವಿಯ ಕೆಲ ಸಿಬ್ಬಂದಿ ‘ಪ್ರಜಾವಾಣಿ’ಗೆ ದೃಢಪಡಿಸಿದ್ದಾರೆ.

ಎನ್‌ಪಿಎ ಜಾರಿ ಕುರಿತು ರಾಜ್ಯ ಸರ್ಕಾರ ಆದೇಶ ಮಾಡದಿದ್ದರೂ ‘ಆದೇಶವಾಗಿದೆ’ ಎಂದು ಬೋಧಕ ಸಿಬ್ಬಂದಿಯಿಂದ 2018–2019ನೇ ಸಾಲಿನಿಂದಲೂ ಹಣ ಸಂಗ್ರಹಿಸಲಾಗುತ್ತಿದೆ. ಈಗಾಗಲೇ ₹2 ಕೋಟಿಗೂ ಅಧಿಕ ಹಣ ಸಂಗ್ರಹಿಸಲಾಗಿದೆ ಎಂದು ದೂರಲಾಗಿದೆ.

ಈ ಸಂಬಂಧ ಪಶು ವಿ.ವಿ ನಿವೃತ್ತ ಪ್ರಾಧ್ಯಾಪಕ ಹಾಗೂ ಹಿಂದಿನ ಅವಧಿಯ ಆಡಳಿತ ಮಂಡಳಿ ಸದಸ್ಯ ಡಾ. ಕೆ.ವೆಂಕಟ್ ರೆಡ್ಡಿ ಅವರು ರಾಜ್ಯಪಾಲರು ಹಾಗೂ ಆರ್ಥಿಕ ಇಲಾಖೆಗೆ ದೂರು ಸಲ್ಲಿಸಿದ್ದಾರೆ.

‘2018ರ ಅಕ್ಟೋಬರ್ 30ರ ಸರ್ಕಾರದ ಆದೇಶದ ಅನ್ವಯ ಪ್ರಾಧ್ಯಾಪಕರಿಗೆ ಯುಜಿಸಿ ಹಾಗೂ ಐಸಿಎಆರ್ ಪರಿಷ್ಕೃತ ಏಳನೇ ವೇತನ ಆಯೋಗದ ಪ್ರಕಾರ ವೇತನ ಪಾವತಿಸಲಾಗುತ್ತಿದೆ. ಕೇಂದ್ರೀಯ ಸಮಿತಿ ಶಿಫಾರಸ್ಸಿನ ಮೇರೆಗೆ ಇದನ್ನು ಜಾರಿಗೆ ತರಲಾಗಿದೆ. ಎನ್‌ಪಿಎ ಜಾರಿಗೆ ತರುವುದು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯ. ಈ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳದಿದ್ದರೂ ವಿ.ವಿ ಸಿಬ್ಬಂದಿಯನ್ನು ಕತ್ತಲಲ್ಲಿ ಇಟ್ಟು ದೊಡ್ಡ ಮಟ್ಟದ ಭ್ರಷ್ಟಾಚಾರ ಎಸಗಿದ್ದಾರೆ. ಭ್ರಷ್ಟಾಚಾರದಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ಕಾನೂನು ಕ್ರಮ ಜರುಗಿಸಬೇಕು’ ಎಂದು ವೆಂಕಟ್ ರೆಡ್ಡಿ ಆಗ್ರಹಿಸಿದ್ದಾರೆ.

‘ಸ್ವಾಯತ್ತ ವಿಶ್ವವಿದ್ಯಾಲಯದಲ್ಲಿ ಎನ್‌ಪಿಎ ಜಾರಿಗೊಳಿಸಲು ಹಣಕಾಸು ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚೆಯಾಗಬೇಕು. ಈ ಬಗ್ಗೆ ಯಾವುದೇ ಚರ್ಚೆ ನಡೆಸಿಲ್ಲ. ಆದರೂ ಸಿಬ್ಬಂದಿಗೆ ಸುಳ್ಳು ಹೇಳಿ ವಂಚಿಸಲಾಗುತ್ತಿದೆ. ಬೆಂಗಳೂರಿನ ಪಶು ವೈದ್ಯಕೀಯ ಕಾಲೇಜಿನ ಪೌಲ್ಟ್ರಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಚ್.ಸಿ. ಇಂದ್ರೇಶ್ ಅವರ ಹೆಸರಿನಲ್ಲಿ ರಾಮನಗರ ಬಿಡದಿಯ ಕರ್ಣಾಟಕ ಬ್ಯಾಂಕ್ ಶಾಖೆಯಲ್ಲಿ ಹೊಂದಿರುವ ಖಾತೆ ಮೂಲಕ ಹಣಕಾಸಿನ ವ್ಯವಹಾರ ನಡೆಸಲಾಗಿದೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.



ಬೀದರ್‌ನಲ್ಲಿರುವ ಕರ್ನಾಟಕ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿವಿ

ಎನ್‌ಪಿಎ ಹೆಸರಲ್ಲಿ ವಿವಿ ಸಹಾಯಕ ಪ್ರಾಧ್ಯಾಪಕರು, ಪ್ರಾಧ್ಯಾಪಕರಿಂದ ತಲಾ ₹50 ಸಾವಿರದ ವರೆಗೆ ಹಣ ಸಂಗ್ರಹಿಸಲಾಗಿದೆ. ಆರ್‌ಟಿಐ ಅರ್ಜಿ ಸಲ್ಲಿಸಿದರೆ ಮಾಹಿತಿ ನೀಡಿಲ್ಲ

ಡಾ. ಕೆ. ವೆಂಕಟ್ ರೆಡ್ಡಿ, ದೂರುದಾರ

ಪಶು ವೈದ್ಯಕೀಯ ವಿವಿಯಲ್ಲಿ ಎನ್‌ಪಿಎ ಹೆಸರಿನಲ್ಲಿ ಹಣ ಸಂಗ್ರಹಿಸಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ

ಪ್ರೊ. ಕೆ.ಸಿ. ವೀರಣ್ಣ, ಕುಲಪತಿ, ಪಶು ವೈದ್ಯಕೀಯ ವಿ.ವಿ ಬೀದರ್

ಏನಿದು ಎನ್‌ಪಿಎ?

ಸರ್ಕಾರದ ನಿರ್ದಿಷ್ಟ ಇಲಾಖೆ, ವಿಶ್ವವಿದ್ಯಾಲಯದಲ್ಲಿ ‘ನಾನ್ ಪ್ರಾಕ್ಟಿಸಿಂಗ್ ಅಲೋವೆನ್ಸ್’ (ಎನ್‌ಪಿಎ) ಜಾರಿಗೊಳಿಸಿದರೆ, ಅಲ್ಲಿನ ಸಿಬ್ಬಂದಿ ತಮಗೆ ವಹಿಸಿದ ಕೆಲಸವನ್ನು ಬಿಟ್ಟು ಅನ್ಯ ಕೆಲಸ ಮಾಡುವಂತಿಲ್ಲ.

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿ ಪಾಠ–ಪ್ರವಚನ, ಸಂಶೋಧನೆ ಹಾಗೂ ವಿಸ್ತರಣೆ ಮಾಡುವುದು ಬಿಟ್ಟರೆ ಬೇರೇನೂ ಮಾಡುವಂತಿಲ್ಲ. ಇದಕ್ಕಾಗಿ ‘ನಾನ್ ಪ್ರಾಕ್ಟಿಸಿಂಗ್ ಅಲೋವೆನ್ಸ್’ ಎಂದು ಹೆಚ್ಚುವರಿ ಭತ್ಯೆ ನೀಡಲಾಗುತ್ತದೆ. ಆದರೆ, ಪಶು ವಿವಿಯಲ್ಲಿ ಎನ್‌ಪಿಎ ಜಾರಿಗೊಳಿಸಲು ಸರ್ಕಾರ ಅನುಮತಿಯನ್ನೇ ನೀಡಿಲ್ಲ. ಹೀಗಿದ್ದರೂ ಸಿಬ್ಬಂದಿಗೆ ಸುಳ್ಳು ಹೇಳಿ ಹಣ ಸಂಗ್ರಹಿಸಲಾಗುತ್ತಿದೆ ಎಂಬ ಆರೋಪ ಇದೆ.

‘ಭಾರತೀಯರಿಂದ ಹೈಫಾ ವಿಮೋಚನೆ’

ಹೈಫಾ (ಇಸ್ರೇಲ್) (ಪಿಟಿಐ): ‘ಇಸ್ರೇಲ್‌ನ ಹೈಫಾ ನಗರವನ್ನು ಅಟೋಮನ್ ದಾಸ್ಯದಿಂದ ಬಿಡುಗಡೆಗೊಳಿಸಿದ್ದು ಭಾರತೀಯ ಸೈನಿಕರೇ ಹೊರತು ಬ್ರಿಟಿಷರಲ್ಲ’ ಎಂದು ಹೈಫಾ ನಗರದ ಮೇಯರ್ ಯೋನಾ ಯಹಾವ್ ಹೇಳಿದ್ದಾರೆ.

ಹೈಫಾದ ವಿಮೋಚನೆಗಾಗಿ ಪ್ರಾಣತೆತ್ತ ಭಾರತೀಯ ಯೋಧರಿಗೆ ಗೌರವ ನಮನ ಸಲ್ಲಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಇದೇ ನಗರದಲ್ಲಿ ನಾನು ಹುಟ್ಟಿ ಬೆಳೆದಿದ್ದೇನೆ. ಅಟೋಮನ್ ಪಾರುಪತ್ಯದಿಂದ ಈ ನಗರವನ್ನು ಮುಕ್ತಗೊಳಿಸಿದ್ದು ಬ್ರಿಟಿಷರು ಎಂದೇ ನಮಗೆಲ್ಲಾ ಹೇಳಲಾಗಿತ್ತು. ಇತಿಹಾಸಕಾರರು ಅಧ್ಯಯನ ನಡೆಸಿ, ಈ ನಗರವನ್ನು ಅಟೋಮನ್ ಆಳ್ವಿಕೆಯಿಂದ ಮುಕ್ತಗೊಳಿಸಿದವರು ಬ್ರಿಟಿಷರಲ್ಲ, ಭಾರತೀಯ ಸೈನಿಕರು ಎಂದು ಹೇಳುವವರೆಗೂ ತಪ್ಪಾದ ಇತಿಹಾಸವನ್ನೇ ನಂಬಿದ್ದೆವು’ ಎಂದಿದ್ದಾರೆ.

ಅಲ್ಲದೇ, ಪಠ್ಯಪುಸ್ತಕಗಳಲ್ಲಿ ಈ ಕುರಿತ ತಪ್ಪಾದ ವಿಚಾರಗಳನ್ನು ತೆಗೆದು, ಸತ್ಯಾಂಶ ಅಳವಡಿಸಲಾಗುತ್ತಿದೆ’ ಎಂದಿದ್ದಾರೆ. ಒಂದನೇ ಮಹಾಯುದ್ಧದ ಸಂದರ್ಭದಲ್ಲಿ ಆಟೋಮನ್ ಪಡೆಗಳನ್ನು ಹಿಮ್ಮೆಟ್ಟಿಸುವಲ್ಲಿ ಭಾರತೀಯ ಸೇನೆಯ ಅಶ್ವದಳ ಮಹತ್ತರ ಪಾತ್ರ ವಹಿಸಿತ್ತು. ಈ ಕಾರಣಕ್ಕೆ, ಇಸ್ರೇಲ್‌ನ ಹಲವೆಡೆ ಭಾರತೀಯ ಸೈನಿಕರ ಸ್ಮಾರಕ ನಿರ್ಮಿಸಲಾಗಿದೆ.



ಹೈಫಾ ನಗರವನ್ನು ದಾಸ್ಯದಿಂದ ಮುಕ್ತಗೊಳಿಸಿದ ಮೈಸೂರು, ಹೈದರಾಬಾದ್ ಹಾಗೂ ಜೋಧಪುರದ ಅಶ್ವದಳಗಳ ಸ್ಮರಣಾರ್ಥ ಭಾರತೀಯ ಸೇನೆ ಕೂಡ ಪ್ರತಿವರ್ಷ ಸೆ. 23ರಂದು ಗೌರವ ನಮನ ಸಲ್ಲಿಸುತ್ತದೆ.

ಯಶವಂತ ಸರದೇಶಪಾಂಡೆ ನಿಧನ

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ: ರಂಗಕರ್ಮಿ, ಹಾಸ್ಯ ಕಲಾವಿದ ಯಶವಂತ ಸರದೇಶಪಾಂಡೆ (60) ಹೃದಯಾಘಾತದಿಂದ ಸೋಮವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಕಲಾವಿದೆ ಮಾಲತಿ ಸರದೇಶಪಾಂಡೆ ಹಾಗೂ ಪುತ್ರಿ ಕಲ್ಪಶ್ರೀ ಇದ್ದಾರೆ.

ಮಂಗಳವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 12ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಹಿಂಭಾಗದ ಸಂಸ ಬಯಲು ರಂಗಮಂದಿರದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ಚಾಮರಾಜಪೇಟೆ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಉಕ್ಕಲಿ ಗ್ರಾಮದಲ್ಲಿ 1965ರಲ್ಲಿ ಜನಿಸಿದ್ದ ಅವರು, ಶಾಲಾ ಮತ್ತು ಕಾಲೇಜು ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಪೂರೈಸಿದ್ದರು. ಹೆಗ್ಗೋಡಿನ ನೀನಾಸಂ ನಾಟಕ ಸಂಸ್ಥೆಯಿಂದ ಡಿಪ್ಲೊಮಾ ಪೂರ್ಣಗೊಳಿಸಿದ್ದರು. ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದ ನಾಟಕ ರಚನೆ, ಚಲನಚಿತ್ರ ಸಂಭಾಷಣೆ ಕುರಿತು ವಿಶೇಷ ತರಬೇತಿ ಪಡೆದಿದ್ದರು.

ಅಂಧಯುಗ, ಆಲ್ ದಿ ಬೆಸ್ಟ್, ಇನ್‌ಸ್ಪೆಕ್ಟರ್ ಜನರಲ್, ಬಾಡಿಗೆ ಮನೆ ಸೇರಿ ನೂರಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿ, ಪ್ರದರ್ಶಿಸಿದ್ದರು. ದ.ರಾ. ಬೇಂದ್ರೆ ಅವರ ನಾಟಕಗಳನ್ನೂ ರಂಗಭೂಮಿಗೆ ಪರಿಚಯಿಸಿದ್ದರು. ಮರಾಠಿ ಮೂಲದ ‘ರಾಶಿ ಚಕ್ರ’ ಏಕವ್ಯಕ್ತಿ ಅಭಿನಯದ ಹಾಸ್ಯ ನಾಟಕ ಎರಡು ಸಾವಿರಕ್ಕೂ ಹೆಚ್ಚು ಪ್ರದರ್ಶನ ಕಂಡಿದೆ’ ಎಂದು ಯಶವಂತ ಸರದೇಶಪಾಂಡೆ ಅವರ ಬಾಲ್ಯಸ್ನೇಹಿತ ನಾರಾಯಣ ಪಾಂಡುರಂಗಿ ತಿಳಿಸಿದರು.

ನುಡಿ ನಮನ ▶2

ವೈಜ್ಞಾನಿಕ ಸಮೀಕ್ಷೆ ನಡೆಸಲು ಪಟ್ಟು

ಅಖಿಲ ಭಾರತ ವೀರಶೈವ ಮಹಾಸಭಾ, ರಾಜ್ಯ ಒಕ್ಕಲಿಗರ ಸಂಘಟನೆಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಶ್ವತ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ನಡೆಸಬೇಕು. ಮಾಹಿತಿ ಗೋಪ್ಯವಾಗಿಡಬೇಕು' ಎಂದು ಅಖಿಲ ಭಾರತ ವೀರಶೈವ ಮಹಾಸಭಾ, ರಾಜ್ಯ ಒಕ್ಕಲಿಗರ ಸಂಘ, ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಆಗ್ರಹಿಸಿವೆ.

'ಸಮೀಕ್ಷೆಯ ದತ್ತಾಂಶವನ್ನು ಸರ್ಕಾರ ಸೇರಿ ಯಾರಿಗೂ ಬಹಿರಂಗಪಡಿಸಬಾರದು. ಜನರು ಸ್ವಯಂಪ್ರೇರಣೆಯಿಂದ ನೀಡಿದ ಮಾಹಿತಿಗಳನ್ನಷ್ಟೇ ಪಡೆಯಬೇಕು. ಮಾಹಿತಿಗಾಗಿ ಒತ್ತಡ ಹಾಕಬಾರದು. ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಈ ಎಲ್ಲ ಷರತ್ತುಗಳಿಗೆ ಬದ್ಧವಾಗಿರುವ ಬಗ್ಗೆ ಆಯೋಗವು ಅಫಿಡವಿಟ್ ಸಲ್ಲಿಸಬೇಕು ಎಂದು ಹೈಕೋರ್ಟ್ ಸೂಚಿಸಿದೆ. ಅದರಂತೆ ಆಯೋಗ ನಡೆದುಕೊಳ್ಳಬೇಕು' ಎಂದು ಸಂಘಟನೆಗಳ ಪ್ರಮುಖರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈಗಿನ ಆಯೋಗದ ಚಟುವಟಿಕೆಯು ಕಾಂತರಾಜ ಆಯೋಗಕ್ಕಿಂತ ಬಹಳ ಕೆಳಮಟ್ಟದಲ್ಲಿದೆ. ಜನರು, ಸಂಘಟನೆಗಳ ಅಹವಾಲುಗಳಿಗೆ ಸ್ಪಂದಿಸುತ್ತಿಲ್ಲ. ಸಮಸ್ಯೆ, ಗೊಂದಲ ಉಂಟಾದಾಗ ಆಯೋಗ ಪ್ರತಿಕ್ರಿಯಿಸುತ್ತಿಲ್ಲ. ಬದಲಾಗಿ ಸರ್ಕಾರವೇ ಪ್ರತಿಕ್ರಿಯೆ ನೀಡುತ್ತಿದೆ. ಆಯೋಗವು ಸ್ವತಂತ್ರ ಸಂಸ್ಥೆಯಾಗಿ ಕೆಲಸ ಮಾಡುತ್ತಿಲ್ಲ ಎಂಬ ಅನುಮಾನ ಕಾಡುತ್ತಿದೆ' ಎಂದು ಸಂಶಯ ವ್ಯಕ್ತಪಡಿಸಿದರು.

'ಕಾಂತರಾಜ ಆಯೋಗವು ಸಮೀಕ್ಷೆಗೆ 65 ದಿನ ತೆಗೆದುಕೊಂಡಿತ್ತು. ಒಳಮೀಸಲಾತಿಗಾಗಿ ಒಂದು ಕೋಟಿ ಜನರ ಸಮೀಕ್ಷೆಗೆ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗವು 45 ದಿನ ತೆಗೆದುಕೊಂಡಿತ್ತು. ಈ ಸಮೀಕ್ಷೆ ಕೇವಲ 15 ದಿನ ನಿಗದಿಪಡಿಸಿರುವುದು ಸಾಕಾಗವುದಿಲ್ಲ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಎಚ್.ಎಂ. ರೇಣುಕಪ್ರಸನ್ನ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ, ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ನಾಗರಾಜ್ ಯಲಚವಾಡಿ ಉಪಸ್ಥಿತರಿದ್ದರು.

'ವೀರಶೈವ ಲಿಂಗಾಯತರು ಸಮೀಕ್ಷೆ ಬಹಿಷ್ಕರಿಸಿ'

ಪ್ರಜಾವಾಣಿ ವಾರ್ತೆ



ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ

ಸಿಂದಗಿ (ವಿಜಯಪುರ): 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಅವೈಜ್ಞಾನಿಕವಾಗಿದೆ. ವೀರಶೈವ ಲಿಂಗಾಯತರು ಇದನ್ನು ಬಹಿಷ್ಕರಿಸಬೇಕು' ಎಂದು ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಘಟಕದ ಅಧ್ಯಕ್ಷ ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಹೇಳಿದರು.

'ಹೈಕೋರ್ಟ್ ಆದೇಶದಂತೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದು ಜನರ ಆಯ್ಕೆ ಆಗಿದೆ. ಈ ಮೂಲಕ ಜನರ ಖಾಸಗಿತನ, ವ್ಯಕ್ತಿ ಸ್ವಾತಂತ್ರ್ಯವನ್ನು ಕೋರ್ಟ್ ಎತ್ತಿ ಹಿಡಿದಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಸಮೀಕ್ಷೆಯನ್ನು ಸಾರಸಗಟಾಗಿ ಬಹಿಷ್ಕರಿಸಲು ಪಂಚಪೀಠಾಧೀಶ್ವರರು ಹಾಗೂ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ಎಲ್ಲರೂ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದು ಹೇಳಿದರು.

'ಉತ್ತರ ನೀಡುವುದು ಕಡ್ಡಾಯವಲ್ಲ'



ರಘುನಾಥ್

ಬೆಂಗಳೂರು: 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಬ್ರಾಹ್ಮಣ ಸಮುದಾಯದವರು ಜಾತಿ/ಧರ್ಮವನ್ನು ಮಾತ್ರ ಉಲ್ಲೇಖಿಸಬಹುದು. ಇತರೆ 59 ಪ್ರಶ್ನೆಗಳಿಗೆ ಉತ್ತರಿಸುವುದು ಅವರವರ ವಿವೇಚನೆಗೆ ಬಿಟ್ಟಿದ್ದು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ತಿಳಿಸಿದೆ.

'ಸಮೀಕ್ಷೆಯಲ್ಲಿನ ಅವೈಜ್ಞಾನಿಕ ಅಂಶ ಹಾಗೂ ನ್ಯೂನತೆ ಪ್ರಶ್ನಿಸಿ ಮಹಾಸಭಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ಮಧ್ಯಂತರ ಆದೇಶ ನೀಡಲಾಗಿದೆ. ಸಮೀಕ್ಷೆಯಲ್ಲಿ ಸ್ವ ಇಚ್ಛೆಯಿಂದ ಭಾಗವಹಿಸಬಹುದು. ಸಮೀಕ್ಷೆ ವೇಳೆ ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ಹೈಕೋರ್ಟ್ ತಿಳಿಸಿದೆ' ಎಂದು ಮಹಾಸಭಾ ಅಧ್ಯಕ್ಷ ಎಸ್ ರಘುನಾಥ್ ಹೇಳಿದ್ದಾರೆ.

'ಹೈಕೋರ್ಟ್ ಸೂಚನೆಯ ಹಿನ್ನೆಲೆಯಲ್ಲಿ ಸಮೀಕ್ಷೆಯು ಸಂಪೂರ್ಣವಾಗಿ ಸ್ವಯಂಪ್ರೇರಿತ. ಯಾವುದೇ ವ್ಯಕ್ತಿಯನ್ನು ಸಮೀಕ್ಷೆಯಲ್ಲಿ ಭಾಗವಹಿಸಲು ಒತ್ತಾಯಿಸಲಾಗುವುದಿಲ್ಲ ಎನ್ನುವ ಕುರಿತು ಹಿಂದುಳಿದ ವರ್ಗದ ಆಯೋಗವು ಸಾರ್ವಜನಿಕ ಪ್ರಕಟಣೆ ಹೊರಡಿಸಬೇಕಾಗಿದೆ' ಎಂದು ತಿಳಿಸಿದ್ದಾರೆ.

'ಸಮೀಕ್ಷೆಯಲ್ಲಿ ಭಾಗವಹಿಸುವುದರಿಂದ ಬ್ರಾಹ್ಮಣ ಸಮುದಾಯಕ್ಕೆ ಸರ್ಕಾರದಿಂದ ಯಾವುದೇ ನೇರ ಅಥವಾ ಪರೋಕ್ಷ ಸಹಕಾರ ಸಿಗುತ್ತದೆ ಎನ್ನುವ ನಂಬಿಕೆಯಿಲ್ಲ. ಸಮೀಕ್ಷೆಯ ವಿರುದ್ಧ ಮಹಾಸಭಾ ತನ್ನ ಕಾನೂನು ಹೋರಾಟ ಮುಂದುವರಿಸಲಿದೆ' ಎಂದು ಹೇಳಿದ್ದಾರೆ.

'ಬಹಿಷ್ಕಾರ: ನ್ಯಾಯಾಲಯದ ಆದೇಶಕ್ಕೆ ವಿರುದ್ಧ'

ಬೆಂಗಳೂರು: ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನಡೆಸುವ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಾರದು ಎಂದು ಕರೆ ನೀಡುವುದು ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾದುದು ಎಂದು ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯ್ಕ್ ತಿಳಿಸಿದ್ದಾರೆ.

'ರಾಜ್ಯದ ಪ್ರತಿಯೊಬ್ಬರನ್ನೂ ಈ ಸಮೀಕ್ಷೆಗೆ ಒಳಪಡಿಸಲು ಉದ್ದೇಶಿಸಲಾಗಿದೆ. ಸಮೀಕ್ಷೆಯಲ್ಲಿ ಭಾಗವಹಿಸುವುದು ಜನರ/ಕುಟುಂಬಗಳ ಸ್ವಯಂ ಇಚ್ಛೆಗೆ ಬಿಡಲಾಗಿದೆ. ಮಾಹಿತಿಯನ್ನು ನೀಡುವ ಬಗ್ಗೆ ಆಯೋಗ ಒತ್ತಾಯ ಮಾಡುತ್ತಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸಿರುವ ಕೆಲವು ಜನಪ್ರತಿನಿಧಿಗಳು, ತಾವು ಈ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಹಾಗೂ ಸಾರ್ವಜನಿಕರೂ ಸಹ ಭಾಗವಹಿಸಬಾರದು ಎಂದು ಹೇಳಿಕೆ ನೀಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹೇಳಿಕೆಗಳು ಸಮೀಕ್ಷೆಯಲ್ಲಿ ಜನರು ಭಾಗವಹಿಸದಂತೆ ಪ್ರಚೋದಿಸುತ್ತಿವೆ. ಸಾರ್ವಜನಿಕ ಹಿತಕ್ಕಾಗಿ ಕೈಗೊಳ್ಳಲಾದ ಸಮೀಕ್ಷೆಯ ಉದ್ದೇಶಕ್ಕೆ ವಿರುದ್ಧವಾಗಿವೆ. ಯಾವುದೇ ಬಲವಂತವಿಲ್ಲದೆ ಸ್ವ ಇಚ್ಛೆಯಿಂದ ಜನರು ಭಾಗವಹಿಸುತ್ತಿರುವ ಸಂದರ್ಭದಲ್ಲಿ ಅದನ್ನು ತಡೆಯುವ ಹೇಳಿಕೆಗಳು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧ' ಎಂದು ಹೇಳಿದ್ದಾರೆ.

ಸಾರ್ವಜನಿಕರಿಗೆ ತಪ್ಪು ಸಂದೇಶ ತಲುಪುವ ಸಾಧ್ಯತೆ ಇರುವ ಇಂಥ ಹೇಳಿಕೆಗಳನ್ನು ನೀಡದಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಸಾಹಿತ್ಯ ಸಮ್ಮೇಳನ: 3 ಸ್ಥಳ ಗುರುತು'



ಬಳ್ಳಾರಿ : '88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿಸೆಂಬರ್‌ನಲ್ಲೇ ಬಳ್ಳಾರಿಯಲ್ಲೇ ಅದ್ದೂರಿಯಾಗಿ ನಡೆಸಲು ಪ್ರಯತ್ನಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಸಮ್ಮೇಳನಕ್ಕೆ ಹೊಸಪೇಟೆ ರಸ್ತೆಯ ಹಳೇ ಧಾರದ ಮಿಲ್ ಪಕ್ಕದ ಜಾಗ, ಕೊಳಗಲ್ ರಸ್ತೆ, ಕಪ್ಪಗಲ್ ರಸ್ತೆ ಸೇರಿ ಮೂರು ಕಡೆ ಸ್ಥಳ ಪರಿಶೀಲಿಸಿದ್ದೇವೆ. ಎಲ್ಲರಿಗೂ ಅನುಕೂಲ ಆಗುವಂತಹ ಸ್ಥಳವನ್ನು ಆಯ್ಕೆ ಮಾಡಲಾಗುವುದು' ಎಂದರು.

'ಕಸಾಪದ ಅಧ್ಯಕ್ಷರ ಮೇಲಿನ ಆರೋಪಗಳ ಸಂಬಂಧ ವಿಚಾರಣೆ ನಡೆದಿದ್ದು, ಸ್ವಾಗತ ಸಮಿತಿ ರಚನೆಗೆ ಕೊಂಚ ತಡವಾಗಿದೆ. ಆದರೆ, ಶೀಘ್ರವೇ ಸ್ವಾಗತಿ ಸಮಿತಿ ರಚನೆಯಾಗಲಿದೆ' ಎಂದು ಅವರು ಭರವಸೆ ನೀಡಿದರು.

ವಿನಯ್ ಆತ್ಮಹತ್ಯೆ: ಕಾಂಗ್ರೆಸ್ ಶಾಸಕರಿಗೆ ಕ್ಲೀನ್ ಚಿಟ್

ಬೆಂಗಳೂರು: ಕೊಡಗಿನ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ (40) ಅವರ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸಿದ್ದ ಹೆಣ್ಣೂರು ಠಾಣೆಯ ಪೊಲೀಸರು, ನ್ಯಾಯಾಲಯಕ್ಕೆ ಬಿ-ವರದಿ ಸಲ್ಲಿಸಿದ್ದಾರೆ.

ಕೊಡಗು ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಎ.ಎಸ್.ಪೊನ್ನಣ್ಣ (ವಿರಾಜಪೇಟೆ ಕ್ಷೇತ್ರ), ಮಂಥರ್‌ಗೌಡ (ಮಡಿಕೇರಿ ಕ್ಷೇತ್ರ) ಹಾಗೂ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಕೊಡಗು ಜಿಲ್ಲಾ ಅಧ್ಯಕ್ಷ ತೆನ್ನೀರಾ ಮೈನಾ ಅವರು ವಿನಯ್ ಅವರಿಗೆ ಕಿರುಕುಳ ನೀಡಿ, ಬೆದರಿಕೆ ಹಾಕಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ ಎಂಬುದಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮೂವರಿಗೂ ತನಿಖಾಧಿಕಾರಿಗಳು ಕ್ಲೀನ್ ಚಿಟ್ ನೀಡಿದ್ದಾರೆ.

'ಕಿರುಕುಳ ಹಾಗೂ ಬೆದರಿಕೆಯಿಂದ ವಿನಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಾಗಿ ವಿನಯ್ ಅವರ ಸಹೋದರ ಕೆ.ಎಸ್.ಜೀವನ್ ದೂರು ನೀಡಿದ್ದರು. ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗಿದೆ. ಯಾವುದೇ ಪುರಾವೆಗಳು ಸಿಕ್ಕಿಲ್ಲ. ದೂರಿನಲ್ಲಿ ಉಲ್ಲೇಖಿಸಿದ್ದ ವ್ಯಕ್ತಿಗಳ ಮೊಬೈಲ್ ಕರೆಗಳ ವಿವರ ಪಡೆಯಲಾಗಿತ್ತು. ತಜ್ಞರ ಮೂಲಕವೂ ಕರೆಗಳ ವಿವರವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಆತ್ಮಹತ್ಯೆ ಮಾಡಿಕೊಂಡಿದ್ದ ವ್ಯಕ್ತಿಯ ಮೊಬೈಲ್ ಸಂಖ್ಯೆಗೆ ಯಾವುದೇ ಬೆದರಿಕೆ ಕರೆಗಳು ಹೋಗಿಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ಸಮೀಕ್ಷೆ ಮಾಡುತ್ತಿದ್ದ ಶಿಕ್ಷಕ ಸಾವು

ಪ್ರಜಾವಾಣಿ ವಾರ್ತೆ



ವೈ.ವಿ. ರಾಮಕೃಷ್ಣ

ಚಿಂತಾಮಣಿ: ಪಟ್ಟಣದಲ್ಲಿ ಭಾನುವಾರ ಸಂಜೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯದಲ್ಲಿ ತೊಡಗಿದ್ದ ಶಿಕ್ಷಕರೊಬ್ಬರು ಸಮೀಕ್ಷೆ ನಡೆಸುತ್ತಿರುವಾಗಲೇ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಯಗವಕೋಟೆ ಕ್ಲಸ್ಟರ್ ವ್ಯಾಪ್ತಿಯ ದಿಗವಕೋಟೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ವೈ.ವಿ.ರಾಮಕೃಷ್ಣ (58) ಮೃತ ಶಿಕ್ಷಕ. ಪತ್ನಿ, ಪುತ್ರ ಇದ್ದಾರೆ. ಸೋಮವಾರ ಅಂತ್ಯಕ್ರಿಯೆ ನಡೆಯಿತು.

ನಿವೃತ್ತಿಯ ಅಂಚಿನಲ್ಲಿದ್ದ ರಾಮಕೃಷ್ಣ ಭಾನುವಾರ ಮಧ್ಯಾಹ್ನದವರೆಗೂ ಮತ್ತೊಬ್ಬ ಶಿಕ್ಷಕರ ನೆರವಿನಲ್ಲಿ ಸಮೀಕ್ಷೆ ನಡೆಸಿದ್ದಾರೆ. ಎದೆನೋವು ಕಾಣಿಸಿದ್ದರಿಂದ ಖಾಸಗಿ ವೈದ್ಯರಿಂದ ತಪಾಸಣೆಗೆ ಮಾಡಿಸಿಕೊಂಡಿದ್ದು, ಬಳಿಕ ಡೆಕ್ಕನ್ ಆಸ್ಪತ್ರೆಗೆ ತೆರಳಿದ್ದರು. ವೈದ್ಯರು ಪರೀಕ್ಷಿಸುವ ಮೊದಲೇ ಮೃತಪಟ್ಟಿದ್ದರು.

ನಿರ್ಲಕ್ಷ್ಯ- ಇಬ್ಬರ ಅಮಾನತು (ರಾಮನಗರ ವರದಿ): ಸಮೀಕ್ಷೆ ಕಾರ್ಯದಲ್ಲಿ ನಿರ್ಲಕ್ಷ್ಯತನ ತೋರಿದ ಆರೋಪದಲ್ಲಿ ಶಿಕ್ಷಕಿ ಅಮೃತಾ ಭಟ್ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಸಿಬ್ಬಂದಿ ಉಮೇಶ್ ಅವರನ್ನು ಜಿಲ್ಲಾಧಿಕಾರಿ ಅಮಾನತು ಮಾಡಿದ್ದಾರೆ.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಬೇಡಿಕೆಗೆ ಸಹಮತವಿದೆ: ಕಾಗೆ

ಪ್ರಜಾವಾಣಿ ವಾರ್ತೆ



ಆದಾಯ ತೆರಿಗೆ ಪಾವತಿಸುವವರಿಗೂ ರೇಷನ್ ನೀಡಲಾಗುತ್ತಿದೆ. ನನ್ನ ಸೊಸೆ, ಸಹೋದರಿಗೂ ಗೃಹಲಕ್ಷ್ಮಿ ಹಣ ಬರುತ್ತಿದೆ. ಪಾರದರ್ಶಕತೆ ತಂದು, ಸೋರಿಕೆ ತಡೆಗಟ್ಟಿದರೆ ಅದನ್ನು ಬೇರೆ ಕಾರ್ಯಗಳಿಗೆ ಬಳಸಬಹುದು

ಭರಮಗೌಡ (ರಾಜು) ಕಾಗೆ ಶಾಸಕ

ಹುಬ್ಬಳ್ಳಿ: 'ಕಲ್ಯಾಣ ಕರ್ನಾಟಕಕ್ಕೂ ಕಿತ್ತೂರು ಕರ್ನಾಟಕ ಭಾಗಕ್ಕೆ ನೀಡುವಷ್ಟೇ ಅನುದಾನ ನೀಡಬೇಕು. ಅದಾಗದಿದ್ದರೆ, ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಲು ನನ್ನ ಸಹಮತ ಇದೆ' ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ, ಶಾಸಕ ಭರಮಗೌಡ (ರಾಜು) ಕಾಗೆ ಹೇಳಿದರು.

'ನಾವು ₹100 ಕೇಳಿದರೆ, ಸರ್ಕಾರ ₹70 ರೂಪಾಯಿ ಕೊಡುತ್ತದೆ. ಒಮ್ಮೆಲೇ ಅನುದಾನ ನೀಡಿದರೆ ಅಭಿವೃದ್ಧಿ ಕಾರ್ಯಕ್ಕೆ ಅನುಕೂಲ. ಕಲ್ಯಾಣ ಕರ್ನಾಟಕಕ್ಕೆ ಕೊಟ್ಟಂತೆ ಕಿತ್ತೂರು ಕರ್ನಾಟಕಕ್ಕೂ ಕೊಟ್ಟರೆ ಇಲ್ಲಿನ ಯಾವ ಶಾಸಕರೂ ಅನುದಾನ ಕೇಳಲು ಬೆಂಗಳೂರಿಗೆ ಹೋಗುವುದಿಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರದಲ್ಲಿ 33 ಜನರಿಗೆ ಮಾತ್ರ ಸಚಿವರಾಗಲು ಅವಕಾಶ ಇದೆ. ನನಗಿಂತ ಹಿರಿಯ ಶಾಸಕರು ಸಾಕಷ್ಟು ಜನ ಇದ್ದಾರೆ. ಎಲ್ಲರಿಗೂ ಅವಕಾಶ ಸಿಗಲು ಸಾಧ್ಯವಿಲ್ಲ. 'ಕಿರಿಯರಾದ ಮಧು ಬಂಗಾರಪ್ಪ, ಕೃಷ್ಣ ಬೈರೇಗೌಡ, ದಿನೇಶ ಗುಂಡೂರಾವ್, ಸಂತೋಷ ಲಾಡ್ ಅವರಿಗೆ ಅವಕಾಶ ನೀಡಲಾಗಿದೆ. ಅವರನ್ನು ಕೈಬಿಟ್ಟು ನನಗೆ ಅವಕಾಶ ಕೊಟ್ಟಲ್ಲಿ ಸಮರ್ಥವಾಗಿ ನಿರ್ವಹಣೆ ಮಾಡುತ್ತೇನೆ' ಎಂದು ಹೇಳಿದರು.

'ಹಿರಿಯರು ಕಟ್ಟುನಿಟ್ಟಾಗಿದ್ದರೆ ಕುಟುಂಬ ಸರಿ ಇರುತ್ತದೆ. ಹಿರಿಯರು ತಪ್ಪು ಮಾಡಿದರೆ ಕಿರಿಯರೂ ದಾರಿ ತಪ್ಪುತ್ತಾರೆ. ಸರ್ಕಾರದಲ್ಲಿ ಕೆಲವು ತೊಂದರೆಗಳಿವೆ. ಶಾಸಕರಿಗೆ ಸ್ಪಂದಿಸಿ ಕೆಲಸ ಮಾಡಬೇಕು ಎಂದು ಕೆಲ ಸಚಿವರಿಗೆ ಸಲಹೆ ನೀಡಿದ್ದೇನೆ' ಎಂದರು.

'ಆಡಳಿತದಲ್ಲಿ ಸುಧಾರಣೆಯಾಗಬೇಕು. ಸರ್ಕಾರದಲ್ಲಿ ಯಾವುದೂ ಪಾರದರ್ಶಕವಾಗಿ ಆಗುತ್ತಿಲ್ಲ. ಅಂಗವಿಕಲ, ವೃದ್ಧಾಪ್ಯ ವೇತನ ಪಡೆಯುತ್ತಿರುವವರಲ್ಲಿ ಶೇ 30ರಷ್ಟು ಜನ ಮಾತ್ರ ಅರ್ಹ ಫಲಾನುಭವಿಗಳಿದ್ದಾರೆ' ಎಂದು ಹೇಳಿದರು.

'ಸಮೀಕ್ಷೆಗೆ ವಿರೋಧ, ಬೆತ್ತಲಾದ ಬಿಜೆಪಿ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: 'ರಾಜ್ಯ ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಆರಂಭಿಸುತ್ತಿದ್ದಂತೆ ಬಿಜೆಪಿ ನಾಯಕರ ನಿಜ ಬಣ್ಣ ಬಯಲಾಗುತ್ತಿದೆ. ಸಮೀಕ್ಷೆಯನ್ನು ಬಹಿಷ್ಕರಿಸುವಂತೆ ಒಬ್ಬೊಬ್ಬರಾಗಿ ಕರೆ ನೀಡುತ್ತಿದ್ದು, ಸಾರ್ವಜನಿಕರ ಎದುರು ಬೆತ್ತಲಾಗುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂದು ಕೂಗು ಹಾಕುತ್ತಿರುವವರ ಆಂತರ್ಯ ಅರ್ಥವಾಗುತ್ತಿದೆ. ಸಮೀಕ್ಷೆ ಹಾಳು ಮಾಡಲು ಬಿಜೆಪಿಯ ಪ್ರಯತ್ನ ಎಲ್ಲರಿಗೂ ಅರ್ಥವಾಗುತ್ತಿದೆ. ಅವರ ಆತ್ಮವಂಚಕ ನಡವಳಿಕೆಯನ್ನು ರಾಜ್ಯದ ಜನರು ಅರ್ಥಮಾಡಿಕೊಳ್ಳಬೇಕು. ಅವರ ರಾಜಕೀಯ ಪ್ರೇರಿತ ಸುಳ್ಳು ಹೇಳಿಕೆಗಳನ್ನು ಕಸದ ಬುಟ್ಟಿಗೆ ಎಸೆಯಬೇಕು. ಎಲ್ಲರೂ ಸಮೀಕ್ಷೆಯಲ್ಲಿ ಪಾಲ್ಗೊಂಡು, ಸಂಪೂರ್ಣ ಸಹಕಾರ ನೀಡಬೇಕು. ಸಮ ಸಮಾಜವನ್ನು ನಿರ್ಮಾಣ ಮಾಡುವ ಮೂಲಕ ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿಸಬೇಕು' ಎಂದು ವಿನಂತಿಸಿದ್ದಾರೆ.

ಸಮೀಕ್ಷೆಯು ಯಾವುದೇ ಜಾತಿ-ಧರ್ಮಗಳಿಗೆ ಸೀಮಿತವಾದುದಲ್ಲ. ಇದು ರಾಜ್ಯದ ಏಳು ಕೋಟಿ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ. ಇದು ಯಾರ ವಿರುದ್ಧವೂ ಅಲ್ಲ, ಎಲ್ಲರಿಗೂ ಸಮಪಾಲು, ಸಮಬಾಳು ನೀಡುವುದಾಗಿದೆ. ಸಂಪತ್ತು, ಅವಕಾಶ ಮತ್ತು ಪ್ರಾತಿನಿಧ್ಯ ಎಲ್ಲವೂ ಯಥಾಸ್ಥಿತಿಯಲ್ಲಿಯೇ ಇರಬೇಕು. ಬಡವರು ಬಡವರಾಗಿಯೇ ಉಳಿಯಬೇಕು, ಹಿಂದುಳಿದವರು ಹಿಂದೆಯೇ ಉಳಿಯಬೇಕು. ಮಹಿಳೆಯರು ಅವಕಾಶ ವಂಚಿತರಾಗಬೇಕು. ವರ್ಣ ಮತ್ತು ವರ್ಗಗಳ ನಡುವಿನ ಅಸಮಾನತೆ ಮುಂದುವರಿಯಬೇಕು ಎನ್ನುವುದು ಮನುವಾದ. ಬಿಜೆಪಿಯ ನಾಯಕರ ಅಂತರಂಗದಲ್ಲಿರುವುದು ಇದೇ ಮನುವಾದಿ ಮನಸ್ಥಿತಿ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಸ್ಥಿತಿ-ಗತಿ ಮಾತ್ರವಲ್ಲ, ಮುಂದುವರಿದ ಜಾತಿಗಳ ಒಳಗಿನ ಬಡವರು ಮತ್ತು ಅವಕಾಶ ವಂಚಿತರ ಸ್ಥಿತಿಗತಿಯ ಮಾಹಿತಿಯೂ ಸಿಗಲಿದೆ. ವಾಸ್ತವಸ್ಥಿತಿಯ ಅರಿವಾಗುವುದು ಬಿಜೆಪಿಗೆ ಬೇಡವಾಗಿದೆ. ಸಂಪತ್ತು, ಅವಕಾಶ ಮತ್ತು ಪ್ರಾತಿನಿಧ್ಯ ಪ್ರತಿಯೊಂದು ಜಾತಿ ಮತ್ತು ಧರ್ಮದೊಳಗಿನ ಉಳ್ಳವರ ಕೈಯಲ್ಲಿಯೇ ಇರಬೇಕು ಎನ್ನುವುದೇ ಅವರ ವಿರೋಧದ ಹಿಂದಿನ ದುರುದ್ದೇಶ ಎಂದು ದೂರಿದ್ದಾರೆ.

'ಮೋದಿ ಎದುರು ಮಾತನಾಡುವ ತಾಕತ್ತು ಇದೆಯಾ?'

'ಕೇಂದ್ರ ಸರ್ಕಾರ ಮಾಡಲು ಹೊರಟಿರುವ ಜಾತಿ ಗಣತಿ ಪ್ರಶ್ನಿಸುವ, ಪ್ರಧಾನಿಯ ಎದುರು ತಲೆ ಎತ್ತಿ ಮಾತನಾಡುವ ದಮ್ಮು-ತಾಕತ್ತು ಬಿಜೆಪಿ ನಾಯಕರಿಗೆ ಇದೆಯಾ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಪ್ರಧಾನಿ ಎದುರು ಮಾತನಾಡುವ ಧೈರ್ಯ ಇಲ್ಲದ ಬಿಜೆಪಿ ನಾಯಕರು ಮೂರ್ಖತನದ ಹೇಳಿಕೆಗಳ ಮೂಲಕ ರಾಜ್ಯದ ಪ್ರಜ್ಞಾವಂತ ಜನರ ಎದುರು ನಗೆಪಾಟಲಿಗೀಡಾಗುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

'ಬಿಹಾರದಲ್ಲಿ ಇವರದ್ದೇ ಮೈತ್ರಿ ಸರ್ಕಾರ ಜಾತಿ ಆಧಾರಿತ ಸಮೀಕ್ಷೆ ನಡೆಸಿದೆ. ತೆಲಂಗಾಣದಲ್ಲಿಯೂ ನಡೆದಿದೆ. ಆ ಬಗ್ಗೆ ಬಿಜೆಪಿ ನಾಯಕರು ಬಾಯಿ ಮುಚ್ಚಿಕೊಂಡಿದ್ದಾರೆ' ಎಂದು ಹಂಗಿಸಿದ್ದಾರೆ.

ಜಾನಪದ ದಸರೆ



ಪ್ರಜಾವಾಣಿ ಚಿತ್ರ:

ಮಡಿಕೇರಿಯಲ್ಲಿ ಜಾನಪದ ದಸರೆ ಪ್ರಯುಕ್ತ ಸೋಮವಾರ ಕಲಾ ಜಾಥಾ ನಡೆಯಿತು

'ಮಹಾರಾಷ್ಟ್ರ ವಿರುದ್ಧ ಕೇಂದ್ರಕ್ಕೆ ದೂರು'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಬಚಾವತ್ ಐ ತೀರ್ಪು ಉಲ್ಲಂಘಿಸಿ ಮಹಾರಾಷ್ಟ್ರ ಸರ್ಕಾರ 50 ಟಿಎಂಸಿ ಅಡಿ ನೀರನ್ನು ಅಕ್ರಮವಾಗಿ ಸಂಗ್ರಹಿಸಿ, ಬಳಸಿಕೊಳ್ಳುತ್ತಿರುವುದರ ವಿರುದ್ಧ ಕೇಂದ್ರ ಜಲಶಕ್ತಿ ಸಚಿವಾಲಯದ ಪರಿಶೀಲನಾ ಸಮಿತಿಗೆ ದೂರು ನೀಡಿ, ಕ್ರಮಕ್ಕೆ ಆಗ್ರಹಿಸಲಾಗುವುದು' ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

'ಭೀಮಾ, ಸೀನಾ ನದಿಗಳ ವ್ಯಾಪ್ತಿಯಲ್ಲಿ ಮಹಾರಾಷ್ಟ್ರವು ಅತಿಯಾಗಿ ನೀರು ಸಂಗ್ರಹಿಸಿ, ಬಳಸುತ್ತಿರುವ ಕಾರಣ ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ. ರಾಜ್ಯದ ಕುಡಿಯುವ ನೀರಿನ ಯೋಜನೆ, ನೀರಾವರಿ ಯೋಜನೆಗಳು ನೀರಿನ ಕೊರತೆ ಅನುಭವಿಸುತ್ತಿವೆ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಭೀಮೆ ಪ್ರವಾಹ: ತಗ್ಗದ ಭೀತಿ, ಬವಣೆ...

ಒಂದನೇ ಪುಟದಿಂದ...

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸೋಮವಾರ ಚಿತ್ತಾಪುರ ತಾಲ್ಲೂಕಿನ ನೆರೆ ಪೀಡಿತ ಗ್ರಾಮಗಳಲ್ಲಿ ಸಂಚರಿಸಿ ಪರಿಸ್ಥಿತಿಯನ್ನು ಅವಲೋಕಿಸಿದರು. ಸಂತ್ರಸ್ತರ ಅಳಲು ಆಲಿಸಿದರು.

ಬೀದರ್ ಜಿಲ್ಲೆಯಲ್ಲಿ ಮಳೆ ಬಿಡುವು ಕೊಟ್ಟಿದ್ದು, ಜನ ನಿಟ್ಟುಸಿರು ಬಿಟ್ಟರು. ಆದರೆ, ಮಹಾರಾಷ್ಟ್ರದ ಜಲಾಶಯಗಳಿಂದ ಈಗಲೂ ನೀರು ಹರಿಸುತ್ತಿರುವುದರಿಂದ ಭಾಲ್ಕಿ, ಕಮಲನಗರ, ಹುಲಸೂರ, ಔರಾದ್ ಹಾಗೂ ಬೀದರ್ ತಾಲ್ಲೂಕಿನಲ್ಲಿ ಮಾಂಜ್ರಾ ನದಿಗೆ ಹೊಂದಿಕೊಂಡಿರುವ ಹಲವು ಗ್ರಾಮಗಳ ಸಂಪರ್ಕ ಈಗಲೂ ಕಡಿತಗೊಂಡಿದೆ. ಜಮೀನುಗಳು ಜಲಾವೃತಗೊಂಡಿವೆ.

ಭೀಮಾ ನದಿಯು ಉಕ್ಕಿ ಹರಿದು ಕೃಷ್ಣಾ ನದಿ ಸೇರುತ್ತಿರುವುದರಿಂದ ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಹೀಗಾಗಿ ರಾಯಚೂರು ತಾಲ್ಲೂಕಿನ ಗುರ್ಜಾಪುರ ಬ್ರಿಜ್ ಕಂ ಬ್ಯಾರೇಜ್ ಮೇಲಿನ ಸಂಪರ್ಕ ಕಡಿತಗೊಂಡಿದೆ. ಗುರ್ಜಾಪುರ ಹಾಗೂ ಕಾಡ್ಲೂರು ಸುತ್ತಮುತ್ತಲಿನ 20 ಗ್ರಾಮಗಳ ಸಾರಿಗೆ ಸಂಪರ್ಕ ಕಡಿದು ಹೋಗಿದೆ.

ನೆರೆ ಹಾವಳಿ ವೀಕ್ಷಿಸಿದ ಬಿಜೆಪಿ ನಿಯೋಗ

ಒಂದನೇ ಪುಟದಿಂದ...

ಬಳಿಕ ಮಾತನಾಡಿದ ವಿಜಯೇಂದ್ರ, 'ಎನ್‌ಡಿಆರ್‌ಎಫ್ ನಿಧಿಯಿಂದ ಪರಿಹಾರ ಎಷ್ಟು ಬರಬೇಕೋ ಅಷ್ಟು ಬಂದೇ ಬರುತ್ತದೆ. ರಾಜ್ಯ ಸರ್ಕಾರ ತನ್ನ ಪಾಲಿನ ಪರಿಹಾರವನ್ನು ತಕ್ಷಣ ಕೊಡಬೇಕು' ಎಂದು ಒತ್ತಾಯಿಸಿದರು.

ಮಹಾರಾಷ್ಟ್ರದ ಜಲಾಶಯಗಳಿಂದ ನೀರು ಬಿಟ್ಟಾಗಲೆಲ್ಲಾ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸಮಸ್ಯೆ ತಲೆದೋರುತ್ತದೆ. ಶಾಶ್ವತ ಪರಿಹಾರಕ್ಕೆ ಸರ್ಕಾರ ಚಿಂತನೆ ನಡೆಸಬೇಕು. ಕಂದಾಯ, ಕೃಷಿ ಸಚಿವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟು ರೈತರ ಸಮಸ್ಯೆ ಆಲಿಸಬೇಕು' ಎಂದು ಆಗ್ರಹಿಸಿದರು. ನಂತರ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ದೇವಲಗಾಣಗಾಪುರ ಸಮೀಪದ ಭೀಮಾ ಪ್ರವಾಹವನ್ನು ವೀಕ್ಷಿಸಿದರು.

ಮುಖ್ಯಾಂಶಗಳು

- ಉಕ್ಕಿ ಹರಿದ ಭೀಮಾ, ಮಾಂಜ್ರಾ ನದಿ
- ಹಾವು, ಚೇಳುಗಳಂತಹ ವಿಷ ಜಂತುಗಳ ಭೀತಿ

ಕೃಷ್ಣೆಯ ಪ್ರವಾಹದಲ್ಲಿ ಮೊಸಳೆಗಳು ತೇಲಿಕೊಂಡು ಬಂದು ಭತ್ತದ ಗದ್ದೆಗಳಿಗೆ ನುಗ್ಗುತ್ತಿವೆ. ಮಾನ್ವಿ ಮುಷ್ಟೂರು ಹಳ್ಳದ ತಾತ್ಕಾಲಿಕ ಸೇತುವೆ ಕೊಚ್ಚಿಕೊಂಡು ಹೋಗಿದೆ.

ಯಾದಗಿರಿ ಜಿಲ್ಲೆಯಲ್ಲಿ ಸಂಪರ್ಕ ಕಡಿತವಾಗಿದ್ದ ಕೆಲ ಸೇತುವೆಗಳು ಸಂಚಾರಕ್ಕೆ ಮುಕ್ತವಾಗಿವೆ. ಸನ್ನತಿ ಹಾಗೂ ಯಾದಗಿರಿ ಬ್ಯಾರೇಜ್‌ನ ಒಳ ಹಾಗೂ ಹೊರ ಹರಿವಿನ ಪ್ರಮಾಣ 4.75 ಲಕ್ಷ ಕ್ಯೂಸೆಕ್‌ಗೆ ಇಳಿಕೆಯಾಗಿದೆ. ಯಾದಗಿರಿ ಸಮೀಪದ ದೊಡ್ಡ ಹಳ್ಳ ಸೇತುವೆ, ನಾಯ್ಕಲ್ ಸಮೀಪದ ಯಾದಗಿರಿ– ಶಹಾಪುರ ರಸ್ತೆಯಲ್ಲಿ ಸೋಮವಾರ ಸಂಜೆಯಿಂದ ವಾಹನ ಸಂಚಾರ ಆರಂಭವಾಗಿದೆ.

ತಳಕ ಮತ್ತು ಅರ್ಜುಣಗಿಯಲ್ಲಿ ಹೊಸದಾಗಿ ಕಾಳಜಿ ಕೇಂದ್ರಗಳನ್ನು ತೆರೆದು 130 ಜನರಿಗೆ ಆಶ್ರಯ ಕಲ್ಪಿಸಲಾಗಿದೆ. ಪ್ರವಾಹ ಪೀಡಿತ ಒಟ್ಟು 7 ಗ್ರಾಮಗಳ 1,490 ಜನರು ಕಾಳಜಿ ಕೇಂದ್ರಗಳಲ್ಲಿ ಉಳಿದುಕೊಂಡಿದ್ದಾರೆ. ಯಾದಗಿರಿ ನಗರದ 30 ಜನರನ್ನು ಸುರಕ್ಷತಾ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಗಿದೆ.

ಯಾದಗಿರಿ ನಗರ, ಸುತ್ತಲಿನ ಗ್ರಾಮಗಳು, ಸುರಪುರ ತಾಲ್ಲೂಕಿನ ಕೆಲವೆಡೆ ಸಾಧಾರಣ ಮಳೆಯಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.30	5,977	6,404
ಹಾರಂಗಿ	2,859	2,858.30	4,526	1,600
ಕಬಿನಿ	2,284.00	2,282.40	4,221	850
ಹೇಮಾವತಿ	2,922	2,918.50	6,382	6,335
ಲಿಂಗನಮಕ್ಕಿ	1,819	1,816.45	25,010	4,859
ಸೂಪಾ (ಮೀ)	564	559.64	4,884.0	2,567.72
ಮಾಣಿ	595	594.13	2,265	664
ತುಂಗಭದ್ರಾ	1,633	1,626.06	15,429	15,327
ಮಲಪ್ರಭಾ	2,079.5	2,079.50	5,444	5,444
ಘಟಪ್ರಭಾ	2175	2,174.75	2,902	5,320
ಭದ್ರಾ *	186	184.5	1,942	4,350
ಆಲಮಟ್ಟಿ (ಮೀ)	519.6	519.55	1,07,573	1,22,635
ನಾರಾಯಣಪುರ (ಮೀ)	492.25	491.93	1,35,000	1,34,760

* ನೆಲಮಟ್ಟದಿಂದ

'ಶಿಕ್ಷಣ, ಉದ್ಯೋಗ, ಹೂಡಿಕೆಯಲ್ಲಿ ಸಮಾನ ಅವಕಾಶ ಅಗತ್ಯ'

ಗ್ರಾವಿಟಾಸ್ ಟೆಕ್ನಾಲಜಿಕಲ್ ಫೆಸ್ಟ್



ಗ್ರಾವಿಟಾಸ್ 2025 ಸಮಾರಂಭದಲ್ಲಿ ಶಾಸಕ ಶರತ್ ಬಚ್ಚೇಗೌಡ ಮಾತನಾಡಿದರು.

ವೆಲ್ಲೂರು: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಗ್ರಾವಿಟಾಸ್ ಟೆಕ್ನಾಲಜಿಕಲ್ ಫೆಸ್ಟ್-2025 ಸಮಾರಂಭದಲ್ಲಿ ಹೊಸಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಮತ್ತು ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಇಲಾಖೆ ನಿಗಮ ನಿಯಮಿತ (ಕಿಯೋನಿಕ್ಸ್) ಅಧ್ಯಕ್ಷ ಶರತ್ ಕುಮಾರ್ ಬಚ್ಚೇಗೌಡ ಅವರು ಸಮಾಜದ ಎಲ್ಲ ವರ್ಗದ ಜನರಿಗೆಗೆ ಶಿಕ್ಷಣ, ಉದ್ಯೋಗ ಹಾಗೂ ಹೂಡಿಕೆಯಲ್ಲಿ ಸಮಾನ ಅವಕಾಶಗಳ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ಭಾನುವಾರ ಗ್ರಾವಿಟಾಸ್ ಟೆಕ್ನಾಲಜಿಕಲ್ ಫೆಸ್ಟ್‌ನ ಸಮಾರೋಪ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅವರು ಶಿಕ್ಷಣ, ಉದ್ಯೋಗ ಮತ್ತು ಹೂಡಿಕೆಗೂ ಪ್ರಜಾಪ್ರಭುತ್ವವನ್ನು ವಿಸ್ತರಿಸಬೇಕು. ಸಮಾಜದ ಎಲ್ಲ ವರ್ಗಗಳಿಗೂ ಸಮಾನ ಅವಕಾಶಗಳು ಸಿಗಬೇಕು ಎಂದರು.

ಭಾರತವು ತನ್ನ ವಿದ್ಯುತ್ ಅಗತ್ಯಗಳಲ್ಲಿ 50% ಕಲ್ಲಿದ್ದಲು ಮತ್ತು ಅನಿಲದಂತಹ ಸಾಂಪ್ರದಾಯಿಕ ಇಂಧನ ಮೂಲಗಳನ್ನು ಅವಲಂಬಿಸಿದೆ. ಭಾರತದಲ್ಲಿ ವಾಯು ಮಾಲಿನ್ಯದಿಂದ ವಾರ್ಷಿಕ ಸುಮಾರು 16 ಲಕ್ಷ ಜನರು ಅಕಾಲಿಕ ಮರಣಗಳಿಗೆ ಕಾರಣವಾಗುತ್ತಿದ್ದಾರೆ ಎಂದು ಸಂಬಂಧಿತ ಅಂಕಿ ಅಂಶಗಳು ಹೇಳುತ್ತವೆ.

ದೆಹಲಿ, ಮುಂಬೈ, ಬೆಂಗಳೂರು ಮತ್ತು ಚೆನ್ನೈನಂತಹ ಪ್ರಮುಖ ನಗರಗಳು ಕಳಪೆ ಗಾಳಿಯ ಗುಣಮಟ್ಟದಿಂದ ಬಳಲುತ್ತಿವೆ. ಕರ್ನಾಟಕದಲ್ಲಿ ಸೇವಿಸುವ ಗಾಳಿ ಶೇ 80 ರಷ್ಟು ನವೀಕರಿಸಬಹುದಾದ ಮೂಲಗಳಿಂದ ಪಡೆಯಲ್ಪಟ್ಟಿದೆ.

ಉದ್ಯೋಗದಲ್ಲಿ ಹೆಚ್ಚಿನ ಮಹಿಳೆಯರು ಭಾಗವಹಿಸುವಿಕೆ ಮೂಲಕ ಲಿಂಗಾಂತರ ಕಡಿಮೆ ಮಾಡಬೇಕು. ಈ ವಿಷಯದಲ್ಲಿ ತಮಿಳುನಾಡು ಮುಂಚೂಣಿಯಲ್ಲಿದೆ. ಇದಕ್ಕೆ ಬೆಂಬಲ ನೀಡುವ ಸರ್ಕಾರಿ ನೀತಿಗಳು ಮತ್ತು ವಿಐಟಿಯಂತಹ ಸಂಸ್ಥೆಗಳಿಗೆ ಧನ್ಯವಾದಗಳು ಹೇಳುತ್ತೇನೆ.

ನೀತಿ ಆಯೋಗದ ನಿರ್ದೇಶಕ ಶಶಾಂಕ್ ಶಾ ಮಾತನಾಡಿ, 'ಭಾರತವು 2047 ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಗುರಿ ಹೊಂದಿದೆ. 30 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧಿಸುವತ್ತ ಹೆಜ್ಜೆ ಹಾಕಿದೆ. ಇದು ಮುಂದಿನ 25 ವರ್ಷಗಳಲ್ಲಿ 7.5 ಪಟ್ಟು ಬೆಳವಣಿಗೆಯ ಅಗತ್ಯವಿದೆ. ಉನ್ನತ ಶಿಕ್ಷಣ ಮತ್ತು ಸಂಶೋಧನೆಯು ಈ ಪ್ರಯಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.


ವಿದ್ಯಾರ್ಥಿಗಳ ಕೊಡುಗೆ ಅತ್ಯಗತ್ಯ: ನಾಸಾ ಒಂದು ಕಾಲದಲ್ಲಿ ಭಾರತಕ್ಕೆ ತಂತ್ರಜ್ಞಾನ ನೀಡಲು ನಿರಾಕರಿಸಿತ್ತು. ಆದರೆ ಇಂದು ಇಸ್ರೋ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಗಮನಾರ್ಹ ಯಶಸ್ಸನ್ನು ಸಾಧಿಸಿದೆ ಮತ್ತು ಕೌಶಲ್ಯಪೂರ್ಣ ವಿದ್ಯಾರ್ಥಿಗಳಿಗೆ ನೆಲೆಯಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ದೇಶ ಪ್ರಮುಖ ಜಾಗತಿಕ ಆರ್ಥಿಕ ಶಕ್ತಿಯಾಗಲು ವಿದ್ಯಾರ್ಥಿಗಳ ಕೊಡುಗೆ ಅತ್ಯಗತ್ಯ' ಎಂದು ವಿಐಟಿ ಉಪಾಧ್ಯಕ್ಷ ಶೇಖರ್ ವಿಶ್ವನಾಥನ್ ಹೇಳಿದರು.

ವಿಐಟಿ ಕಾರ್ಯನಿರ್ವಾಹಕ ನಿರ್ದೇಶಕಿ ಸಂಧ್ಯಾ ಪೆಂಟರೆಡ್ಡಿ, ವಿಐಟಿ ಉಪಾಧ್ಯಕ್ಷ ಶಂಕರ್ ವಿಶ್ವನಾಥನ್, ಉಪಕುಲಪತಿ ಕಾಂಚನಾ ಭಾಸ್ಕರನ್, ವೈಸ್-ಚಾನ್ಸೆಲರ್ ಪಾರ್ಥಸಾರಥಿ ಮಲ್ಲಿಕ್, ರಿಜಿಸ್ಟ್ರಾರ್ ಜಯಭಾರತಿ ಮತ್ತು ಗ್ರಾವಿಟಾಸ್ ಸಂಯೋಜಕಿ ಶರ್ಮಿಳಾ ಭಾಗವಹಿಸಿದ್ದರು.

ನಕ್ಕು, ನಗಿಸುತ್ತ ಮರೆಯಾದ ಯಶವಂತ

ನುಡಿ ನಮನ

• ಶಶಿಧರ ನರೇಂದ್ರ



ಹುಬ್ಬಳ್ಳಿ: ಚಾರ್ಲಿ ಚಾಪ್ಲಿನ್, ಯಶವಂತನ ಇಷ್ಟದ ನಟನಾಗಿದ್ದ. ಹುಬ್ಬಳ್ಳಿಯ ನವನಗರದಲ್ಲಿ ವಾಸವಿದ್ದ ಅವನು 1980ರ ಅವಧಿಯಲ್ಲಿ ಚಾಪ್ಲಿನ್ ನಟನೆಯನ್ನು ಯಥಾವತ್ತಾಗಿ ಮಿಮಿಕ್ರಿ ಮಾಡುತ್ತ, ಸ್ನೇಹಿತರನ್ನೆಲ್ಲ ನಗಿಸುತ್ತಿದ್ದ. ಆಗಿನಿಂದಲೇ ಅವನಿಗೆ ರಂಗಭೂಮಿ ಮೇಲೆ ಒಲವಿತ್ತು. 1987–88ರಲ್ಲಿ ಶಿವಮೊಗ್ಗದ ನೀನಾಸಂನಲ್ಲಿ ತರಬೇತಿ ಪಡೆದು ಬಂದ ಆತ ನಂತರದ ದಿನಗಳಲ್ಲಿ ರಂಗಭೂಮಿ ಕ್ಷೇತ್ರದಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿ ಯಶಸ್ವಿ ಕಲಾವಿದನಾಗಿ ಗುರುತಿಸಿಕೊಂಡಿದ್ದ.

ಯಶವಂತ ಮತ್ತು ನನಗೆ ಒಂದು ವರ್ಷದ ಅಂತರ. ಇಬ್ಬರೂ ಏಕಕಾಲಕ್ಕೆ ರಂಗಭೂಮಿ ಪ್ರವೇಶಿಸಿದವರು. ನಮ್ಮ 45 ವರ್ಷಗಳ ಒಡನಾಟ ಬಣ್ಣಕ್ಕಷ್ಟೇ ಸೀಮಿತವಾಗಿರಲಿಲ್ಲ. ಬದುಕಿನ ಪ್ರತಿ ಏರಿಳಿತದಲ್ಲೂ ಗಟ್ಟಿಯಾದ ಭಾವನಾತ್ಮಕ ಸಂಬಂಧವಿತ್ತು. 'ಕೂಡಿಕೊಂಡಿದೆ ಎಂದರೆ, ಯಾವುದೋ ಜನ್ಮದ ನಂಟು. ಯಾವ ಕಾರಣಕ್ಕೂ ನಂಟಿನ ತಂತು ತುಂಡಾಗಬಾರದು' ಎಂದು ತಾತ್ವಿಕವಾಗಿ ಹೇಳುತ್ತಿದ್ದ. ಬಂಧ–ಸಂಬಂಧದ ಬಗ್ಗೆ ಅಪಾರ ಗೌರವ ಇಟ್ಟುಕೊಂಡು, ಅದನ್ನು ಜತನದಿಂದ ಕಾದುಕೊಂಡು ಹೋಗುತ್ತಿದ್ದ.

ಒಂದಷ್ಟು ಸಮಾನ ಮನಸ್ಕರೆಲ್ಲ ಸೇರಿ ಧಾರವಾಡದಲ್ಲಿ 'ಕಲಾದರ್ಪಣ' ಹವ್ಯಾಸಿ ತಂಡ ಕಟ್ಟಿಕೊಂಡಿದ್ದೆವು. ಸಿದ್ದಲಿಂಗ ಪಟ್ಟಣಶೆಟ್ಟಿ ಅವರ ಅನುವಾದದ 'ಅಂಧಯುಗ' ನಾಟಕ ನಿರ್ದೇಶಿಸಿದ. ಅದು ಸಾಕಷ್ಟು ಪ್ರದರ್ಶನ ಕಂಡು, ಹೆಸರು ತಂದುಕೊಟ್ಟಿತು. ನಂತರದ ದಿನಗಳಲ್ಲಿ ದ.ರಾ. ಬೇಂದ್ರೆ ಅವರ 13 ನಾಟಕಗಳನ್ನು, ಧಾರವಾಡದ ಅವರದ್ದೇ ಮನೆಯಂಗಳದಲ್ಲಿ ನಿರ್ದೇಶಿಸಿ ನಮಗೆಲ್ಲ ಬಣ್ಣ ಹಚ್ಚಿಸಿದ್ದ. ದ.ರಾ. ಬೇಂದ್ರೆ ಅವರ ಪುತ್ರ ವಾಮನ ಬೇಂದ್ರೆ ಮಾರ್ಗದರ್ಶನ ನೀಡಿದ್ದರು.

ಬಸ್ ಟಿಕೆಟ್‌ಗೆ ಐದು, ಹತ್ತು ಪೈಸೆ ನೀಡಲು ಆಗದಷ್ಟು ಬಡತನ ಆತನದ್ದು. ಹೀಗಾಗಿ ನವನಗರದಿಂದ ಧಾರವಾಡಕ್ಕೆ ನಡೆದುಕೊಂಡೇ ಬರುತ್ತಿದ್ದ. 'ಬಡತನ ಮತ್ತು ಹಸಿವೆಯ ಕಾವು ಹೆಚ್ಚಾದಾಗಲೇ ಬದುಕು ಅರ್ಥವಾಗುವುದು' ಎನ್ನುತ್ತಿದ್ದ.

ಮಹಾರಾಷ್ಟ್ರದ ನಾಗಪುರದಲ್ಲಿರುವ ದಕ್ಷಿಣ ಮಧ್ಯ ಸಾಂಸ್ಕೃತಿಕ ವಲಯದ ಅಧಿಕಾರಿಯಾಗಿ 15 ವರ್ಷ ಕರ್ತವ್ಯ ನಿರ್ವಹಿಸಿದ್ದ ಯಶವಂತ, ಉತ್ತಮ ನಾಟಕ ಸಾಹಿತ್ಯ, ರಂಗಸಜ್ಜಿಕೆ ಮತ್ತು ಅಭಿನಯ ಹೇಗಿರಬೇಕು ಎಂಬ ಮರ್ಮ ಅರಿತಿದ್ದ. ಅಲ್ಲಿಯ ಮರಾಠಿ ನಾಟಕಗಳನ್ನು ಆಳವಾಗಿ ಅಧ್ಯಯನ ಮಾಡಿ, ಅಲ್ಲಿ ಯಶಸ್ವಿಯಾದ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿ, ನಿರ್ದೇಶಿಸಿದ್ದ. 'ಆಲ್ ದಿ ಬೆಸ್ಟ್', 'ಸೂಪರ್ ಸಂಸಾರ', 'ದಿಲ್ ಮಾಂಗೆ ಮೋರ್', 'ಸಹಿ ರೇ ಸಹಿ' ಪ್ರಮುಖವಾದವು. 'ರಾಶಿ ಚಕ್ರ' ಏಕವ್ಯಕ್ತಿ ನಾಟಕವೂ ಮರಾಠಿ ಮೂಲದ್ದಾಗಿದ್ದು, ಹಾಸ್ಯ, ವ್ಯಂಗ್ಯದ ಮೂಲಕ ಜನಪ್ರಿಯವಾಗಿತ್ತು. ಟಿಕೆಟ್ ಶುಲ್ಕ ಎಷ್ಟೇ ಇಟ್ಟಿದ್ದರೂ, ಥಿಯೇಟರ್ ಹೌಸ್‌ಫುಲ್ ಆಗುತ್ತಿತ್ತು. ರಂಗಭೂಮಿಗೆ ಜನರನ್ನು ಸೆಳೆಯುವ ಹಾಗೆಯೇ, ಮಾರುಕಟ್ಟೆ ಪಡೆಯುವ ಚಾಕಚಕ್ಯತೆಯೂ ಅವನಲ್ಲಿತ್ತು.

ನಟ ಅರವಿಂದ ರಮೇಶ ಅವರ ನಿರ್ದೇಶನದ 'ರಾಮ ಶಾಮ ಭಾಮ' ಸಿನೆಮಾದಲ್ಲಿ ನಟಿಸಿದ ಯಶವಂತ, ತಮಿಳು ನಟ ಕಮಲಹಾಸನ್‌ಗೆ ಹುಬ್ಬಳ್ಳಿ–ಧಾರವಾಡ ಭಾಷೆ ಕಲಿಸಿದ್ದ. ಧಾರವಾಡದ ಕರ್ನಾಟಕ ಕಲಾ ಮಹಾವಿದ್ಯಾಲಯ, ಕೆಇ ಬೋರ್ಡ್ ಶಾಲೆಯ ಡಾಕ್ಯೂಮೆಂಟರಿ ತಯಾರಿಸಿದ್ದ. ಹುಬ್ಬಳ್ಳಿಯಲ್ಲಿ ನಿರ್ಮಿಸಿದ್ದ 'ಆದಿರಂಗ ಥಿಯೇಟರ್'ನಲ್ಲಿ ಒಂಬತ್ತು ವಿಧದ ರಂಗ ಚಟುವಟಿಕೆ ನಡೆಸುವ ಕನಸು ಕಟ್ಟಿಕೊಂಡು, ಆ ನಿಟ್ಟಿನಲ್ಲಿ ಶ್ರಮಿಸುತ್ತಿದ್ದ. ಮಕ್ಕಳನ್ನು ಕಟ್ಟಿಕೊಂಡು ಸಾಕಷ್ಟು ನಾಟಕಗಳನ್ನು ಮಾಡಿದ್ದಾನೆ. ಅವನು ಬರೆದಿದ್ದ ನಾಲ್ಕು ಪುಸ್ತಕಗಳನ್ನು ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ ಪ್ರಕಟಿಸಿದೆ. ನಲವತ್ತು–ನಲವತ್ತೈದು ವರ್ಷಗಳ ಸುದೀರ್ಘ ಕಾಲ ಅನುಭವಿಸಿದ ಕಷ್ಟ, ಪಟ್ಟ ಶ್ರಮಕ್ಕೆ ಫಲ ಸಿಗುವ ಕಾಲಘಟ್ಟ ಇದಾಗಿತ್ತು.

(ಲೇಖಕರು: ರಂಗಕರ್ಮಿ)

ಚಿಟಿಕೆ ಸುದ್ದಿ

ಕಲಬುರ್ಗಿ ಅವರಿಗೆ ಮರಣೋತ್ತರ ರಾಷ್ಟ್ರೀಯ ಪ್ರಶಸ್ತಿ



ಗದಗ: ಲಿಂಗೈಕ್ಯ ಸಿದ್ಧಲಿಂಗ ಶ್ರೀಗಳ ನೆನಪಿನಲ್ಲಿ ನೀಡುವ 'ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ'ಯನ್ನು ಈ ಬಾರಿ ಮರಣೋತ್ತರವಾಗಿ ಸಂಶೋಧಕ ಪ್ರೊ. ಎಂ.ಎಂ.ಕಲಬುರ್ಗಿ ಅವರಿಗೆ ನೀಡಲಾಗುವುದು.

'ಪ್ರಶಸ್ತಿ ₹5 ಲಕ್ಷ ನಗದು ಮತ್ತು ಫಲಕ ಒಳಗೊಂಡಿದೆ' ಎಂದು ಮಠದ ಕಾರ್ಯದರ್ಶಿ ಎಸ್.ಎಸ್. ಪಟ್ಟಣಶೆಟ್ಟರ ತಿಳಿಸಿದ್ದಾರೆ. ಮಠದಲ್ಲಿ ಅ. 3ರಂದು ನಡೆಯುವ ಸಿದ್ಧಲಿಂಗ ಶ್ರೀಯವರ ಏಳನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಕಲಬುರ್ಗಿ ಅವರ ಪತ್ನಿ ಉಮಾದೇವಿ ಅವರು ಪ್ರಶಸ್ತಿ ಸ್ವೀಕರಿಸುವರು ಎಂದು ತಿಳಿಸಿದ್ದಾರೆ.

ಹಣ ದುರ್ಬಳಕೆ 7 ವರ್ಷ ಜೈಲು

ಕೊಪ್ಪಳ: ಸರ್ಕಾರಿ ಹಣ ದುರುಪಯೋಗ ಪ್ರಕರಣದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಭಾಗ್ಯನಗರ ಶಾಖೆಯ ಕಿರಿಯ ಸಹಾಯಕ ಅಧಿಕಾರಿ ಜಿ.ಮಂಜುನಾಥ ಅವರಿಗೆ ಇಲ್ಲಿನ ಸಿಜೆಎಂ ನ್ಯಾಯಾಲಯ ಏಳು ವರ್ಷ ಸಾಧಾರಣ ಜೈಲು ಶಿಕ್ಷೆ ಹಾಗೂ ₹10 ಸಾವಿರ ದಂಡ ವಿಧಿಸಿದೆ.

ಹಾಸನ ಜಿಲ್ಲೆಯ ಗೋರೂರಿನ ಮಂಜುನಾಥ 2002–03ನೇ ಸಾಲಿನಲ್ಲಿ ಇಲ್ಲಿ ಕೆಲಸ ಮಾಡುತ್ತಿದ್ದಾಗ ಮಗ್ಗಕ್ಕೆ ಸಂಬಂಧಿಸಿದ ಪರಿಕರಗಳನ್ನು ಮಾರಾಟ ಮಾಡಿದ್ದ ₹2.12 ಲಕ್ಷವನ್ನು ಸ್ವಂತಕ್ಕೆ ಬಳಸಿದ್ದರು. ನಗರ ಠಾಣೆಯಲ್ಲಿ 2005ರಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ ಸಿಜೆಎಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಮಲ್ಕಾರಿ ರಾಮಪ್ಪ ಒಡೆಯರ್ ಆದೇಶಿಸಿದರು.

ಅನರ್ಹರಿಗೆ ಸೌಲಭ್ಯ ಉಪ ತಹಶೀಲ್ದಾರ್ ಅಮಾನತು

ಗದಗ: ಸಂಧ್ಯಾ ಸುರಕ್ಷಾ, ವಿಧವಾ ವೇತನ, ವೃದ್ಧಾಪ್ಯ ವೇತನ ಸೌಲಭ್ಯಗಳನ್ನು ಅನರ್ಹರಿಗೆ ಕಲ್ಪಿಸಿ ಆರೋಪದ ಮೇಲೆ ಗದಗ ತಾಲ್ಲೂಕು ಕಚೇರಿಯ ಉಪತಹಶೀಲ್ದಾರ್ ಡಿ.ಟಿ.ವಾಲ್ಮೀಕಿ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಆದೇಶ ಹೊರಡಿಸಿದ್ದಾರೆ.

'ದೂರು ಆಧರಿಸಿ ಪರಿಶೀಲಿಸಿದಾಗ, ಉಪ ತಹಶೀಲ್ದಾರ್ ಅವರಿಂದ ಕರ್ತವ್ಯಲೋಪ ಆಗಿದ್ದು, ಜಿಲ್ಲೆಯಲ್ಲಿ 17,997 ಮಂದಿ ಅನರ್ಹರಿಗೆ ಸೌಲಭ್ಯ ತಲುಪಿದೆ ಎಂಬುದು ಪತ್ತೆ ಆಗಿದೆ. ತನಿಖೆಗೆ ಆದೇಶಿಸಲಾಗಿದೆ' ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ.

ಧರ್ಮಸ್ಥಳ ಗ್ರಾ.ಪಂ ನಾಲ್ವರು ಮಾಜಿ ಅಧ್ಯಕ್ಷರ ವಿಚಾರಣೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮದಲ್ಲಿ ಅಪರಾಧಗಳು ನಡೆದಿವೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್ಐಟಿ, ಸೋಮವಾರ ಗ್ರಾಮ ಪಂಚಾಯಿತಿಯ ನಾಲ್ವರು ಮಾಜಿ ಅಧ್ಯಕ್ಷರನ್ನು ವಿಚಾರಣೆಗೆ ಒಳಪಡಿಸಿತು.

ಎಸ್ಐಟಿ ನೀಡಿದ್ದ ನೋಟಿಸ್‌ನಂತೆ ಧರ್ಮಸ್ಥಳ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಕೇಶವ ಗೌಡ, ಪ್ರಭಾಕರ ಪೂಜಾರಿ, ಗೀತಾ, ಚಂದನ್ ಕಾಮತ್ ಅವರು ಬೆಳ್ತಂಗಡಿಯಲ್ಲಿರುವ ಎಸ್ಐಟಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು. ಇವರುಗಳು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಸಹಜ ಸಾವು ಪ್ರಕರಣದಲ್ಲಿ ಶವ ಹೂತಿರುವ ಸಂಬಂಧ ಬಿಲ್ ಪಾವತಿಯಾಗಿದ್ದು, ಈ ಬಗ್ಗೆ ಮಾಹಿತಿ ನೀಡಿದ್ದಾರೆ ಎಂದು ತಿಳಿದುಬಂದಿದೆ.

'ಅ.8ರ ಸಭೆಯಲ್ಲಿ ನಿರ್ಧಾರ'

ಒಸಿ, ಸಿಸಿ ಇಲ್ಲದ ಕಟ್ಟಡಗಳ ಸಮಸ್ಯೆ ಪರಿಹಾರಕ್ಕೆ ಮಾರ್ಗೋಪಾಯ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಧೀನಾನುಭವ ಪತ್ರ (ಒಸಿ) ಮತ್ತು ಕಟ್ಟಡ ಪ್ರಾರಂಭಿಕ ಪ್ರಮಾಣಪತ್ರ (ಸಿಸಿ) ಇಲ್ಲದೇ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಹಾಗೂ ನೀರಿನ ಸಂಪರ್ಕ ನೀಡುವ ಬಗ್ಗೆ ಅಕ್ಟೋಬರ್ 8ರಂದು ನಡೆಯುವ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನೀರು ವಿದ್ಯುತ್ ಸಂಪರ್ಕ

ಗ್ರೇಟರ್ ಬೆಂಗಳೂರು ಹಾಗೂ ರಾಜ್ಯದ ಜಿಲ್ಲೆಗಳಲ್ಲಿ ಒಸಿ ಮತ್ತು ಸಿಸಿ ಇಲ್ಲದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸಮಸ್ಯೆ ಉಂಟಾಗಿರುವ ಬಗ್ಗೆ ಅವರು ಅಧಿಕಾರಿಗಳೊಂದಿಗೆ ಸೋಮವಾರ ಚರ್ಚೆ ನಡೆಸಿದರು.

ಸುಪ್ರೀಂಕೋರ್ಟ್ ಆದೇಶ ಅನುಷ್ಠಾನಗೊಳ್ಳುವ ಮೊದಲು ಸಲ್ಲಿಕೆಯಾಗಿರುವ (2025ರ ಮಾರ್ಚ್‌ವರೆಗಿನ) ಅರ್ಜಿಗಳನ್ನು ಪರಿಗಣಿಸಿ ಒಸಿ ಮತ್ತು ಸಿಸಿಯಿಂದ ವಿನಾಯಿತಿ ನೀಡಿ, ವಿದ್ಯುತ್ ಮತ್ತು ನೀರಿನ ಸಂಪರ್ಕ ನೀಡಲು ಇರುವ ಕಾನೂನಿನ ಸಾಧ್ಯತೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಗುವುದು. ಮುಖ್ಯ ಕಾರ್ಯದರ್ಶಿ, ಸಂಬಂಧಪಟ್ಟ ಇಲಾಖಾ ಸಚಿವರು, ಅಡ್ವೊಕೇಟ್ ಜನರಲ್, ಕಾನೂನು ಸಲಹೆಗಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ವಿದ್ಯುತ್ ಮತ್ತು ನೀರಿನ ಸಂಪರ್ಕ ನೀಡುವ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಆದೇಶವನ್ನು ಎಲ್ಲ ರಾಜ್ಯಗಳೂ ಅನುಷ್ಠಾನಗೊಳಿಸುತ್ತಿವೆಯೇ ಎಂಬುದನ್ನು ಪರಿಶೀಲಿಸುವಂತೆ ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಿಯಮ ಉಲ್ಲಂಘಿಸಿ ನಿರ್ಮಾಣಗೊಂಡಿರುವ ಕಟ್ಟಡಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಅನುಮತಿ ನೀಡುವ ಸಾಧ್ಯತೆ ಬಗ್ಗೆ ಚರ್ಚೆ ನಡೆಯಿತು. ನಿರ್ಮಾಣಗೊಂಡಿರುವ ಕಟ್ಟಡಗಳನ್ನು ನೆಲಸಮ ಗೊಳಿಸಲು ಸಾಧ್ಯವಿಲ್ಲ. ಸರ್ಕಾರದ ನಿರ್ಧಾರದಿಂದ ಜನರಿಗೆ ಅನುಕೂಲವಾಗಬೇಕು ಎಂದು ಸಭೆ ಅಭಿಪ್ರಾಯಪಟ್ಟಿತು.

ಸೂಕ್ತ ಅನುಮತಿಗಳಿಲ್ಲದೇ ಈಗಾಗಲೇ ಮನೆ ನಿರ್ಮಿಸಿ ಜನರು ವಾಸವಿದ್ದಾರೆ. ಅಂತಹವರಿಗೆ ಒಂದು ಬಾರಿಗೆ ಅನ್ವಯವಾಗುವಂತೆ ನಿಯಮಿತಗೊಳಿಸಲು ಕಾನೂನಿನಲ್ಲಿ ಅವಕಾಶವಿರುವ ಬಗ್ಗೆಯೂ ಚರ್ಚೆ ನಡೆಸಲಾಯಿತು.



ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರು ಅಧಿಕಾರಿಗಳ ಸಭೆ ನಡೆಸಿದರು

3 ಲಕ್ಷ ಅರ್ಜಿ ಬಾಕಿ

ಸಿಸಿ ಮತ್ತು ಒಸಿ ಸಮಸ್ಯೆಯಿಂದಾಗಿ ಬೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ 3.40 ಲಕ್ಷ ಕಟ್ಟಡಗಳಿಗೆ ವಿದ್ಯುತ್ ನೀಡಿಲ್ಲ. ಬೆಂಗಳೂರು ನಗರ ಒಂದರಲ್ಲೇ 53 ಸಾವಿರ ವಸತಿ ಕಟ್ಟಡ ಸೇರಿ 86 ಸಾವಿರ ಅರ್ಜಿಗಳು ವಿಲೇವಾರಿ ಆಗದೆ ಬಾಕಿ ಉಳಿದಿವೆ ಎನ್ನಲಾಗಿದೆ.

ಸುಪ್ರೀಂ ಕೋರ್ಟ್ ಆದೇಶದ ಕಾರಣ ನೀಡಿ ಮಾರ್ಚ್‌ನಿಂದ ಒಸಿ, ಸಿಸಿ ಇಲ್ಲದ ಕಾರಣ ಕಟ್ಟಡಗಳಿಗೆ ಬೆಸ್ಕಾಂ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ.

ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ 1,200 ಚದರ ಅಡಿ ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಪಡೆದು ಎರಡು ಅಂತಸ್ತಿನವರೆಗೆ ನಿರ್ಮಾಣಗೊಂಡಿರುವ ಹಾಗೂ ಹೊಸದಾಗಿ ನಿರ್ಮಿಸಲಿರುವ ವಾಸದ ಕಟ್ಟಡಗಳಿಗೆ ಒಸಿ ಪಡೆಯುವುದರಿಂದ ಸರ್ಕಾರ ವಿನಾಯಿತಿ ನೀಡಿದೆ.

ಕಸಾಪ ಅಧ್ಯಕ್ಷರಿಗೆ ಜಾಗೃತಿ ಸಮಿತಿ ಸದಸ್ಯರಿಂದ ಸವಾಲು

'ಹಕ್ಕು ಪಡೆದೇ ಸಭೆಗೆ ಬರುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನಾತ್ಮಕವಾಗಿ ಅಮಾನತು ಆದೇಶ ರದ್ದುಪಡಿಸಿಕೊಂಡು ಜಮಖಂಡಿ ತಾಲ್ಲೂಕು ಕಲ್ಲಹಳ್ಳಿಯಲ್ಲಿ ಅ.5ರಂದು ನಡೆಯಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸರ್ವ ಸದಸ್ಯರ ಸಭೆಗೆ ಭಾಗವಹಿಸುತ್ತೇವೆ. ಈ ವೇಳೆಯ ಅಹಿತಕರ ಘಟನೆಗಳಿಗೆ ಕಸಾಪ ಅಧ್ಯಕ್ಷರೇ ಹೊಣೆಗಾರರು' ಎಂದು ಕನ್ನಡ ನಾಡು ನುಡಿ ಜಾಗೃತಿ ಸಮಿತಿ ಸಂಚಾಲಕಿ ಡಾ.ವಸುಂಧರಾ ಭೂಪತಿ ಹಾಗೂ ಜಾಣಗೆರೆ ವೆಂಕಟರಾಮಯ್ಯ ತಿಳಿಸಿದ್ದಾರೆ.

'ನಮ್ಮ ಸದಸ್ಯತ್ವವನ್ನು ಅಮಾನತು ಪಡಿಸಿದ್ದು, ಸಭೆಗೆ ಬಂದರೆ ಕತ್ತು ಹಿಡಿದು ದಬ್ಬುವುದಾಗಿ ಬಾಗಲಕೋಟೆ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಬೆದರಿಕೆಯೊಡ್ಡಿರುವುದು ಖಂಡನೀಯ. ಈ ಮಾತು ಹೇಳುವಾಗ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಪಕ್ಕದಲ್ಲೇ ಇದ್ದು ಸುಮ್ಮನಿರುವ ಮೂಲಕ ಅನುಮೋದಿಸಿದ್ದಾರೆ' ಎಂದು ಟೀಕಿಸಿದ್ದರು.

'ಸಹಕಾರ ಇಲಾಖೆ ನಡೆಸುತ್ತಿರುವ ವಿಚಾರಣೆಗೆ ಅಸಹಕಾರ ತೋರಿರುವ ಜೋಶಿ ವಿರುದ್ಧ ಈಗಾಗಲೇ ಮಧ್ಯಂತರ ವರದಿ ಸಲ್ಲಿಕೆಯಾಗಿದೆ. ಕ್ರಮ ಕೈಗೊಳ್ಳಬಹುದಾದ ಹಂತದಲ್ಲಿಯೇ ಸಾರಿಗೆ, ವಸತಿ ವ್ಯವಸ್ಥೆ ಇಲ್ಲದೇ ಕಲ್ಲಹಳ್ಳಿಯ ಸಣ್ಣ ಸಭಾಂಗಣದಲ್ಲಿ ವಾರ್ಷಿಕ ಸಭೆ ನಡೆಸಲು ಮುಂದಾಗಿರುವುದನ್ನು ವಿರೋಧಿಸುತ್ತೇವೆ' ಎಂದು ಹೇಳಿದ್ದಾರೆ.

'ಹಿರಿಯ ಆಜೀವ ಸದಸ್ಯರ ಹಕ್ಕನ್ನು ಕಸಿದು ಸ್ವಾತಂತ್ರ್ಯ ಹರಣ ಮಾಡಲು ಮುಂದಾಗಿದ್ದಾರೆ. ದ್ವೇಷ ಸಾಧಿಸುತ್ತಿರುವ ಜೋಶಿ ಅವರ ಅಟ್ಟಹಾಸವನ್ನು ಸರ್ಕಾರ, ಸಹಕಾರ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಿಸಿಕೊಂಡು ಹೋದರೆ ಮಹತ್ತರ ಸಂಸ್ಥೆಯನ್ನೇ ನಾಶಮಾಡಬಹುದು. ಕೂಡಲೇ ಅವರ ವಿರುದ್ಧ ಕ್ರಮ ಕೈಗೊಂಡು ಜೋಶಿ ಕಪಿಮುಷ್ಟಿಯಿಂದ ಕಸಾಪವನ್ನು ಪಾರು ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಮಹಿಳಾ ಆಯೋಗಕ್ಕೆ ದೂರು

'ಕಸಾಪ ಸದಸ್ಯತ್ವ ರದ್ದು ಮಾಡಿ ವಾರ್ಷಿಕ ಸಭೆಯಲ್ಲಿ ಭಾಗವಹಿಸದಂತೆ ಬೆದರಿಕೆ ಹಾಕಿ ಮಹಿಳೆಗೆ ಅಗೌರವ ತೋರಿರುವ ಜತೆಗೆ ಮಾನಸಿಕ ಹಿಂಸೆ ನೀಡುತ್ತಿರುವ ಮಹೇಶ್ ಜೋಶಿ, ಶಿವಾನಂದ ಶೆಲ್ಲಿಕೇರಿ ಅವರ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ಅವರು ಕರ್ನಾಟಕ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ.

'ಇಬ್ಬರೂ ನನ್ನ ಹೆಸರನ್ನು ಬಳಸಿ ಗೌರವಕ್ಕೆ ಧಕ್ಕೆ ತಂದಿದ್ದಾರೆ. ನನ್ನ ಮೇಲೆ ₹1 ಕೋಟಿ ಮಾನನಷ್ಟ ಮೊಕದ್ದಮೆಯನ್ನು ಹೂಡಿ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದಾರೆ. ನನಗೆ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಭಾಗವಹಿಸುವ ಹಕ್ಕಿದ್ದು, ಸೂಕ್ತ ರಕ್ಷಣೆಯನ್ನು ಕೊಡಿಸಬೇಕು' ಎಂದು ಮನವಿ ಮಾಡಿದ್ದಾರೆ.

812 ಉಪನ್ಯಾಸಕರಿಗೆ ನಿಯೋಜನೆ ಕಾರ್ಯ 'ಭಾರ'

ಒಂದನೇ ಪುಟದಿಂದ...

ಅಲ್ಲದೆ, 'ವಾರದಲ್ಲಿ ಎರಡು ದಿನ ನಿರಂತರ ರಜೆ ಬಂದರೆ ಒಂದೇ ದಿನ ಪಾಠ ಮಾಡಲು ಸಾಧ್ಯ. ಎರಡೂ ಕಡೆ ಪಠ್ಯವನ್ನು ನಿಗದಿತ ಅವಧಿಯ ಒಳಗೆ ಮುಗಿಸುವ ಷರತ್ತು ವಿಧಿಸಲಾಗಿದೆ. ಇದು ಹೇಗೆ ಸಾಧ್ಯ? ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯದ ಈ ನಿರ್ಧಾರದಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತುಂಬಾ ಅನ್ಯಾಯವಾಗುತ್ತಿದೆ' ಎಂದೂ ಅವರು ಹೇಳಿದರು.

'ಹಾಸನ ಜಿಲ್ಲೆಯ ಸರ್ಕಾರಿ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಷಯ ತೆಗೆದುಕೊಂಡಿದ್ದೆ. ಭೌತವಿಜ್ಞಾನ ವಿಷಯವೇ ಕಠಿಣವಾಗಿದೆ. ಆದರೆ, ಅಲ್ಲಿದ್ದ ಭೌತವಿಜ್ಞಾನ ಉಪನ್ಯಾಸಕರನ್ನು ವಾರದಲ್ಲಿ 3 ದಿನ ಬೇರೆಡೆ ನಿಯೋಜಿಸಿದ್ದಾರೆ. ಇದರಿಂದ ಕಲಿಕೆಗೆ ತೊಂದರೆಯಾಗಿದೆ. ಖಾಸಗಿ ಕಾಲೇಜಿಗೆ ಸೇರಲು ಆರ್ಥಿಕ ಸ್ಥಿತಿ ಸರಿ ಇಲ್ಲ' ಎಂದು ನೋವು ತೋಡಿಕೊಂಡರು ವಿದ್ಯಾರ್ಥಿನಿ ಆಶಾ.

ಬಿಎಂಟಿಸಿ ಅಧ್ಯಕ್ಷ, ಉಪಾಧ್ಯಕ್ಷ ಅದಲು–ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನವನ್ನು ಅದಲು–ಬದಲು ಮಾಡುವ ಜತೆಗೆ, ಮತ್ತೆ 6 ಮಂದಿಗೆ ವಿವಿಧ ನಿಗಮಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ನೀಡಲಾಗಿದೆ.

ಬಿಎಂಟಿಸಿ ಅಧ್ಯಕ್ಷ ಸ್ಥಾನಕ್ಕೆ ನಿಕೇತ್ ರಾಜ್ ಮೌರ್ಯ ಅವರನ್ನು, ಉಪಾಧ್ಯಕ್ಷ ಸ್ಥಾನಕ್ಕೆ ವಿ.ಎಸ್. ಆರಾಧ್ಯ ಅವರನ್ನು ನೇಮಕ ಮಾಡಲಾಗಿತ್ತು. ನಿಕೇತ್ ಅವರು ಈಗಾಗಲೇ ಅಧಿಕಾರವನ್ನೂ ಸ್ವೀಕರಿಸಿದ್ದರು. ಸೋಮವಾರ ಹೊರಡಿಸಲಾದ ಮತ್ತೊಂದು ಆದೇಶದಲ್ಲಿ ಇಬ್ಬರ ಸ್ಥಾನವನ್ನು ಅದಲು ಬದಲು ಮಾಡಲಾಗಿದೆ.

ಕಲಬುರಗಿಯ ಸೈಯದ್ ಮಹಮದ್ ಚಿಸ್ತಿ (ತೊಗರಿ ಅಭಿವೃದ್ಧಿ ಮಂಡಳಿ), ವಿಜಯಪುರದ ಬಿ.ಎಸ್.ಕವಲಗಿ (ಲಿಂಬೆ ಅಭಿವೃದ್ಧಿ ಮಂಡಳಿ), ಚಿಕ್ಕಬಳ್ಳಾಪುರದ ಅಂಜನಪ್ಪ (ರಾಜ್ಯ ಬೀಜ ನಿಗಮ), ಕಲಬುರಗಿಯ ನೀಲಕಂಠರಾವ್ ಎಸ್.ಮೂಲ (ಸಾಂಬಾರ ಅಭಿವೃದ್ಧಿ ಮಂಡಳಿ) ಶರಣಪ್ಪ ಸಲಾದ್‌ಪುರ್ (ಮದ್ಯಪಾನ ಸಂಯಮ ಮಂಡಳಿ) ಅವರನ್ನು ಅಧ್ಯಕ್ಷರಾಗಿ, ಕಲಬುರಗಿಯ ಅನಿಲ್‌ಕುಮಾರ್ ಜಾಮದಾರ್ ಅವರನ್ನು ಬೆಂಗಳೂರಿನ ಜವಾಹರ ಬಾಲಭವನ ಸೊಸೈಟಿ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ನೇಮಕದೊಂದಿಗೆ ಒಟ್ಟು 45 ಮಂದಿಗೆ ವಿವಿಧ ನಿಗಮ ಮತ್ತು ಮಂಡಳಿಗಳಿಗೆ ನೇಮಕ ಮಾಡಿದಂತಾಗಿದೆ.

ಥೈರಾಯ್ಡ್ ಸಮಸ್ಯೆ ಬೇಡ ನಿರ್ಲಕ್ಷ್ಯ



• ಡಾ. ಕುಶ್ವಂತ್ ಕೋಳಿಬೈಲು

ನಮ್ಮ ಕುತ್ತಿಗೆಯ ಮುಂಭಾಗದಲ್ಲಿರುವ ಚಿಟ್ಟೆಯ ಆಕಾರದ ಗ್ರಂಥಿಯನ್ನು ನಾವು ಥೈರಾಯ್ಡ್ ಎಂದು ಕರೆಯುತ್ತೇವೆ. ನಮ್ಮ ದೇಹದ ಕಾರ್ಯಚಟುವಟಿಕೆಗಳ ಮೇಲೆ ಹಲವಾರು ರೀತಿಯ ಪ್ರಭಾವವನ್ನು ಬೀರುವ ಹಾರ್ಮೋನುಗಳನ್ನು ಈ ಗ್ರಂಥಿಯು ಉತ್ಪಾದನೆ ಮಾಡುತ್ತದೆ. ಮುಖ್ಯವಾಗಿ ಈ ಗ್ರಂಥಿ ಹೊರಚೆಲ್ಲುವ 'ಥೈರಾಕ್ಸಿನ್' (T4) ಮತ್ತು 'ಟ್ರೈಯೋಡೋಥೈರೋನಿನ್' (T3) ಹಾರ್ಮೋನುಗಳನ್ನು ನಮ್ಮ ಆರೋಗ್ಯಕರ ಬೆಳವಣಿಗೆಗೆ ಅತ್ಯಗತ್ಯವಾಗಿದೆ. ನಮ್ಮ ದೇಹದ ಚಯಾಪಚಯ (metabolism) ಕ್ರಿಯೆಯ ವೇಗವನ್ನು ಈ ಹಾರ್ಮೋನುಗಳು ನಿಯಂತ್ರಿಸುವುದರಿಂದ ಈ ಹಾರ್ಮೋನುಗಳ ಸಂಖ್ಯೆ ಹೆಚ್ಚು ಕಡಿಮೆಯಾದಲ್ಲಿ ದೇಹದ ಚಯಾಪಚಯದಲ್ಲಿ ಹಲವಾರು ವ್ಯತ್ಯಾಸಗಳು ಆಗುತ್ತವೆ. ನಮ್ಮ ದೇಹದ ಉಷ್ಣತೆಯಿಂದ ಹಿಡಿದು ಹೃದಯಬಡಿತದ ವೇಗದಲ್ಲಿಯೂ ವ್ಯತ್ಯಾಸವಾಗಬಹುದು. ಬೆಳೆಯುವ ಮಕ್ಕಳಲ್ಲಿ ಮಿದುಳು ಮತ್ತು ದೇಹದ ಬೆಳವಣಿಗೆಗೆ ಈ ಹಾರ್ಮೋನ್‌ಗಳು ಅತ್ಯಗತ್ಯವಾಗಿದೆ.

ನವಜಾತ ಶಿಶುವಿನಲ್ಲಿ ಥೈರಾಯ್ಡ್ ಹಾರ್ಮೋನ್‌ಗಳ ಕೊರತೆಯಾದಲ್ಲಿ ಆ ಮಗುವಿಗೆ ಶಾಶ್ವತ ಬುದ್ಧಿಮಾಂದ್ಯತೆ ಉಂಟಾಗುವ ಅಪಾಯವಿರುತ್ತದೆ. ಈ ಕಾರಣದಿಂದಾಗಿ ಪ್ರತಿ ಗರ್ಭಿಣಿಯಲ್ಲಿ ಮತ್ತು ನವಜಾತ ಶಿಶುವಿನಲ್ಲಿ ಥೈರಾಯ್ಡ್ ಹಾರ್ಮೋನಿನ ಪರೀಕ್ಷೆ ನಡೆಸುವುದು ಕಡ್ಡಾಯವಾಗಿರುತ್ತದೆ. ತಡೆಗಟ್ಟಬಹುದಾದ ಬುದ್ಧಿಮಾಂದ್ಯತೆ ಕಾಯಿಲೆಗಳಲ್ಲಿ ಈ ಕಾಯಿಲೆಯೇ ಪ್ರಮುಖವಾದ ಕಾಯಿಲೆ. ಆದುದರಿಂದ ನವಜಾತಶಿಶುವು ಆಸ್ಪತ್ರೆಯಿಂದ ಮನೆಗೆ ತೆರಳುವ ಮುನ್ನ ಥೈರಾಯ್ಡ್ ಹಾರ್ಮೋನಿನ ಮಟ್ಟವನ್ನು ಪರೀಕ್ಷೆ ಮಾಡಲಾಗುತ್ತದೆ. ರಕ್ತದಲ್ಲಿನ ಕ್ಯಾಲ್ಸಿಯಂ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುವ 'ಕ್ಯಾಲ್ಸಿಟೋನಿನ್' ಹಾರ್ಮೋನ್ ಕೂಡ ಥೈರಾಯ್ಡ್ ಗ್ರಂಥಿಯಲ್ಲಿ ಉತ್ಪಾದನೆಯಾಗುತ್ತದೆ.

ದೇಹದಲ್ಲಿ ಥೈರಾಯ್ಡ್ ಹಾರ್ಮೋನ್ ಅಗತ್ಯ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿದ್ದರೆ, ಅಂತಹ ಸಮಸ್ಯೆಯನ್ನು ನಾವು 'ಹೈಪೊಥೈರಾಯ್ಡ್' ಎಂದು ಕರೆಯುತ್ತೇವೆ. ಆಹಾರದಲ್ಲಿ ಅಯೋಡಿನ್ ಕೊರತೆ, ಕೆಲವು ಆನುವಂಶೀಯ ಕಾಯಿಲೆಗಳು, ಸೋಂಕುಗಳು ಮತ್ತು ಕೆಟ್ಟ ಆಹಾರ ಪದ್ಧತಿ ಮತ್ತು ಜೀವನಶೈಲಿಗಳು ಥೈರಾಯ್ಡ್ ಗ್ರಂಥಿಯಲ್ಲಿನ ಹಾರ್ಮೋನಿನ ಉತ್ಪಾದನೆಯನ್ನು ಕಡಿಮೆ ಮಾಡಬಹುದು. ಥೈರಾಯ್ಡ್ ಹಾರ್ಮೋನ್ ಕಡಿಮೆಯಾದಲ್ಲಿ ದೇಹದ ತೂಕ ಹೆಚ್ಚಾಗುವುದು, ಹೆಚ್ಚಿನ ಚಳಿಯಾಗುವುದು, ಧ್ವನಿಯಲ್ಲಿ ಬದಲಾವಣೆ, ಮಲಬದ್ಧತೆ ಮತ್ತು ಆಲಸ್ಯ ಮುಂತಾದ ಗುಣಲಕ್ಷಣಗಳು ಕಾಣಿಸಿಕೊಳ್ಳಬಹುದು. ಹೆಂಗಸರಲ್ಲಿ ಮುಟ್ಟಿನ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಥೈರಾಯ್ಡ್ ಹಾರ್ಮೋನಿನ ಪ್ರಮಾಣವು ದೇಹದಲ್ಲಿ ಹೆಚ್ಚು ಉತ್ಪಾದನೆಯಾಗುವುದು ಕೂಡ ದೇಹಕ್ಕೆ ಮಾರಕವಾಗುತ್ತದೆ. ಥೈರಾಯ್ಡ್ ಗ್ರಂಥಿಯಲ್ಲಿ ಹುಟ್ಟಿಕೊಳ್ಳುವ ಚಿಕ್ಕಪುಟ್ಟ ಗೆಡ್ಡೆಗಳು ದೇಹಕ್ಕೆ ಅಗತ್ಯವಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಥೈರಾಯ್ಡ್ ಹಾರ್ಮೋನನ್ನು ಉತ್ಪಾದನೆ ಮಾಡುತ್ತದೆ. ಈ ಸಮಸ್ಯೆಯನ್ನು ನಾವು 'ಹೈಪರ್ ಥೈರಾಯ್ಡಿಸಮ್' ಎಂದು ಕರೆಯುತ್ತೇವೆ. ಈ ಕಾಯಿಲೆಯಿಂದ ಬಳಲುವವರಲ್ಲಿ ದೇಹದ ತೂಕ ಕಡಿಮೆಯಾಗುವುದು, ಹೃದಯ ಬಡಿತವು ಹೆಚ್ಚಾಗಿರುವುದು, ಮಾನಸಿಕ ಆತಂಕ ಮುಂತಾದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಥೈರಾಯ್ಡ್ ಗ್ರಂಥಿಯು ಊದಿಕೊಂಡಿದ್ದರೆ ಅದನ್ನು ನಾವು 'ಗಾಯ್ಟರ್' ಎಂದು ಕರೆಯುತ್ತೇವೆ. ಊದಿಕೊಂಡಿರುವ ಥೈರಾಯ್ಡ್ ಗ್ರಂಥಿಯಿಂದ ಹೊರಬರುವ ಹಾರ್ಮೋನಿನ ಪ್ರಮಾಣದ ಮೇಲೆ ಥೈರಾಯ್ಡ್ ಸಮಸ್ಯೆಯು ನಿರ್ಧಾರವಾಗುತ್ತದೆ.

ಥೈರಾಯ್ಡ್ ಸಮಸ್ಯೆಯು ನಮ್ಮ ದೇಹದ ಕೂದಲು ಮತ್ತು ಉಗುರಿನಿಂದ ಹಿಡಿದು ಹೃದಯ ಮತ್ತು ಮಿದುಳಿನ ತನಕ ಪ್ರಭಾವಿಸುವುದರಿಂದ ಈ ಕಾಯಿಲೆಯನ್ನು ಬೇಗ ಪತ್ತೆ ಹಚ್ಚಿ ಚಿಕಿತ್ಸೆಯನ್ನು ಪ್ರಾರಂಭಿಸಬೇಕು. ಕಾಯಿಲೆಯ ಗುಣಲಕ್ಷಣಗಳು ನಿಖರವಾಗಿ ಹೊರಹೊಮ್ಮದ ಕಾರಣದಿಂದಾಗಿ ವೈದ್ಯರಿಂದ ಈ ಕಾಯಿಲೆಯನ್ನು ಪತ್ತೆ ಹಚ್ಚುವಲ್ಲಿ ತಡವಾಗಬಹುದು. ಏಕೆಂದರೆ ಎಲ್ಲ ಸಮಯದಲ್ಲಿ ಥೈರಾಯ್ಡ್ ಗ್ರಂಥಿಯು ಊದಿಕೊಳ್ಳುವುದಿಲ್ಲ, ಬದಲಿಗೆ ಹಾರ್ಮೋನಿನ ಪ್ರಮಾಣದಲ್ಲಿ ಮಾತ್ರ ವ್ಯತ್ಯಾಸವಾಗಿರುತ್ತದೆ. ಗುಡ್ಡಗಾಡು ಪ್ರದೇಶದ ಜನರಲ್ಲಿ ಅಯೋಡಿನ್ ಕೊರತೆಯು ಹೆಚ್ಚಾಗಿರುವುದರಿಂದ ಅವರಲ್ಲಿ ಥೈರಾಯ್ಡ್ ಸಮಸ್ಯೆಗಳು ಹೆಚ್ಚಾಗಿ ಕಂಡು ಬರುತ್ತವೆ.

ಅಡುಗೆಯ ಉಪ್ಪಿನಲ್ಲಿ ಅಯೋಡಿನ್ ಸೇರಿಸುವ ಕ್ರಮದಿಂದಾಗಿ ಹೈಪೊಥೈರಾಯ್ಡ್ ಕಾಯಿಲೆಯ ಪ್ರಮಾಣವು ಕಡಿಮೆಯಾಗಿದೆ. ಆದರೂ ಭಾರತದಲ್ಲಿ ಸುಮಾರು ನಾಲ್ಕು ಕೋಟಿ ಜನರು ಥೈರಾಯ್ಡ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಥೈರಾಯ್ಡ್ ಹಾರ್ಮೋನಿನ ಪ್ರಮಾಣವು ಅಗತ್ಯಕ್ಕಿಂತ ಕಡಿಮೆಯಾಗಿದ್ದಲ್ಲಿ ರೋಗಿಯು ನಿತ್ಯ ಥೈರಾಯ್ಡ್ ಹಾರ್ಮೋನಿನ ಅಂಶವಿರುವ ಗುಳಿಗೆಯನ್ನು ಜೀವನಪರ್ಯಂತ ಸೇವಿಸಬೇಕಾಗುತ್ತದೆ.

ಇದರ ಜೊತೆಗೆ ತಾನು ತೆಗೆದುಕೊಳ್ಳುವ ಔಷಧದಿಂದಾಗಿ ದೇಹದೊಳಗಿರಬೇಕಾದ ಹಾರ್ಮೋನಿನ ಪ್ರಮಾಣವು ಸರಿಯಾಗಿದೆಯೆ ಎಂದು ನಿಯಮಿತವಾಗಿ ಪರೀಕ್ಷೆ ಮಾಡಿಕೊಳ್ಳಬೇಕಾಗುತ್ತದೆ. ಥೈರಾಯ್ಡ್ ಹಾರ್ಮೋನಿನ ಉತ್ಪಾದನೆಯು ದೇಹದೊಳಗೆ ಜಾಸ್ತಿಯಾದ ಕಾರಣದಿಂದಾಗಿ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿದ್ದರೆ ಥೈರಾಯ್ಡ್ ಗ್ರಂಥಿಯಿಂದ ಉತ್ಪಾದನಾ ಪ್ರಮಾಣವನ್ನು ಕಡಿಮೆ ಮಾಡಲು ಹಲವು ವಿಧಗಳಿವೆ. ಔಷಧಗಳ ಮೂಲಕ ಅಥವಾ ಶಸ್ತ್ರಚಿಕಿತ್ಸೆಯ ಮೂಲಕ ಈ ಸಮಸ್ಯೆಯನ್ನು ಸರಿಪಡಿಸಲಾಗುತ್ತದೆ. ಮುಂದುವರಿದಿರುವ ವೈದ್ಯಕೀಯ ತಂತ್ರಜ್ಞಾನವು ಥೈರಾಯ್ಡ್ ಕಾಯಿಲೆಯ ಪತ್ತೆ ಹಚ್ಚುವಿಕೆ ಮತ್ತು ಚಿಕಿತ್ಸೆಯನ್ನು ಹೆಚ್ಚು ಸುಲಭವಾಗಿಸಿದೆ. ❖



ಗೋಸ್ಟಿಂಗ್ ನಿರಾಕರಣೆಯ ಕಥೆ–ವ್ಯಥೆ



• ಡಾ. ಕೆ.ಎಸ್. ಪವಿತ್ರ

'ನನ್ನ ಜೊತೆ ಅಷ್ಟು ಸ್ನೇಹದಿಂದ ಇದ್ದ ಗೆಳತಿ ಇದ್ದಕ್ಕಿದ್ದಂತೆ ಮಾತನಾಡೋದನ್ನ ನಿಲ್ಲಿಸಿಬಿಟ್ಟು; ಕಾರಣವೇ ಗೊತ್ತಿಲ್ಲ. ಫೇಸ್‌ಬುಕ್-ಇನ್‌ಸ್ಟಾ–ವಾಟ್ಸ್‌ಆ್ಯಪ್ ಎಲ್ಲದರಲ್ಲೂ ನಾನು 'ಅನ್‌ಫ್ರೆಂಡ್'! ಮೊದ ಮೊದಲು ಏನೋ ಕಷ್ಟ-ದುಃಖದಲ್ಲಿರಬಹುದು ಎಂದು ನಾನೇ ಸಂಪರ್ಕಿಸಲು ಪ್ರಯತ್ನಿಸಿದೆ. ನೋಡಿದ್ರೆ ನನ್ನ ಬಿಟ್ಟು ಬೇರೆ ಎಲ್ಲರ ಹತ್ತಿರವೂ ಫ್ರೆಂಡ್‌ಶಿಪ್ ಮುಂದುವರೆದಿದೆ! ನಾನೂ ಪ್ರಯತ್ನ ಬಿಟ್ಟೆ. ಆದರೂ ಮನಸ್ಸಿಗೆ ಏನೋ ಒಂಥರಾ ಬೇಸರ. ಯಾವ ಕಾರಣವನ್ನೂ ನೀಡದೆ ನನ್ನ ಹತ್ತಿರ ಈ ರೀತಿ ಸಂಪರ್ಕ ಕಡಿದುಕೊಳ್ಳುವ ಬದಲು, ಜಗಳ ಮಾಡಿದ್ರೂ ಪರವಾಗಿರಲಿಲ್ಲ'.

ಇಂತಹ ಸಂದರ್ಭ ನಿಮಗೂ ಎದುರಾಗಿದೆಯೇ?

ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವುದು, ಸ್ನೇಹಿತರನ್ನು ಹುಡುಕಿಕೊಳ್ಳುವುದು, ವಿವಿಧ ದಾರಿಗಳ ಮೂಲಕ ಆ ಸ್ನೇಹವನ್ನು ಕಾಪಾಡಿಕೊಳ್ಳುವುದು ನಮ್ಮ ಜೀವನಕ್ಕೆ, ಆರೋಗ್ಯಕ್ಕೆ ಅಗತ್ಯವೂ ಹೌದು. ಅಂತಹ ಸಂಬಂಧಗಳಲ್ಲಿ ಸ್ನೇಹಿತರೊಬ್ಬರು ನಮ್ಮ ಸ್ನೇಹವನ್ನು ಇದ್ದಕ್ಕಿ-ದ್ದಂತೆ ನಿರಾಕರಿಸಿದಾಗ, ಇಂತಹ ನಡವಳಿಕೆ ಏಕೆ ಎಂಬುದೇ ಅರ್ಥವಾಗದೆ ಕಣ್ಣು ಕಣ್ಣು ಬಿಡುವ ಸ್ಥಿತಿಯಲ್ಲಿ ನಾವಿರುವಂತೆ ಆಗುವಾಗ ಅದನ್ನು ಹೇಗೆ ಎದುರಿಸಬೇಕು ಎಂಬುದೇ ಒಂದು ಸವಾಲಾಗುತ್ತದೆ. ಮನೋವೈಜ್ಞಾನಿಕವಾಗಿ ಹೀಗೆ ಸ್ನೇಹ ಮಾಯವಾಗುವುದನ್ನು 'ಗೋಸ್ಟಿಂಗ್'–'Ghosting' ಎಂದು ಕರೆಯಲಾಗುತ್ತದೆ.

ಹಿಂದೆಂದಿಗಿಂತ ಇಂದು ಸಾಮಾಜಿಕ ಮಾಧ್ಯಮಗಳ ಮೂಲಕ ಸಂಪರ್ಕ ಸುಲಭ ಸಾಧ್ಯವಾಗಿ-ರುವಾಗ, ಇದ್ದಕ್ಕಿದ್ದಂತೆ ಅದೃಶ್ಯವಾಗುವುದೂ, 'ಬ್ಲಾಕ್' ಮಾಡುವುದೂ, 'ಅನ್‌ಫ್ರೆಂಡ್' 'ಅನ್‌ಫಾಲೋ' ಮಾಡುವುದೂ ಅಷ್ಟೇ ವೇಗವಾಗಿ ಸಾಧ್ಯವಾಗುವ ಕ್ರಿಯೆ. ಇಂತಹ ನಿರಾಕರಣೆಯಿಂದ ನಮಗೇಕೆ ಅಷ್ಟು ನೋವು? ಒಬ್ಬರಿಗೆ ನಮ್ಮ ಸ್ನೇಹ ಬೇಡವೆಂದರೆ ನಾವೂ ಅದು 'ಬೇಡ'ವೆಂದು ಬಿಟ್ಟರಾಯಿತು; ನಮ್ಮ ಸ್ನೇಹ ಬಯಸುವ ಇತರರೊಡನೆ ಸ್ನೇಹ ಬೆಳೆಸಿದರಾಯಿತು ತಾನೆ?! ಮನಸ್ಸಿನ ಕಥೆ ಅಷ್ಟು ಸರಳವಾಗಿದ್ದರೆ ಈ ಜಗತ್ತಿನಲ್ಲಿ ಎಷ್ಟೆಲ್ಲಾ ಸಮಸ್ಯೆಗಳೇ ಇರುತ್ತಿರಲಿಲ್ಲ! ನಮಗೆ ಸಂಬಂಧದಲ್ಲಿ ಸಮಸ್ಯೆಯೇ ಇದ್ದರೂ ಸರಿ, ಅದು ನಮಗೆ ಗೊತ್ತಿರಬೇಕು; ಜಗಳವಾಗಿಯೇ ಆದರೂ ಪರವಾಗಿಲ್ಲ ನಮಗೆ ಸಂಬಂಧಕ್ಕೆ 'ಮುಕ್ತಾಯ' ಎನ್ನುವುದು ಬೇಕು! ಹಠಾತ್ ನಿರಾಕರಣೆಯ 'ಗೋಸ್ಟಿಂಗ್' ಉಂಟಾದಾಗ ಮನಸ್ಸು ಚಡಪಡಿಸುತ್ತದೆ.

'ಗೋಸ್ಟಿಂಗ್' ಸಂಬಂಧದಲ್ಲಿ ಎದುರಾದಾಗ ಎರಡು ಮುಖ್ಯ ಪ್ರಶ್ನೆಗಳನ್ನು ಚರ್ಚಿಸುವುದು ಅವಶ್ಯಕ. ಮೊದಲನೆಯದು ಗೋಸ್ಟಿಂಗ್ ಹಿಂದಿನ ಕಾರಣಗಳು ಏನಿರಬಹುದು ಎನ್ನುವುದು; ಎರಡನೆಯದು 'ಗೋಸ್ಟಿಂಗ್' ಎದುರಿಸುತ್ತಿರುವ ವ್ಯಕ್ತಿ ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದು. ಈ ಎರಡೂ ಪ್ರಶ್ನೆಗಳಿಗೆ ಉತ್ತರ ನೀಡಲು ಮನೋವಿಜ್ಞಾನಿಗಳು ಸಾಕಷ್ಟು ಅಧ್ಯಯನಗಳನ್ನು ಈಗಾಗಲೇ ಮಾಡಿದ್ದಾರೆ. ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ 2024ರಲ್ಲಿ ಹೊರಬಂದ ಒಂದು ಅಧ್ಯಯನ ಸರಣಿ ಕೆಲವು ಕುತೂಹಲಕಾರಿ ಅಂಶಗಳನ್ನೂ ಹೊರಹಾಕಿದೆ.

ಪ್ರೇಮಿಗಳು, ಸ್ನೇಹಿತರ ನಡುವೆ ಮಾತ್ರ ಇಂತಹ ಗೋಸ್ಟಿಂಗ್ ನಡೆಯುವುದಲ್ಲ; ವೃತ್ತಿಪರ ಸಂಬಂಧಗಳಲ್ಲಿಯೂ ಇದು ಸಾಧ್ಯ. ಅಂದರೆ ಒಂದು ವ್ಯಾಪಾರದ 'ಡೀಲ್' ಇನ್ನೇನು ಕುದುರುತ್ತದೆ, ಒಟ್ಟಿಗೆ



ಊಟ ಮಾಡಿದ್ದೇವೆ, ಚೆನ್ನಾಗಿ ಮಾತಾಡಿದ್ದೇವೆ, ನೂರಕ್ಕೆ ನೂರು ವ್ಯವಹಾರ ಕುದುರುವುದು ಖಂಡಿತ ಎಂದುಕೊಂಡಿದ್ದಾರೆ ಎನ್ನಿ. 'ನಾಳೆ ಫೋನ್ ಮಾಡುತ್ತೇನೆ' ಎಂದ ಮನುಷ್ಯ ಇದ್ದಕ್ಕಿದ್ದಂತೆ ಮೌನವಾಗಿ ಬಿಟ್ಟಿರುತ್ತಾರೆ! ಅಥವಾ ಉದ್ಯೋಗ ಸ್ಥಳದಲ್ಲಿ ಕೆಲಸ ಮಾಡುವ ಒಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಯಾವ ಕಾರಣವನ್ನೂ ನೀಡದೆ 'ನಾಳೆ ಬರುತ್ತೇನೆ' ಎಂದವರು, ಹಾಗೆ ಬಾರದಿರಬಹುದು.

ಅಪ್ರಿಯವಾದ ಸತ್ಯವನ್ನು ಹೇಳುವುದು, ಕಲಹವನ್ನು - ಹೇಳಿಸಿಕೊಂಡವರ ನೋವನ್ನು ಎದುರಿಸುವುದು ಅಸಹನೀಯ ಎನಿಸಿದಾಗ 'ಗೋಸ್ಟಿಂಗ್' ಅನ್ನು ಒಂದು ತಂತ್ರವಾಗಿ ಬಳಸುತ್ತಾರೆ. ಒಂದೊಮ್ಮೆ ಮತ್ತೆ ಮಾತನಾಡಲು ಆರಂಭಿಸಿದರೂ ಹಠಾತ್ ನಿರಾಕರಣೆಯನ್ನು ತಾವು ಮಾಡಿದ್ದು ಏಕೆ ಎಂಬ ಬಗ್ಗೆ ಅವರು ನಿಜ ಹೇಳಿ, ಎದುರಿನವರ ಮನಸ್ಸಿನ ಚಡಪಡಿಕೆಯನ್ನು ಶಾಂತವಾಗಿಸುವ ಸಾಧ್ಯತೆ ಕಡಿಮೆಯೇ. ಕ್ಷಮೆ ಇಲ್ಲವೇ ತೇಲಿಸಿ 'ಅದನ್ನೆಲ್ಲಾ ಬಿಡು, ಏನೋ ಆಗಿ ಹೋಯ್ತು! ಅದೆಲ್ಲಾ ಈಗೇಕೆ?' ಎಂದು ತಳ್ಳಿ ಹಾಕುವ, ನಿರೀಕ್ಷೆ ಮಾಡಿದ ನಿಜ ದೊರೆಯದಿರುವ ಸಂಭವವೇ ಹೆಚ್ಚು. ಅದು ವಾಸ್ತವದಲ್ಲಿ ಅವರಿಗಿರುವ ಸಂಬಂಧದ ಬಗೆಗಿನ ದ್ವಂದ್ವ ಮನೋಭಾವವನ್ನೇ ತೋರಿಸುತ್ತದೆ. ನಾವೇ ಈ ರೀತಿ ಸಂಬಂಧಗಳಲ್ಲಿ 'ಗೋಸ್ಟರ್' ಆಗಬಹುದಾದಂತಹ ಸಾಧ್ಯತೆಯೂ ಇರಬಹುದು ಎಂಬುದನ್ನೂ ಗಮನಿಸಬೇಕು! ಸನ್ನಿವೇಶ ಭಾವನಾತ್ಮಕವಾಗಿ ಕಷ್ಟದ್ದು ಎಂಬ ಕಾರಣಕ್ಕೆ ಪಲಾಯನವಾದಕ್ಕೆ ಕಟ್ಟು ಬೀಳುವ ಬದಲು, ಇನ್ನೊಬ್ಬರಿಗೆ ನೇರವಾಗಿ 'ಇದು ನನಗೆ ಇಷ್ಟವಿಲ್ಲ' ಎಂದು ಮೃದುವಾಗಿ ಆದರೆ ದೃಢವಾಗಿ ಹೇಳುವ ಕೌಶಲವನ್ನು ಬೆಳೆಸಿಕೊಳ್ಳಬೇಕು. ಎಷ್ಟೇ ಮೃದುವಾಗಿ ಹೇಳಿದ್ದಾಗ್ಯೂ ಸಂಬಂಧದಲ್ಲಿ ಬಿರುಕು-ನೋವುಗಳು ಇರಬಹುದು; ಆದರೆ ಅಲ್ಲಿ 'ಮುಕ್ತಾಯ' ವಿದೆ; ಕ್ರಮೇಣ ಮನಸ್ಸು ಹೊಂದಿಕೊಳ್ಳುತ್ತದೆ ಎಂಬ ವೈಜ್ಞಾನಿಕ ಅಂಶಗಳು ಇಲ್ಲಿ ಮುಖ್ಯವಾಗಿ ನಿಲ್ಲುತ್ತವೆ.

ನಿರಾಕರಣೆಗೆ ಒಳಗಾದ ವ್ಯಕ್ತಿ ಏನು ಮಾಡಬೇಕು? ಸ್ನೇಹ ಬೇಡ ಎನ್ನುವ ವ್ಯಕ್ತಿಯನ್ನು ಮತ್ತೆ ಮತ್ತೆ ಸಂಪರ್ಕಿಸಿ, ಮನವೊಲಿಸುವ ಪ್ರಯತ್ನ ಮಾಡಬೇಕೆ? ಮನಸ್ಸು ಸಂಬಂಧದ ಬಗ್ಗೆ ಮೆಲುಕು ಹಾಕುವುದು, ಮತ್ತೆ ಮತ್ತೆ ಕಾರಣ ಊಹಿಸುವುದು, ಒಂದು ಬಾರಿ ಬಂದು ಮಾತಾಡಿ ಎಲ್ಲವನ್ನೂ 'ಕ್ಲಿಯರ್' ಮಾಡಿಬಿಟ್ಟರೆ ಸಾಕು ಎಂದು ಯೋಚಿಸುವುದು ಇವು ಸಾಮಾನ್ಯವಾಗಿ ನಡೆಯುವ ಮಾನಸಿಕ ಪ್ರಕ್ರಿಯೆಗಳು. ಹಿಂದೆ ಇವುಗಳಿಂದ ಬೇಗ ಹೊರಬರಲು, ಈ ಮೊದಲು ನಡೆದ ಘಟನೆಗಳನ್ನು ಮಾತ್ರ, ಆ ವ್ಯಕ್ತಿಯೊಡನೆ ಕಳೆದ ಕ್ಷಣಗಳನ್ನು ಮಾತ್ರ ಮರೆತರೆ ಸಾಕಾಗಿತ್ತು, ಸುಲಭವಾಗಿತ್ತು. ಈಗ ಹಾಗಲ್ಲ. ನಮ್ಮ ಎಫ್‌ಬಿ, ಇನ್‌ಸ್ಟಾ-ಮೊಬೈಲ್ 'ಮೆಮೊರಿ'ಗಳನ್ನೂ ನಾವು ನಿಭಾಯಿಸಬೇಕು! ಇವುಗಳಿಂದ 'ಗೋಸ್ಟಿಂಗ್' ಎಂಬ ಸಮಸ್ಯೆ ಮತ್ತಷ್ಟು ನಮ್ಮನ್ನು ಹಿಂಬಾಲಿಸಲು ಸಾಧ್ಯವಿದೆ.

ಇಂತಹ ಸಂದರ್ಭದಲ್ಲಿ ಮನಸ್ಸನ್ನು ಮಗುವಿನಂತೆ ಸಮಾಧಾನಿಸಬೇಕು; ನಿಮಗೇ ನೀವು ಮಾಡಿದ ಯಾವುದೋ ತಪ್ಪು ಹೀಗಾಗಲು ಕಾರಣವಾಗಿರ-ಬಹುದು ಎಂಬ ಸಂದೇಹವಿದ್ದರೆ ಅದನ್ನು ಬರೆದು ನಿಮ್ಮ ಮೌನವಾದ ಸ್ನೇಹಿತ/ಸ್ನೇಹಿತೆಗೆ ತಿಳಿಸಬಹುದು. ಅಥವಾ ನಿಮ್ಮಿಂದ ಯಾವ ತಪ್ಪೂ ಆಗಿಲ್ಲ ಅನ್ನಿಸಿದರೆ 'ನಿನಗೆ ಯಾವ ಕಾರಣದಿಂದಲಾದರೂ ಬೇಸರವೆನಿಸಿದ್ದರೆ, ಅದಕ್ಕೆ ನನ್ನ ಸಹಾನುಭೂತಿಯಿದೆ; ನಿನ್ನ ಸ್ನೇಹ ನನಗಂತೂ ಬೇಕು, ನಿನಗೂ ಬೇಕೆಂದರೆ ಸಂಪರ್ಕಿಸು' ಎಂಬ ಸಂದೇಶ ಕಳಿಸಬಹುದು. ಹೀಗೆ ಕಳಿಸುವುದು ನಿಮ್ಮ ಮನಸ್ಸಿಗೆ ನಿಮ್ಮ ಕಡೆಯಿಂದ 'ಮುಕ್ತಾಯ'ದ ಸಮಾಧಾನವನ್ನಂತೂ ನೀಡುತ್ತದೆ. ಊಹೆಯ ಸರಣಿಯನ್ನು ನಿಲ್ಲಿಸಿ, ಮನಸ್ಸು ಇತರ ವಿಷಯಗಳಲ್ಲಿ ತೊಡಗಿಕೊಳ್ಳುವುದು ಸುಲಭವಾಗುತ್ತದೆ. ಇವುಗಳನ್ನು ಮೀರಿ ಇತರರ ಬಳಿ ಚರ್ಚಿಸುವುದು, ಮತ್ತೆ ಮತ್ತೆ ಸಂಪರ್ಕಿಸುವುದು ಖಂಡಿತ ಸಲ್ಲದು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ವರ್ಗ ಸಮೀಕರಣ

ಅಭ್ಯಾಸ 4..3

1) ಕೆಳಗಿನ ವರ್ಗ ಸಮೀಕರಣಗಳ ಮೂಲಗಳ ಸ್ವಭಾವವನ್ನು ವಿವೇಚಿಸಿ. ಅವು ವಾಸ್ತವ ಮೂಲಗಳಾಗಿದ್ದರೆ, ಅವುಗಳನ್ನು ಕಂಡುಹಿಡಿಯಿರಿ. (...ಹಿಂದಿನ ಸಂಚಿಕೆಯಿಂದ)

(ii) $3x^2 - 4\sqrt{3}x + 4 = 0$

ಇಲ್ಲಿ $a = 3$, $b = -4\sqrt{3}x$, $c = 4$

$b^2 - 4ac$

$= \left(-4\sqrt{3}x\right)^2 - 4(3)(4)$

$= 48 - 48 = 0$

ಹೀಗಾಗಿ ಕೊಟ್ಟಿರುವ ವರ್ಗ ಸಮೀಕರಣಕ್ಕೆ ಎರಡು ವಾಸ್ತವ ಮೂಲಗಳಿವೆ $= \frac{b}{2a}, -\frac{b}{2a}$

$= \frac{\left(-4\sqrt{3}x\right)}{2 \times 3} - \frac{\left(-4\sqrt{3}x\right)}{2 \times 3}$ ie $\frac{2}{\sqrt{3}}, \frac{2}{\sqrt{3}}$

(iii) $2x^2 - 6x + 3 = 0$

ಇಲ್ಲಿ $a = 2$, $b = -6$, $c = 3$

$b^2 - 4ac$

$= (-6)^2 - 4(2)(3)$

$= 36 - 24 = 12$

ಹೀಗಾಗಿ ಕೊಟ್ಟಿರುವ ವರ್ಗ ಸಮೀಕರಣಕ್ಕೆ ಎರಡು ವಾಸ್ತವ ಮೂಲಗಳಿವೆ ವರ್ಗಸಮೀಕರಣ $2x^2 - 6x + 3 = 0$ ವನ್ನು ಸೂತ್ರದ ಸಹಾಯದಿಂದ

$$x = \frac{-b \pm \sqrt{b^2 - 4ac}}{2a}$$

$$= \frac{-6 \pm \sqrt{12}}{2(2)}$$

$$= \frac{-6 \pm 2\sqrt{3}}{2}$$

$$= \frac{-3 \pm \sqrt{3}}{2}$$

ವಾಸ್ತವ ಮೂಲಗಳು $\frac{-3 \pm \sqrt{3}}{2}$ ie $\frac{-3+\sqrt{3}}{2}$ ಮತ್ತು $\frac{-3-\sqrt{3}}{2}$

2) ಕೆಳಗಿನ ಪ್ರತಿಯೊಂದು ವರ್ಗ ಸಮೀಕರಣವು ಸಮನಾದ ಎರಡು ಮೂಲಗಳನ್ನು ಹೊಂದಿದ್ದರೆ **k** ಯ ಬೆಲೆಯನ್ನು ಕಂಡುಹಿಡಿಯಿರಿ.

(i) $2x^2 + kx + 3 = 0$

(ii) $kx(x - 2) + 6 = 0$

ಪರಿಹಾರ:– **(i) $2x^2 + kx + 3 = 0$**

ಇಲ್ಲಿ $a = 2$, $b = k$, $c = 3$

$= b^2 - 4ac$

$= k^2 - 4(2)(3)$

$= k^2 - 24$

ಕೊಟ್ಟಿರುವ ವರ್ಗ ಸಮೀಕರಣವು ಎರಡು ವಾಸ್ತವ ಮೂಲಗಳನ್ನು ಹೊಂದಿದ್ದರೆ

$b^2 - 4ac$

$\Rightarrow k^2 - 24 = 0$

$\Rightarrow k = 24$

$\Rightarrow k = \pm\sqrt{24}$

$\Rightarrow k = \pm 2\sqrt{6}$

ಹೀಗಾಗಿ k ನ ಬೆಲೆ $= \pm 2\sqrt{6}$ ie $2\sqrt{6}$ ಮತ್ತು $-2\sqrt{6}$

(ii) $kx(x - 2) + 6 = 0$

ಇಲ್ಲಿ $a = k$, $b = -2k$, $c = 6$

$= b^2 - 4ac$

$= -(2k)^2 - 4(k)(6)$

$= 4k^2 - 24k$

ಕೊಟ್ಟಿರುವ ವರ್ಗ ಸಮೀಕರಣವು ಎರಡು ವಾಸ್ತವ ಮೂಲಗಳನ್ನು ಹೊಂದಿದ್ದರೆ

$b^2 - 4ac$

$\Rightarrow 4k^2 - 24k = 0$

$\Rightarrow 4k(k - 6) = 0$

$\Rightarrow k(k - 6) = 0$

$\Rightarrow k = 0, 6$

k ನ ಬೆಲೆ ಶೂನ್ಯವಾಗಿರಲು ಸಾಧ್ಯವಿಲ್ಲ

ಹೀಗಾಗಿ $\therefore k = 6$

3) $800m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯವೇ? ಹೌದು ಎಂದಾದರೆ, ಅದರ ಉದ್ದ ಮತ್ತು ಅಗಲಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ಆಯತಾಕಾರದ ಮಾವಿನ ತೋಪ ಅಗಲ x m ಆಗಿರಲಿ

ಒಂದು ಆಯತಾಕಾರದ ಮಾವಿನ ತೋಪ ಉದ್ದ $2x$ m ಆಗಿರಲಿ ಆದ್ದರಿಂದ ಒಂದು ಆಯತಾಕಾರದ ಮಾವಿನ ತೋಪಿನ ವಿಸ್ತೀರ್ಣ=

= ಉದ್ದ x ಅಗಲ

$= 2x \times x$ m

ಸಮಸ್ಯೆಯ ಪ್ರಕಾರ

$2x^2 = 800$

$x^2 = 800/2 = 400$

$x = \pm\sqrt{400}$

$x = \pm 20$

$x = +20$, $x = -20$,

x ನ ಬೆಲೆ ನಕಾರಾತ್ಮಕವಾಗಿರಲು ಸಾಧ್ಯವಿಲ್ಲ ಹಿಗಾಗಿ $x = 20$

$2x = 2(20) = 40$

$800m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯ

ಅದರ ಉದ್ದ = 20 m ಮತ್ತು ಅಗಲ = 40 m

4) ಕೆಳಗೆ ಸೂಚಿಸಿರುವಂತಹ ಸನ್ನಿವೇಶವಿರಲು ಸಾಧ್ಯವೇ? ಹಾಗಿದ್ದರೆ ಅವರ ಈಗಿನ ವಯಸ್ಸುಗಳನ್ನು ನಿರ್ಧರಿಸಿ. ಇಬ್ಬರು ಸ್ನೇಹಿತರ ವಯಸ್ಸುಗಳ ಮೊತ್ತವು 20 ವರ್ಷಗಳಾಗಿವೆ. ನಾಲ್ಕು ವರ್ಷಗಳ ಹಿಂದೆ, ಅವರ ವಯಸ್ಸುಗಳ ಗುಣಲಬ್ಧವು 48 ವರ್ಷಗಳಾಗಿತ್ತು.

ಪರಿಹಾರ:– ಮೊದಲ ಸ್ನೇಹಿತನ ವಯಸ್ಸು x ಆಗಿರಲಿ

ದ್ವಿತೀಯ ಸ್ನೇಹಿತನ ವಯಸ್ಸು $(20-x)$ ಆಗಿರಲಿ (ಇಬ್ಬರು ಸ್ನೇಹಿತರ ವಯಸ್ಸುಗಳ ಮೊತ್ತವು 20 ವರ್ಷಗಳಾಗಿವೆ)

ನಾಲ್ಕು ವರ್ಷಗಳ ಹಿಂದೆ,

ಮೊದಲ ಸ್ನೇಹಿತನ ವಯಸ್ಸು= $(x - 4)$

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

Chapter – 2

ELECTROSTATIC POTENTIAL AND CAPACITANCE

27. Write a note on the Electric Polarization

Ans:- **(.......Contd)**

$$E_o = \frac{\sigma}{\epsilon_o} \quad ...(1)$$

When a non-polar dielectric slab is introduced between the plates shown in the figure. Each atom will be elongated due to the displacement of its charges under the effect of applied electric field and hence becomes a polar atom.

Now, each atom/molecule of the dielectric having dipole moment experiences a torque in the direction of the field $\left(\vec{E_o}\right)$ and all the dipoles get aligned in the direction of the applied electric field.

The interior charges shown in the dotted rectangle cancel the effect of one another. Therefore, the net effect is that the opposite faces of the dielectric will have equal and opposite charges. These charges are called **induced charges** and the process is called ***polarization of the dielectric.*** Induced charges are bound charges and not free.

Induced charges set up an electric field known as **induced electric field,** $\vec{E_p}$.

If σ_p and $-\sigma_p$ be the surface charge densities of the opposite faces of the dielectric, then the magnitude of electric field due to polarization is given by – $E_p = \frac{\sigma_p}{\epsilon_o}$

directed opposite to that of applied electric field $\vec{E_0}$.

$\therefore$ net electric field inside the dielectric is -

$$E = E_o - E_p \text{ (or) } E = \frac{\sigma}{\epsilon_o} - \frac{\sigma_p}{\epsilon_o} \text{ (or)}$$

$$E = \frac{\sigma - \sigma_p}{\epsilon_o} ....(2)$$

Thus, on placing a dielectric slab between 2 parallel plates, the electric field intensity inside parallel plates gets reduced. Therefore, the net electric field (E) inside the dielectric is known as reduced value of electric field.

28. Write a note on dielectric constant.

Ans:- The ratio of applied electric field intensity (E_0) to the reduced value of electric field intensity (E) on placing a dielectric between two oppositely charged the plates is called dielectric constant. It is given by -

$$K = \frac{E_0}{E} = \frac{\sigma}{\sigma - \sigma_p}$$

Since, $E_0 > E$, $\therefore$ K is always more than 1.

Dielectric constant is a pure number. It is also known as ***specific Inductive Capacity i.e. SIC*** of a medium.

29. Give the relation between Surface Charge Density (σ) and Induced Surface charge Density (σ_p).

Ans:- Relation between Surface Charge Density(σ) & Induced Surface charge Density (σ_p)

[1] The reduced value of electric field in the gap between two oppositely charged plates, when filled with a dielectric of dielectric constant K is given by

$$E = E_o - E_p \quad ....(i)$$

Now, $E_o = \frac{\sigma}{\epsilon_0}$, $E_p = \frac{\sigma_p}{\epsilon_0}$ and $E = \frac{E_o}{K} = \frac{\sigma}{\epsilon_0 K}$

$\therefore$ eqn.(i) becomes $\frac{\sigma}{\epsilon_0 K} = \frac{\sigma}{\epsilon_0} - \frac{\sigma_p}{\epsilon_0}$

(or) $\sigma_p = \left(\sigma - \frac{\sigma}{K}\right) = \left(\frac{K-1}{K}\right)\sigma$

Since $K > 1$, $\therefore \sigma_p < \sigma$

Thus, induced surface charge density on the dielectric is less than the surface charge density.

[2] If the gap between two oppositely charged plates is filled with a conductor instead of a dielectric, then E = O.

Hence eqn. (i) becomes

$E_p = E_o$ (or) $\frac{\sigma_p}{\epsilon_0} = \frac{\sigma}{\epsilon_0}$

(or) $\sigma_p = \sigma$

Thus, induced surface charge density on a conductor is equal to the surface charge density.

30. What is Dielectric constant also referred to as?

Ans:- Dielectric constant is also referred to as relative permittivity of a dielectric.

31. What is Polarization Vector? Explain.

Ans:- Polarization Vector is defined as the dipole moment per unit volume of the polarized dielectric. The polarization vector measures the degree of polarization of the dielectric.

Consider a homogeneous (i.e., of same kind or nature) dielectric slab placed in the uniform electric field $\vec{E_o}$. Due to polarization, all the atoms or molecules get aligned in the direction of the applied field. Since dielectric is homogeneous, so each atom or molecule have the same dipole moment $\vec{P}$. If n is the number of atoms or molecules per unit volume of the dielectric,

then the polarization vector ($\vec{P}$) is given by

$$\vec{P} = n\vec{p}$$

$$\Rightarrow P = np$$

SI unit of polarization vector is


$$\frac{\text{Coulomb}}{\text{meter}^2} = \left(Cm^{-2}\right)$$

Dimensional formula of polarization vector,

$$P = \frac{p}{V} = \frac{Cm}{m^3} = \frac{C}{m^2} = \frac{It}{m^2} = [M^0L^{-2}TA]$$

(Contd....)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,654
ಇಂದಿನ ಅಂತ್ಯ: 24,634
ದಿನದ ಕುಸಿತ: 19

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹560, 12 ಕ್ಕೆ ₹75
ಮೈಸೂರು: 100 ಕ್ಕೆ ₹570

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹333-628
ದ್ವಿತಳಿ (ಬಿ.ವಿ) ₹383-772

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹185
ಆರ್‌ಎಸ್‌ಎಸ್-5 ₹180
ಗುಡ್ ಲಾಟ್ ₹165

ಮುಂಬೈ ಖಾದ್ಯ ತೈಲ
ಶೇಂಗಾ (ಸಂಸ್ಕರಿತ) ₹1315 (1330)
ಸೋಯಾ (ಸಂಸ್ಕರಿತ) ₹1270 (1275)
ಸೂರ್ಯಕಾಂತಿ (ಸಂಸ್ಕರಿತ) ₹1415 (1425)
ಪಾಮೋಲಿನ್ ₹1270 (1280)

ಕೊಬ್ಬರಿ ಧಾರಣೆ
ಬೆಂಗಳೂರು ₹28000-30000
ತಿಪಟೂರು ₹26000-28000
ತುರುವೇಕೆರೆ ₹26000-27500

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	38969-45099	ಬೆಟ್ಟೆ	51899-67399	ಬೆಟ್ಟೆ	38323-44989
ಚಿಪ್ಪು	27029-34020	ಗೊರಬಲು	21321-41600	ಬಿಳಿಗೋಟು	27009-37899
ಕೋಕ	9589-33599	ಹೊಸತು	57836-62099	ಚಾಲಿ	41208-45409
ಫ್ಯಾಕ್ಟರಿ	7869-27529	ರಾಶಿ	48619-64139	ಕೆಂಪುಗೋಟು	23118-29709
ಹಳೆಚಾಲಿ	40999-44899	ಸರಕು	71629-91340	ರಾಶಿ	46619-54069
ಪುತ್ತೂರು		**ಸಿದ್ದಾಪುರ**		**ಯಲ್ಲಾಪುರ**	
ಕೋಕ	20000-28000	ಬಿಳಿಗೋಟು	26809-33089	ಬಿಳಿಗೋಟು	29295-29295
ಹೊಸತು	26000-49000	ಚಾಲಿ	38899-44699	ಚಾಲಿ	36000-44799
ಸಾಗರ		ಕೋಕ	20899-30499	ಕೋಕ	18000-18000
ಬಿಳಿಗೋಟು	23099-23099	ಕೆಂಪುಗೋಟು	28900-28900	ಕೆಂಪುಗೋಟು	21519-21519
ಕೆಂಪುಗೋಟು	30989-30989	ರಾಶಿ	48319-55299	ರಾಶಿ	45000-57399
ರಾಶಿ	55829-61729	ತಟ್ಟಿಬೆಟ್ಟೆ	37099-49099	ತಟ್ಟಿಬೆಟ್ಟೆ	37209-43000
ಸಿಪ್ಪೆಗೋಟು	18099-18099				

₹1.5 ಲಕ್ಷ ತಲುಪಿದ ಬೆಳ್ಳಿ ಬೆಲೆ

ಹಳದಿ ಲೋಹ ಚಿನ್ನದ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ

ನವದೆಹಲಿ (ಪಿಟಿಐ): ಬೆಳ್ಳಿಯ ಬೆಲೆಯು ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಕೆ.ಜಿ.ಗೆ ₹7,000ದಷ್ಟು ಏರಿಕೆ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹1.50 ಲಕ್ಷಕ್ಕೆ ತಲುಪಿದೆ.

ಇದೇ ವೇಳೆ ಚಿನ್ನದ ಬೆಲೆ ಕೂಡ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದು, 10 ಗ್ರಾಂಗೆ ₹1,19,500ಕ್ಕೆ ತಲುಪಿದೆ. ಅಖಿಲ ಭಾರತ ಸರಾಫ್ ಅಸೋಸಿಯೇಷನ್ ನೀಡಿರುವ ಮಾಹಿತಿ ಪ್ರಕಾರ ಸೋಮವಾರ ಚಿನ್ನದ ಬೆಲೆಯು (ಶೇ 99.9ರಷ್ಟು ಪರಿಶುದ್ಧ) 10 ಗ್ರಾಂಗೆ ₹1,500ರಷ್ಟು ಹೆಚ್ಚಳವಾಗಿದೆ.



ಶೇ 99.5ರಷ್ಟು ಶುದ್ಧತೆಯ ಚಿನ್ನದ ಬೆಲೆ ಕೂಡ 10 ಗ್ರಾಂಗೆ ₹1,500ರಷ್ಟು ಹೆಚ್ಚಳ ಕಂಡಿದ್ದು, ₹1,18,900ಕ್ಕೆ ತಲುಪಿದೆ.

ಈ ವರ್ಷದಲ್ಲಿ 10 ಗ್ರಾಂ ಚಿನ್ನದ ಬೆಲೆಯು ₹40,550ರಷ್ಟು (ಶೇ 51.36) ಹೆಚ್ಚಳ ಆಗಿದೆ. 2024ರ ಡಿಸೆಂಬರ್ 31ರಂದು 10 ಗ್ರಾಂ ಚಿನ್ನದ ಬೆಲೆಯು ₹78,950 ಆಗಿತ್ತು.

ಕೆ.ಜಿ. ಬೆಳ್ಳಿಯ ಬೆಲೆಯು ಈ ವರ್ಷದಲ್ಲಿ ₹60,300ರಷ್ಟು (ಶೇ 67.22ರಷ್ಟು) ಹೆಚ್ಚಳ ಕಂಡಿದೆ. ಬೆಳ್ಳಿಯ ಬೆಲೆಯು 2024ರ ಡಿಸೆಂಬರ್ 31ರಂದು ₹89,700 ಆಗಿತ್ತು.

ವಿದೇಶಿ ಮಾರುಕಟ್ಟೆಗಳಲ್ಲಿಯೂ ಚಿನ್ನ ಹಾಗೂ ಬೆಳ್ಳಿಯ ಬೆಲೆಯಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಳ ಆಗಿದೆ. ‘ಚಿನ್ನದ ಬೆಲೆಯು ಸತತ ಆರು ವಾರಗಳಿಂದ ಹೆಚ್ಚಳ ಕಾಣುತ್ತಿದೆ. ಈಗ ಅದು ಮತ್ತೊಂದು ಗರಿಷ್ಠ ಮಟ್ಟವನ್ನು ತಲುಪಿದೆ. ವ್ಯಾಪಾರ ಸಮರದ ಸುತ್ತಲಿನ ಕಳವಳಗಳು, ಇಟಿಎಫ್‌ಗಳ ಕಡೆ ಹೂಡಿಕೆ ಹಣ ಹೆಚ್ಚು ಹರಿದುಬರುತ್ತಿರುವುದು ಹಾಗೂ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಕಡಿಮೆ ಮಾಡುತ್ತದೆ ಎಂಬ ನಿರೀಕ್ಷೆಯು ಇದಕ್ಕೆ ಕಾರಣ’ ಎಂದು ಮಿರಾಯ್ ಅಸೆಟ್ ಶೇರ್‌ಖಾನ್‌ನ ಸರಕು ಮತ್ತು ಕರೆನ್ಸಿ ವಿಭಾಗದ ಮುಖ್ಯಸ್ಥ ಪ್ರವೀಣ್ ಸಿಂಗ್ ಹೇಳಿದ್ದಾರೆ.

‘ಚಿನ್ನ ಮತ್ತು ಬೆಳ್ಳಿಯ ಬೆಲೆಯು ನಾಗಾಲೋಟದಲ್ಲಿ ಏರಿಕೆ ಆಗುತ್ತಿವೆ. ಚಿನ್ನದ ದರವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಔನ್ಸ್‌ಗೆ 3,800 ಅಮೆರಿಕನ್ ಡಾಲರ್‌ಗಿಂತ ಹೆಚ್ಚಾಗಿದೆ. ಇದು ಬಹಳ ಬೇಗ ಔನ್ಸ್‌ಗೆ 4,000 ಡಾಲರ್ ಗಡಿ ದಾಟಬಹುದು’ ಎಂದು ಟ್ರೇಡ್‌ಜಿನಿ ಬ್ರೋಕರೇಜ್ ಸಂಸ್ಥೆಯ ಸಿಒಒ ತ್ರಿವೇಶ್ ಡಿ. ಹೇಳಿದ್ದಾರೆ.

ಬೆಳ್ಳಿಯ ಬೆಲೆಯು ಈ ವರ್ಷದಲ್ಲಿ ಶೇ 55ರಷ್ಟು ಏರಿಕೆ ಕಂಡಿದೆ. ಕೈಗಾರಿಕಾ ವಲಯದಿಂದ ಬೇಡಿಕೆ ಹೆಚ್ಚಾಗಿರುವುದು, ಅದರಲ್ಲೂ ಮುಖ್ಯವಾಗಿ ಸೌರಫಲಕಗಳು ಮತ್ತು ತಂತ್ರಜ್ಞಾನ ವಲಯದಿಂದ ಬೇಡಿಕೆ ಹೆಚ್ಚಾಗಿರುವುದು ಈ ಏರಿಕೆಗೆ ಕಾರಣ ಎಂದು ತ್ರಿವೇಶ್ ಹೇಳಿದ್ದಾರೆ. ಅನಿಶ್ಚಿತತೆಯು ಹೆಚ್ಚಾಗಿರುವ ಸಂದರ್ಭದಲ್ಲಿ ಅಮೂಲ್ಯ ಲೋಹಗಳ ಬೆಲೆಯು ಹೆಚ್ಚಾಗುವುದಕ್ಕೆ ಬಹಳ ಸೂಕ್ತವಾದ ನಿದರ್ಶನ ಇದು ಎಂದು ಅವರು ವಿವರಿಸಿದ್ದಾರೆ.

ಅಂದಾಜು ಮಾಡಿದ್ದ ಮೋತಿಲಾಲ್

ಬೆಳ್ಳಿಯ ಬೆಲೆಯು ಮುಂದಿನ 12 ತಿಂಗಳುಗಳಲ್ಲಿ ಕೆ.ಜಿ.ಗೆ ₹1.5 ಲಕ್ಷಕ್ಕೆ ಏರಿಕೆ ಆಗಬಹುದು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವರದಿಯೊಂದು ಇದೇ 9ರಂದು ಹೇಳಿತ್ತು.

ಕೈಗಾರಿಕೆಗಳಿಂದ ಬೆಳ್ಳಿಗೆ ಬೇಡಿಕೆ ಬರುತ್ತಿರುವುದು, ಡಾಲರ್ ದುರ್ಬಲ ಆಗುತ್ತಿರುವುದು, ಜಾಗತಿಕ ಅನಿಶ್ಚಿತತೆಗಳ ನಡುವೆ ಹೂಡಿಕೆದಾರರು ಹಣವನ್ನು ಸುರಕ್ಷಿತ ಕಡೆಗಳಲ್ಲಿ ತೊಡಗಿಸುತ್ತಿರುವುದು ಬೆಳ್ಳಿಯ ಬೆಲೆ ಏರಿಕೆಗೆ ನೆರವಾಗಬಲ್ಲವು ಎಂದು ಮೋತಿಲಾಲ್ ಓಸ್ವಾಲ್ ಹೇಳಿತ್ತು.

ಇ.ವಿ.ಗಳಿಗೆ ಎವಿಎಎಸ್ ಕಡ್ಡಾಯ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ಕಾರುಗಳು, ಬಸ್ಸುಗಳು ಮತ್ತು ಟ್ರಕ್ಕುಗಳಿಗೆ ‘ಎವಿಎಎಸ್’ ಸೌಲಭ್ಯ ಅಳವಡಿಸುವುದನ್ನು ಕಡ್ಡಾಯ ಮಾಡಬೇಕು ಎಂಬ ಪ್ರಸ್ತಾವನೆಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಸಿದ್ಧಪಡಿಸಿದೆ.

2027ರ ಅಕ್ಟೋಬರ್ 1ರಿಂದ ಈ ವ್ಯವಸ್ಥೆಯು ಜಾರಿಗೆ ಬರಬೇಕು ಎಂದು ಪ್ರಸ್ತಾವದಲ್ಲಿ ಹೇಳಲಾಗಿದೆ. ರಸ್ತೆ ಸುರಕ್ಷತೆಯನ್ನು ಗಮನದಲ್ಲಿ ಇರಿಸಿಕೊಂಡು ಈ ಪ್ರಸ್ತಾವ ಸಿದ್ಧಪಡಿಸಲಾಗಿದೆ.

2026ರ ಅಕ್ಟೋಬರ್ 1ರ ನಂತರ ತಯಾರಾಗುವ ಕೆಲವು ವಿದ್ಯುತ್ ಚಾಲಿತ ಪ್ರಯಾಣಿಕ ವಾಹನಗಳು ಹಾಗೂ ಸರಕು ಸಾಗಣೆ ವಾಹನಗಳಲ್ಲಿ ಕೂಡ ಎವಿಎಎಸ್ ಸೌಲಭ್ಯ ಹೊಂದಿರಬೇಕು ಎಂದು ಸಚಿವಾಲಯ ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಎವಿಎಎಸ್ ಸೌಲಭ್ಯ ಇರುವ ಇ.ವಿ.ಗಳು ಪಾದಚಾರಿಗಳನ್ನು ಎಚ್ಚರಿಸುವ ರೀತಿಯಲ್ಲಿ ಕೃತಕವಾದ ಶಬ್ದ ಮಾಡುತ್ತವೆ. ಇದರಿಂದಾಗಿ ಪಾದಚಾರಿಗಳಿಗೆ ವಾಹನವೊಂದು ಬರುತ್ತಿದೆ ಎಂಬುದು ಅರಿವಿಗೆ ಬರುತ್ತದೆ.

‘ಹೊಸ ಮಾದರಿಯ ವಾಹನಗಳಲ್ಲಿ 2026ರ ಅಕ್ಟೋಬರ್ 1ರಿಂದ ಹಾಗೂ ಹಾಲಿ ಇರುವ ಮಾದರಿಗಳಲ್ಲಿ 2027ರ ಅಕ್ಟೋಬರ್ 1ರಿಂದ ಎವಿಎಎಸ್ ವ್ಯವಸ್ಥೆಯನ್ನು ಹೊಂದಿರಬೇಕು’ ಎಂದು ಕರಡು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಅಮೆರಿಕ, ಜಪಾನ್, ಐರೋಪ್ಯ ಒಕ್ಕೂಟದ ಕೆಲವು ದೇಶಗಳು ಹೈಬ್ರಿಡ್ ವಾಹನಗಳಲ್ಲಿ ಎವಿಎಎಸ್ ಸೌಲಭ್ಯ ಇರುವುದು ಕಡ್ಡಾಯ ಎಂಬ ನಿಯಮವನ್ನು ಈಗಾಗಲೇ ಜಾರಿಗೆ ತಂದಿವೆ.

ಕೈಗಾರಿಕಾ ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಆಗಸ್ಟ್‌ನಲ್ಲಿ ಶೇ 4ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸೋಮವಾರ ತಿಳಿಸಿದೆ.



ಗಣಿಗಾರಿಕೆ ವಲಯದ ಚಟುವಟಿಕೆ ಉತ್ತಮವಾಗಿದೆ. ಹೀಗಾಗಿ, ಕೈಗಾರಿಕಾ ಉತ್ಪಾದನೆಯು ಪ್ರಗತಿ ಕಂಡಿದೆ ಎಂದು ಅದು ತಿಳಿಸಿದೆ. ಕೈಗಾರಿಕಾ ಉತ್ಪಾದನೆಯು ಜುಲೈನಲ್ಲಿ ಶೇ 4.3ರಷ್ಟು ಬೆಳವಣಿಗೆ ಕಂಡಿತ್ತು. 2024ರ ಆಗಸ್ಟ್‌ನಲ್ಲಿ ಉತ್ಪಾದನೆಯ ಬೆಳವಣಿಗೆಯು ಹೇಳಿಕೊಳ್ಳುವಷ್ಟು ಮಟ್ಟದಲ್ಲಿ ಇರಲಿಲ್ಲ ಎಂದು ಹೇಳಿದೆ.

ಕಳೆದ ವರ್ಷದ ಆಗಸ್ಟ್ ತಿಂಗಳಿನಲ್ಲಿ ಗಣಿಗಾರಿಕೆ ವಲಯದ ಉತ್ಪಾದನೆ ಶೇ 4.3ರಷ್ಟು ಆಗಿತ್ತು. ಅದು ಈ ಬಾರಿ ಶೇ 6ರಷ್ಟಾಗಿದೆ. ತಯಾರಿಕಾ ವಲಯದ ಬೆಳವಣಿಗೆ ಶೇ 3.8 ಮತ್ತು ವಿದ್ಯುತ್ ವಲಯದ ಪ್ರಗತಿ ಶೇ 4.1ರಷ್ಟಾಗಿದೆ.

ಕಳೆದ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಐಐಪಿ ಬೆಳವಣಿಗೆ ಶೇ 4.3ರಷ್ಟಾಗಿತ್ತು. ಈ ಬಾರಿ ಅದು ಶೇ 2.8ಕ್ಕೆ ಇಳಿದಿದೆ.

‘ಜುಲೈ ತಿಂಗಳಿಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಕೈಗಾರಿಕಾ ಉತ್ಪಾದನೆ ಇಳಿಕೆ ಕಂಡಿದೆ. ಜುಲೈನಲ್ಲಿ ತಯಾರಿಕಾ ವಲಯದ ಪ್ರಗತಿ ಶೇ 6ರಷ್ಟಿತ್ತು. ಇದು ಆಗಸ್ಟ್‌ನಲ್ಲಿ ಶೇ 3.8ಕ್ಕೆ ಇಳಿದಿದೆ. ಇದೇ ಬೆಳವಣಿಗೆ ಇಳಿಕೆಗೆ ಕಾರಣ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಈ ಪ್ರಗತಿಯನ್ನು ಲೆಕ್ಕ ಹಾಕಲಾಗುತ್ತದೆ.

ಅ. 6ರಿಂದ ಟಾಟಾ ಕ್ಯಾಪಿಟಲ್ ಐಪಿಒ

ನವದೆಹಲಿ (ಪಿಟಿಐ): ಬ್ಯಾಂಕೇತರ ಹಣಕಾಸು ಕಂಪನಿ (ಎನ್‌ಬಿಎಫ್‌ಸಿ) ಟಾಟಾ ಕ್ಯಾಪಿಟಲ್, ಸಾರ್ವಜನಿಕರಿಗೆ ಷೇರು ಮಾರಾಟ ಮಾಡುವ (ಐಪಿಒ) ಮೂಲಕ ₹15,512 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಪ್ರತಿ ಷೇರಿನ ಬೆಲೆ ₹310ರಿಂದ ₹326ರವರೆಗೆ ಇರಲಿದೆ.

ಷೇರುಗಳಿಗೆ ಬಿಡ್ ಸಲ್ಲಿಸಲು ಅಕ್ಟೋಬರ್ 6ರಿಂದ 8ರವರೆಗೆ ಅವಕಾಶ ಇರಲಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್ಸ್) ಅಕ್ಟೋಬರ್ 3ರಂದು ಐಪಿಒಗೆ ಅರ್ಜಿ ಸಲ್ಲಿಸಬಹುದಾಗಿದೆ. ಒಟ್ಟು 47.58 ಕೋಟಿ ಷೇರುಗಳನ್ನು ಮಾರಾಟ ಮಾಡುತ್ತಿದೆ. ಟಾಟಾ ಕ್ಯಾಪಿಟಲ್‌ನ ಮಾರುಕಟ್ಟೆ ಬಂಡವಾಳ ಮೌಲ್ಯ ₹1.38 ಲಕ್ಷ ಕೋಟಿ.


ಟಾಟಾ ಕ್ಯಾಪಿಟಲ್‌ನಲ್ಲಿ ಟಾಟಾ ಸನ್ಸ್ ಶೇ 88.6ರಷ್ಟು ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಗಮ (ಐಎಫ್‌ಸಿ) ಶೇ 1.8ರಷ್ಟು ಪಾಲನ್ನು ಹೊಂದಿವೆ. ಐಪಿಒ ಮೂಲಕ ಸಂಗ್ರಹಿಸುವ ಮೊತ್ತವನ್ನು ಕಂಪನಿಯ ಬಂಡವಾಳದ ನೆಲೆ ಹೆಚ್ಚಿಸಿಕೊಳ್ಳಲು, ಸಾಲ ನೀಡಲು ಬಳಸಿಕೊಳ್ಳಲಾಗುತ್ತದೆ.

ಟಾಟಾ ಕ್ಯಾಪಿಟಲ್ ಟಾಟಾ ಸಮೂಹದ ಸಂಸ್ಥೆಯಾಗಿದೆ. ದೇಶದ ಹಣಕಾಸು ವಲಯದಲ್ಲಿ ಈ ಐಪಿಒ ದೊಡ್ಡದು. ಇದು ಇತ್ತೀಚಿನ ದಿನಗಳಲ್ಲಿ ಟಾಟಾ ಸಮೂಹದ ಎರಡನೇ ಐಪಿಒ ಆಗಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಟಾಟಾ ಕ್ಯಾಪಿಟಲ್ ₹3,655 ಕೋಟಿ ತೆರಿಗೆ ನಂತರದ ಲಾಭ ಗಳಿಸಿತ್ತು. ವರಮಾನ ₹28,313 ಕೋಟಿಯಷ್ಟಾಗಿತ್ತು.

‘ಬಿಷ್ಣೋಯಿ ಗ್ಯಾಂಗ್ ಭಯೋತ್ಪಾದಕ ಸಂಘಟನೆ’

ಒಟ್ಟಾವಾ (ಪಿಟಿಐ): ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಕೆನಡಾ ಸರ್ಕಾರ ಸೋಮವಾರ ಘೋಷಿಸಿದೆ.


ಲಾರೆನ್ಸ್ ಬಿಷ್ಣೋಯಿ

‘ಬಿಷ್ಣೋಯಿ ಗ್ಯಾಂಗ್ ನಿರ್ದಿಷ್ಟ ಸಮುದಾಯಗಳ ಮೇಲೆ ಭಯೋತ್ಪಾದನೆ ಹೆಸರಿನಲ್ಲಿ ದಾಳಿ, ಹಿಂಸೆ ಹಾಗೂ ಬೆದರಿಸುವ ಕೆಲಸದಲ್ಲಿ ತೊಡಗಿದೆ. ಸಂಘಟನೆಯನ್ನು ಭಯೋತ್ಪಾದಕ ಗುಂಪು ಎಂದು ಪಟ್ಟಿ ಮಾಡುವ ಮೂಲಕ ಅವರ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಹೆಚ್ಚು ಅಧಿಕಾರ ಹಾಗೂ ಪರಿಣಾಮಕಾರಿಯಾದ ಸಾಧನ ಲಭ್ಯವಾಗಲಿದೆ’ ಎಂದು ಸಾರ್ವಜನಿಕ ಸುರಕ್ಷಿತ ಸಚಿವ ಗ್ಯಾರಿ ಆನಂದಸಂಗಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಯೋತ್ಪಾದಕ ಪಟ್ಟಿ ಎಂದು ಸರ್ಕಾರದ ಪರಿಗಣಿಸಿದ ನಂತರ ಸಂಘಟನೆಗೆ ಸೇರಿದ ಆಸ್ತಿ, ವಾಹನ ಹಾಗೂ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಲಭ್ಯವಾಗಲಿದೆ.

‘ಅಮೆರಿಕದ ಹೊರಗೆ ತಯಾರಾಗುವ ಚಿತ್ರಗಳಿಗೆ ಶೇ100 ಸುಂಕ ವಿಧಿಸಿದ ಟ್ರಂಪ್’

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಹೊರಗೆ ತಯಾರಾಗುವ ಎಲ್ಲಾ ಚಿತ್ರಗಳ ಮೇಲೆ ಶೇ100ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಘೋಷಿಸಿದ್ದಾರೆ.

ಟ್ರಂಪ್ ಅವರ ಈ ನಡೆಯು ಭಾರತೀಯ ಚಿತ್ರರಂಗದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

‘ದೀರ್ಘಕಾಲದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ, ಅಮೆರಿಕದ ಹೊರಗೆ ತಯಾರಾಗುವ ಯಾವುದೇ ಅಥವಾ ಎಲ್ಲ ಚಿತ್ರಗಳ ಮೇಲೆ ನಾನು ಶೇ 100ರಷ್ಟು ಸುಂಕ ವಿಧಿಸುತ್ತಿದ್ದೇನೆ’ ಎಂದು ಅವರು ತಮ್ಮ ಒಡೆತನದ ಸಾಮಾಜಿಕ ಜಾಲತಾಣ ‘ಟ್ರೂತ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಭಾರತೀಯ ಚಿತ್ರರಂಗವು ಹಲವು ಭಾಷೆಗಳಲ್ಲಿ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಈ ಚಿತ್ರಗಳು ಅಮೆರಿಕದಲ್ಲಿರುವ ಭಾರತೀಯರಲ್ಲಿ ಜನಪ್ರಿಯವಾಗಿವೆ.

ಜಿಎಸ್‌ಟಿ: 3 ಸಾವಿರ ದೂರು



ನವದೆಹಲಿ (ಪಿಟಿಐ): ಜಿಎಸ್‌ಟಿ ಪರಿಷ್ಕರಣೆಯ ಪ್ರಯೋಜನದ ವರ್ಗಾವಣೆಗೆ ಸಂಬಂಧಿಸಿದಂತೆ, ಒಂದೇ ವಾರದಲ್ಲಿ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯು (ಎನ್‌ಸಿಎಚ್) 3 ಸಾವಿರ ದೂರುಗಳನ್ನು ಸ್ವೀಕರಿಸಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಹೇಳಿದ್ದಾರೆ.

‘ಪ್ರತಿ ದಿನವೂ ನಾವು ದೂರುಗಳನ್ನು ಸ್ವೀಕರಿಸುತ್ತಿದ್ದೇವೆ. ಈ ದೂರುಗಳನ್ನು ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಕೇಂದ್ರೀಯ ಮಂಡಳಿಗೆ (ಸಿಬಿಐಸಿ) ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ’ ಎಂದು ಸೋಮವಾರ ಹೇಳಿದ್ದಾರೆ.

ಜಿಎಸ್‌ಟಿ ದರ ಇಳಿಕೆ ಪ್ರಯೋಜನ ವರ್ಗಾಯಿಸದೇ ದಿಕ್ಕು ತಪ್ಪಿಸುವ ಬಗೆಯಲ್ಲಿ ರಿಯಾಯಿತಿ ದರವನ್ನು ನಿಗದಿ ಮಾಡುವ ಮೂಲಕ ಗ್ರಾಹಕರಿಗೆ ಎಲ್ಲಿ ವಂಚನೆ ಮಾಡಲಾಗುತ್ತಿದೆ ಎಂಬುದನ್ನು ಸಚಿವಾಲಯವು ಸೂಕ್ಷ್ಮವಾಗಿ ಗಮನಿಸುತ್ತಿದೆ.

ವಿವಿಧ ವಲಯಗಳಿಂದ ದಾಖಲಾಗುವ ಈ ದೂರುಗಳ ಸಮಗ್ರ ಚಿತ್ರಣ ಪಡೆದುಕೊಳ್ಳಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಮತ್ತು ಚಾಟ್‌ಬಾಟ್ ತಂತ್ರಜ್ಞಾನವನ್ನು ನಿಯೋಜಿಸಲಾಗಿದೆ.

ದಿಕ್ಕುತಪ್ಪಿಸುವ ರಿಯಾಯಿತಿಗಳು ಅಥವಾ ಜಾಹೀರಾತು, ನ್ಯಾಯೋಚಿತವಲ್ಲದ ವ್ಯಾಪಾರ ವಹಿವಾಟು ನಡೆಸುವ ಮೂಲಕ ಜಿಎಸ್‌ಟಿ ಪರಿಷ್ಕರಣೆ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸದ ದೂರುಗಳನ್ನು ವಿಶ್ಲೇಷಿಸಲಾಗುವುದು. ಬೇರೆ ಬೇರೆ ವಲಯಗಳಿಂದ ದೂರುಗಳು ಹೆಚ್ಚಾದರೆ, ಅವುಗಳನ್ನು ಕಾನೂನಿನ ಅಡಿ ಪ್ರತ್ಯೇಕವಾಗಿ ವರ್ಗೀಕರಿಸಲಾಗುತ್ತದೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

29-09-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1325 (1340)
ಒಂದು ವಾರದ ಡೆಲಿವರಿ	1320 (1335)
ಪಾಮ್ ವಾರದ ಡೆಲಿವರಿ	1268 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1340)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,15,000 (1,13,400)
ಬೆಳ್ಳಿ ಕೆ.ಜಿಗೆ	1,43,600 (1,42,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-1600
ಮಧ್ಯಮ	₹800-1200
ಸಣ್ಣ	₹200-800

‘ಯುದ್ಧದ ತೀವ್ರತೆ ಸೆಕೆಂಡ್‌ಗಳಲ್ಲೇ ಗೊತ್ತಾಗತ್ತೆ’

ನವದೆಹಲಿ (ಪಿಟಿಐ): ‘ಉಪಗ್ರಹಗಳು, ಡ್ರೋನ್ ಹಾಗೂ ಸೆನ್ಸರ್‌ಗಳು ಯುದ್ಧದ ಸ್ವರೂಪ ಕುರಿತ ವ್ಯಾಖ್ಯಾನವನ್ನೇ ಬದಲಿಸಿವೆ. ಈಗಿನ ಯುದ್ಧದ ತೀವ್ರತೆ ಅಳೆಯಲು ತಿಂಗಳುಗಳು ಬೇಕಿಲ್ಲ, ಕೆಲವೇ ಗಂಟೆ–ಸೆಕೆಂಡ್‌ಗಳು ಸಾಕು’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.

ಇದೇ ವೇಳೆ, ಭವಿಷ್ಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಉತ್ತಮ ಕಾರ್ಯಸೂಚಿ ರೂಪಿಸಿ, ಅತ್ಯಾಧುನಿಕ ತಂತ್ರಜ್ಞಾನ ಮತ್ತು ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವಂತೆಯೂ ಭಾರತೀಯ ಕರಾವಳಿ ಕಾವಲು ಪಡೆಗಳಿಗೆ (ಐಸಿಜಿ) ರಾಜನಾಥ ಕರೆ ನೀಡಿದ್ದಾರೆ.

ಇಲ್ಲಿರುವ ಐಸಿಜಿ ಕೇಂದ್ರ ಕಚೇರಿಯಲ್ಲಿ ನಡೆದ 42ನೇ ಐಸಿಜಿ ಕಮಾಂಡರ್ ಸಮಾವೇಶದಲ್ಲಿ ರಾಜನಾಥ ಭಾಗಿಯಾಗಿದ್ದರು. ಈ ವೇಳೆ ಮಾತನಾಡಿ, ‘ಸೈಬರ್ ಹಾಗೂ ಎಲೆಕ್ಟ್ರಾನಿಕ್ ಯುದ್ಧವು ಈಗ ಕಾಲ್ಪನಿಕ ಬೆದರಿಕೆಯಾಗಿ ಉಳಿದಿಲ್ಲ, ವಾಸ್ತವದಲ್ಲಿ ಕಾಡುತ್ತಿದೆ’ ಎಂದರು.

ಕೀವ್: ರಷ್ಯಾ ದಾಳಿ, ನಾಲ್ವರ ಸಾವು

ಕೀವ್ (ಎಪಿ): ಭಾನುವಾರ ರಾತ್ರಿಯಿಂದ ಉಕ್ರೇನ್‌ನ ಮೇಲೆ ರಷ್ಯಾವು ನಿರಂತರ ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 4 ಮಂದಿ ಮೃತಪಟ್ಟಿದ್ದಾರೆ.

ಕಳೆದ ತಿಂಗಳು ಉಕ್ರೇನ್ ಮೇಲೆ ನಡೆದಿದ್ದ ಬಾಂಬ್ ದಾಳಿಯಲ್ಲಿ 21 ಮಂದಿ ಮೃತಪಟ್ಟಿದ್ದರು. ಆ ಬಳಿಕ ನಡೆದ ಬಹುದೊಡ್ಡ ದಾಳಿ ಇದಾಗಿದೆ.

‘ಕೀವ್‌ನ ವಸತಿ ಪ್ರದೇಶಗಳು, ನಾಗರಿಕ ಮೂಲಸೌಕರ್ಯ ಪ್ರದೇಶ, ವೈದ್ಯಕೀಯ ಕೇಂದ್ರ, ಕಿಂಡರ್‌ಗಾರ್ಡನ್ ಸೇರಿದಂತೆ ರಾಜಧಾನಿಯ 20ಕ್ಕೂ ಅಧಿಕ ಸ್ಥಳಗಳ ಮೇಲೆ ರಾತ್ರಿಯಿಡೀ ದಾಳಿ ನಡೆಸಲಾಗಿದೆ’ ಎಂದು ಕೀವ್‌ನ ಮೇಯರ್ ವೈಟಲಿ ಕ್ಲಿಟ್‌ಸ್ಕೊ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಹಗೆತನವ ಒಲ್ಲೆನೆಂದು ನಡೆಯಬಲ್ಲವರನು ಗೆಲುವ ಬಲವಂತರಾರು.

-ತಿರುವಳ್ಳುವರ್

ಸಂಪಾದಕೀಯ

ಗೆಲುವನ್ನು ಮಂಕಾಗಿಸಿದ ನಡವಳಿಕೆ ಕ್ರಿಕೆಟನ್ನು ಸೋಲಿಸಿದ ರಾಜಕಾರಣ

ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ಗೆಲುವು ಸಾಧಿಸಿದ ಭಾರತದ ಆಟಗಾರರ ಸಾಧನೆ ಕ್ರೀಡಾಪ್ರಿಯರ ಸಹಜ ಸಂಭ್ರಮಕ್ಕೆ ಕಾರಣವಾಗಬೇಕಿತ್ತು. ಆದರೆ, ಉಭಯ ದೇಶಗಳ ನಡುವಣ ಸಂಘರ್ಷವನ್ನು ಆಟಗಾರರು ಕ್ರೀಡಾಂಗಣಕ್ಕೆ ತರುವ ಮೂಲಕ 'ಸಜ್ಜನರ ಆಟ' ಎಂದು ಹೆಸರಾದ ಕ್ರಿಕೆಟ್‌ನ ಘನತೆಗೆ ಹಾಗೂ ಕ್ರೀಡಾಸ್ಫೂರ್ತಿಗೆ ಮಸಿ ಬಳಿದಿದ್ದಾರೆ. ಆಟದಲ್ಲಿ ಗೆಲುವು ಸಾಧಿಸಿದರೂ, ಕ್ರೀಡಾಸ್ಫೂರ್ತಿ ನೇಪಥ್ಯಕ್ಕೆ ಸರಿದಿರುವುದು, 'ಶಸ್ತ್ರಚಿಕಿತ್ಸೆ ಯಶಸ್ವಿ, ರೋಗಿಯ ಸಾವು' ಎನ್ನುವ ಮಾತನ್ನು ನೆನಪಿಸುವಂತಿದೆ. ಪಂದ್ಯಾವಳಿಯ ಆರಂಭದಿಂದಲೂ ಕ್ರೀಡಾಸ್ಫೂರ್ತಿಗೆ ವಿರುದ್ಧವಾದ ನಡವಳಿಕೆಯನ್ನು ಎರಡೂ ತಂಡಗಳ ಆಟಗಾರರು ಪೈಪೋಟಿಗೆ ಬಿದ್ದವರಂತೆ ಪ್ರದರ್ಶಿಸಿದ್ದಾರೆ. ಪಾಕಿಸ್ತಾನದ ಬ್ಯಾಟ್ಸ್‌ಮನ್ ಸಾಹಿಬ್‌ಜಾದಾ ಫರ್ಹಾನ್ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಬ್ಯಾಟನ್ನು ಎಕೆ-47 ರೀತಿಯಲ್ಲಿ ಹಿಡಿದು ಗುಂಡಿನ ಮೊರೆತಗೈಯುವಂತಹ ಸಂಜ್ಞೆ ಮಾಡಿದರು. ಮತ್ತೊಬ್ಬ ಆಟಗಾರ ಹ್ಯಾರಿಸ್ ರವೂಫ್, 'ಆರು' ಹಾಗೂ 'ಸೊನ್ನೆ' ಎಂದು ಬೆರಳುಗಳಿಂದ ಇಶಾರೆ ಮಾಡಿದರು. ಅವರ ಇಶಾರೆ, ಆಪರೇಷನ್ ಸಿಂಧೂರ ಸಂಘರ್ಷದಲ್ಲಿ ಭಾರತದ ಆರು ವಿಮಾನಗಳನ್ನು ನಾಶಗೊಳಿಸಿದ್ದೇವೆ ಎನ್ನುವ ಪಾಕಿಸ್ತಾನದ ಹೇಳಿಕೆಯನ್ನು ಸೂಚಿಸುವಂತಿತ್ತು. ಇದೇ ರವೂಫ್ ಫೈನಲ್‌ನಲ್ಲಿ ಔಟಾದಾಗ ಭಾರತದ ಜಸ್‌ಪ್ರೀತ್ ಬೂಮ್ರಾ ವಿಮಾನ ಪತನದ ಚಿಹ್ನೆಯನ್ನು ಬೆರಳುಗಳಿಂದ ಪ್ರದರ್ಶಿಸಿದರು. ಆಟದ ಮೂಲಕ ಗಮನಸೆಳೆಯಬೇಕಾದ ಆಟಗಾರರು ಚೇಷ್ಟೆಗಳ ಮೂಲಕ ಸುದ್ದಿಯಾಗುವುದು ದುರದೃಷ್ಟಕರ.



ಭಾರತ ಹಾಗೂ ಪಾಕಿಸ್ತಾನದ ಕ್ರಿಕೆಟ್ ಆಟಗಾರರು ಕ್ರೀಡಾಂಗಣವನ್ನು ರಾಜಕೀಯ ದ್ವೇಷದ ಅಖಾಡ ಆಗಿಸಿದ್ದು, ಆಟದ ಘನತೆಗೆ ಧಕ್ಕೆ ತರುವ ಹಾಗೂ ಕ್ರೀಡಾಸ್ಫೂರ್ತಿಗೆ ವಿರುದ್ಧವಾದ ನಡವಳಿಕೆ.

ಆಟದ ಹೊರತಾದ ಕಾರಣಗಳಿಂದಾಗಿ ಕ್ರಿಕೆಟಿಗರು ಸುದ್ದಿಯಲ್ಲಿ ಇರುವುದು ಆಯಾ ದೇಶಗಳ ಸರ್ಕಾರಗಳಿಗೆ ಕಳವಳ ಹುಟ್ಟಿಸಬೇಕಾಗಿತ್ತು. ಆದರೆ, ಆಟಗಾರರ ಮುಖವಾಡ ತೊಟ್ಟು ರಾಜಕೀಯ ಮುಖಂಡರೇ ಕ್ರೀಡಾಂಗಣದಲ್ಲಿ ಕಾಣಿಸಿಕೊಂಡಿರುವಂತಿದೆ. ವಿಷಾದದ ಸಂಗತಿಯೆಂದರೆ, ಆಟಗಾರರ ವರ್ತನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೂ ಸಮರ್ಥಿಸಿಕೊಂಡಿದ್ದಾರೆ. ಆಟಗಾರರನ್ನು ಅಭಿನಂದಿಸಿರುವ ಅವರು, 'ಆಪರೇಷನ್ ಸಿಂಧೂರ' ಮೈದಾನದಲ್ಲೂ ಮುಂದುವರಿದಿದೆ; ಭಾರತದ ಗೆಲುವಿನ ಮೂಲಕ ಫಲಿತಾಂಶ ಪುನರಾವರ್ತನೆಗೊಂಡಿದೆ ಎಂದು ಹೇಳಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಅವರ ಅನುಚಿತ ವರ್ತನೆ ಕೇಂದ್ರ ಸಚಿವ ಕಿರಣ್ ರಿಜಿಜು ಅವರಿಗೆ ಪಾಕಿಸ್ತಾನಕ್ಕಾದ ಶಿಕ್ಷೆಯ ರೂಪದಲ್ಲಿ ಕಾಣಿಸಿದೆ. ಪ್ರಧಾನಿ ಮತ್ತು ಸಚಿವರ ಅಭಿಪ್ರಾಯಗಳು, ಆಟದ ಜೊತೆಗೆ ರಾಜಕಾರಣವನ್ನು ಬೆರೆಸುವ ಪ್ರಯತ್ನದಂತಿವೆ. ಸಂಘರ್ಷದ ಸಂದರ್ಭದಲ್ಲಿ ಪಾಕಿಸ್ತಾನದೊಂದಿಗೆ ಯಾವ ರೀತಿಯ ಸಂಬಂಧವೂ ಬೇಡ ಎನ್ನುವುದು ಕೇಂದ್ರ ಸರ್ಕಾರದ ಅಭಿಪ್ರಾಯವಾಗಿದ್ದಲ್ಲಿ, ಏಷ್ಯಾ ಕಪ್ ಪಂದ್ಯಾವಳಿ ಯಲ್ಲಿ ಭಾಗವಹಿಸದಿರುವಂತೆ ಬಿಸಿಸಿಐಗೆ ಸೂಚಿಸಬಹುದಿತ್ತು. ಆಡಲು ಅವಕಾಶ ಕಲ್ಪಿಸಿಕೊಟ್ಟ ಮೇಲೆ ಆಟದ ಚೌಕಟ್ಟಿಗೆ ಬದ್ಧವಾಗಿರುವುದು ಹಾಗೂ ಕ್ರೀಡಾಸ್ಫೂರ್ತಿಯಿಂದ ವರ್ತಿಸುವುದು ಅಗತ್ಯ. ಪಾಕಿಸ್ತಾನದ ಸಚಿವರಾದ ಮೊಹ್ಸಿನ್ ನಕ್ವಿ ಅವರು ಅಧ್ಯಕ್ಷರಾಗಿರುವ ಏಷ್ಯಾ ಕ್ರಿಕೆಟ್ ಕೌನ್ಸಿಲ್ ಆಯೋಜಿಸಿರುವ ಟೂರ್ನಿಯಲ್ಲಿ ಭಾಗವಹಿಸಲು ಒಪ್ಪಿದ ಕ್ಷಣವೇ, ಅವರೊಂದಿಗೆ ತಾಂತ್ರಿಕವಾಗಿ ಹಸ್ತಲಾಘವ ಮಾಡಿದಂತಾಗಿದೆ. ನಂತರದ ನಡವಳಿಕೆಗಳು ಅಪ್ರಬುದ್ಧವಾಗಿವೆ. ಮೊಹ್ಸಿನ್ ನಕ್ವಿ ಅವರಿಂದ ಟ್ರೋಫಿ ಪಡೆಯಲು ನಿರಾಕರಿಸಿರುವ ಭಾರತ ತಂಡದ ನಿರ್ಧಾರವೂ ಆಟದ ಅಂಗಳದಲ್ಲಿ ರಾಜಕೀಯದ ಜಿದ್ದನ್ನು ಪ್ರದರ್ಶಿಸುವ ಹಾಗೂ ಕ್ರೀಡೆಯ ಉತ್ಸಾಹವನ್ನು ಕುಗ್ಗಿಸುವ ನಡವಳಿಕೆಯಾಗಿದೆ. ಕ್ರಿಕೆಟ್ ಪಂದ್ಯದ ಗೆಲುವನ್ನು ಆಪರೇಷನ್ ಸಿಂಧೂರದ ಜೊತೆಗೆ ಸಮೀಕರಿಸಿರುವ ಮೋದಿ ಅವರ ಮಾತಿಗೆ, ಕ್ರೀಡೆಯಲ್ಲಿ ಯುದ್ಧವನ್ನು ಎಳೆದುತರುವುದು ನಿಮ್ಮ ಹತಾಶೆಯನ್ನು ಬಹಿರಂಗಪಡಿಸುತ್ತದೆ ಎಂದು ಮೊಹ್ಸಿನ್ ಪ್ರತಿಕ್ರಿಯಿಸಿದ್ದಾರೆ. ಯುದ್ಧವು ನಿಮ್ಮ ಹೆಮ್ಮೆಯ ಸಂಕೇತವಾಗಿದ್ದರೆ, ಪಾಕಿಸ್ತಾನದಿಂದ ನೀವು ಅನುಭವಿಸಿದ ಅವಮಾನಕರ ಸೋಲುಗಳನ್ನು ಇತಿಹಾಸವು ಈಗಾಗಲೇ ದಾಖಲಿಸಿದೆ ಎಂದೂ ಹೇಳಿದ್ದಾರೆ. ಮೊಹ್ಸಿನ್ ಅವರ ಪ್ರತಿಕ್ರಿಯೆಯಲ್ಲೂ ಹತಾಶೆಯಿದೆ, ಕ್ರೀಡೆಯೊಂದಿಗೆ ರಾಜಕಾರಣವನ್ನು ತಳಕು ಹಾಕುವ ಪ್ರಯತ್ನವಿದೆ. ತಮ್ಮ ತಂಡದ ಆಟಗಾರರ ಅನುಚಿತ ವರ್ತನೆಯನ್ನು ಖಂಡಿಸದೆ, ಎದುರಾಳಿ ತಂಡದ ತಪ್ಪುಗಳ ಬಗ್ಗೆ ಮಾತನಾಡುವುದೂ ಕೆಟ್ಟ ಮಾದರಿಯ ರಾಜಕಾರಣವೇ ಆಗಿದೆ.

ಭಾರತದ ಆಟಗಾರರು ಆಟದ ಘನತೆಗೆ ಧಕ್ಕೆಯಾಗದ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸಬಹುದಿತ್ತು. ಟ್ರೋಫಿ ನಿರಾಕರಣೆಗಿಂತಲೂ, ಟ್ರೋಫಿಯನ್ನು ಪಡೆದ ನಂತರದ ಸಂದರ್ಶನಗಳಲ್ಲಿ ತಮ್ಮ ಪ್ರತಿಭಟನೆಯನ್ನು ದಾಖಲಿಸಬಹುದಾಗಿತ್ತು. ಕಪ್ಪು ಪಟ್ಟಿ ಧರಿಸಿ ಆಡುವ ಮೂಲಕ ವಿಶ್ವಕ್ಕೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಬಹುದಿತ್ತು. ಈ ಮೂಲಕ ಆಟದ ಗೆಲುವಿನೊಂದಿಗೆ ಕ್ರೀಡಾಸ್ಫೂರ್ತಿಯೂ ಉಳಿದಂತಾಗಿ, ಭಾರತದ ಆಟಗಾರರ ಪ್ರತಿಭಟನೆ ವಿಶ್ವದ ಗಮನಸೆಳೆಯುತ್ತಿತ್ತು. ಘನತೆಯಿಂದ ಪ್ರತಿಭಟಿಸುವ ಅವಕಾಶಗಳನ್ನು ಕೈಬಿಟ್ಟು, ಭಾರತದ ಕ್ರಿಕೆಟಿಗರು ಬಾಲಿಶವಾಗಿ ವರ್ತಿಸಿದ್ದಾರೆ; ಆಟಗಾರರೆನ್ನುವುದನ್ನು ಮರೆತು ಅಣಕು ಕಲಾವಿದರಂತೆ ವರ್ತಿಸಿದ್ದಾರೆ. ಈ ಹುಚ್ಚಾಟ ಕ್ರೀಡಾ ಇತಿಹಾಸದಲ್ಲಿ ಕೆಟ್ಟ ಮಾದರಿಯಾಗಿ ಉಳಿಯಲಿದೆ. ಆಟ ಮುಗಿದ ನಂತರ ಚಾಂಪಿಯನ್‌ಗಳು ಮಾತ್ರ ನೆನಪಿನಲ್ಲಿ ಉಳಿಯುತ್ತಾರೆ, ಟ್ರೋಫಿಯ ಚಿತ್ರವಲ್ಲ ಎಂಬ ಭಾರತ ತಂಡವನ್ನು ಮುನ್ನಡೆಸಿದ ಸೂರ್ಯಕುಮಾರ್ ಯಾದವ್ ಹೇಳಿಕೆಯೂ ಅಸಂಬದ್ಧವಾದುದು. ಜನರ ಮನಸ್ಸಿನಲ್ಲಿ ಉಳಿಯಲಿಕ್ಕೆ ಗೆಲುವಿನ ಜೊತೆಗೆ ನೈತಿಕ ನಡವಳಿಕೆಯೂ ಮುಖ್ಯ.

ಚಾಟಿ

ನಾಯಕ ಯಾರು?



ಸಂಕಟದ ಸಮಯದಲ್ಲಿ ಯಾರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದರಿಂದ ಅವರ ನಾಯಕತ್ವದ ಸಾಮರ್ಥ್ಯ ಗೊತ್ತಾಗುತ್ತದೆ. ನಿಜವಾದ ನಾಯಕನು ಜನರಿಗಾಗಿ ತಾನು ಮುಂದೆ ಬರುತ್ತಾನೆ. ಈ ಕ್ಷಣಕ್ಕೆ ವಿಜಯ್ ನಾಯಕನಲ್ಲ- ಅವರು ಬರೀ ಮತ್ತೊಬ್ಬ ಸಿನಿತಾರೆ ಅಷ್ಟೇ.

ಚೇತನ್ ಅಹಿಂಸಾ, ನಟ, 'ಎಕ್ಸ್'ನಿಂದ

ಕಿಡಿನುಡಿ



ನರೇಂದ್ರ ಮೋದಿ ನೇತೃತ್ವದ ಸರ್ಕಾರವೇ ಜಾತಿಗಣತಿ ಮಾಡಲು ಹೊರಟಿದೆ. ಕರ್ನಾಟಕದಲ್ಲಿ ಜಾತಿಗಳನ್ನು ಪರಿಗಣಿಸಿ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ವಿರೋಧಿಸುತ್ತಿರುವ ಬಿಜೆಪಿ ನಾಯಕರೇ, ನೀವು ಕೇಂದ್ರ ಸರ್ಕಾರದ ಜಾತಿಗಣತಿಯನ್ನೂ ವಿರೋಧಿಸುವಿರಾ?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 30-9-2000

• ಜೆಎಂಎಂ: ಪಿವಿಎನ್, ಬೂಟಾ ಶಿಕ್ಷಾರ್ಹರು

ನವದೆಹಲಿ, ಸೆ. 29- ಅಲ್ಪಮತ ಹೊಂದಿದ ತಮ್ಮ ಸರ್ಕಾರವನ್ನು ಅವಿಶ್ವಾಸ ಗೊತ್ತುವಳಿಯಿಂದ ರಕ್ಷಿಸಲು ಜೆಎಂಎಂ ಲೋಕಸಭಾ ಸದಸ್ಯರ ಮತ ಪಡೆಯಲು ಲಂಚ ನೀಡಿರುವ ಪ್ರಕರಣದಲ್ಲಿ ಆರೋಪಕ್ಕೊಳಗಾದ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಮಾಜಿ ಸಚಿವ ಬೂಟಾ ಸಿಂಗ್ ಶಿಕ್ಷಾರ್ಹ ಅಪರಾಧಿಗಳೆಂದು ವಿಶೇಷ ನ್ಯಾಯಾಲಯ ತೀರ್ಪು ನೀಡಿತು.

ಇದರಿಂದಾಗಿ ಭಾರತದ ರಾಜಕೀಯ ಮತ್ತು ನ್ಯಾಯಾಂಗ ಇತಿಹಾಸದಲ್ಲಿ ಮೊದಲ ಬಾರಿಗೆ ಮಾಜಿ ಪ್ರಧಾನಿಯೊಬ್ಬರು ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದಂತಾಗಿದೆ. ಇದೇ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಹರಿಯಾಣದ ಮಾಜಿ ಮುಖ್ಯಮಂತ್ರಿ ಭಜನ್ ಲಾಲ್, ಕರ್ನಾಟಕದ ಮಾಜಿ ಮಂತ್ರಿಗಳಾದ ಎಚ್.ಎಂ. ರೇವಣ್ಣ, ರಾಮಲಿಂಗಾರೆಡ್ಡಿ, ಮತ್ತಿತರರನ್ನು ಆರೋಪದಿಂದ ಖುಲಾಸೆಗೊಳಿಸಿತು.

75 ವರ್ಷಗಳ ಹಿಂದೆ

ಶನಿವಾರ, 30-9-1950

• ನೇಪಾಳ ಮಹಾರಾಜನ ಕೊಲೆ ಸಂಚು ವಿಫಲ

ನವದೆಹಲಿ, ಸೆ. 29- ನೇಪಾಳದ ಮಹಾರಾಜ, ಸಚಿವರು, ಸೇನಾ ಮುಖ್ಯಸ್ಥ ಸೇರಿದಂತೆ ಹಲವು ಪ್ರಮುಖರ ಕೊಲೆಗೆ ನಡೆಸಿದ್ದ ಸಂಚನ್ನು ವಿಫಲಗೊಳಿಸಿದ್ದು, ಸಂಚುಕೋರರನ್ನು ಕಠ್ಮಂಡುವಿನಲ್ಲಿ ಬಂಧಿಸಲಾಗಿದೆ ಎಂದು ಇಲ್ಲಿನ ನೇಪಾಳದ ರಾಯಭಾರಿ ಕಚೇರಿಯು ಪ್ರಕಟಣೆಯಲ್ಲಿ ತಿಳಿಸಿದೆ.

• ಭದ್ರತಾ ಮಂಡಳಿಗೆ ಹಾಲೆಂಡ್ ಮತ್ತು ಬ್ರೆಜಿಲ್

ನ್ಯೂಯಾರ್ಕ್, ಸೆ. 29- ಇಂದು ನಡೆದ ಚುನಾವಣೆಯಲ್ಲಿ ಹಾಲೆಂಡ್, ಬ್ರೆಜಿಲ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸದಸ್ಯ ರಾಷ್ಟ್ರಗಳಾಗಿ ಆಯ್ಕೆಯಾದವು.

ನಮ್ಮನ್ನು ಆಳುತ್ತಿರುವ ಕಥೆಗಳು



ವಿಶ್ಲೇಷಣೆ

ಎಸ್. ನಟರಾಜ ಬೂದಾಳು

ಸಂವಿಧಾನಕ್ಕೆ ಪರ್ಯಾಯದ ರೂಪದಲ್ಲಿ ಅನೇಕ ಕಥೆಗಳು ನಮ್ಮ ನಡುವೆ ಚಾಲ್ತಿಯಲ್ಲಿವೆ. ವಿವೇಕ ತೂಕಡಿಸತೊಡಗಿ, ಕಥೆಗಳನ್ನು ಮುಗ್ಧವಾಗಿ ನಂಬುತ್ತಾ ಹೋದರೆ ಅಪಾಯ ತಪ್ಪಿದ್ದಲ್ಲ. ಸಂವಿಧಾನದ ಬಗ್ಗೆ ಕಾಳಜಿಯುಳ್ಳವರು, ಎಲ್ಲವನ್ನೂ ಕಥೆಯಾಗಿಸುವ ಪ್ರಯತ್ನಗಳನ್ನು ಅನುಮಾನದಿಂದ ನೋಡಬೇಕು. ವಿಜ್ಞಾನ ಹಾಗೂ ಸಂವಿಧಾನ ನಮ್ಮ ಜೊತೆಯಲ್ಲಿ ಇರಬೇಕೇ ಹೊರತು, ಕಥೆಗಳಲ್ಲ.

ಭಾರತ ಕಥೆಗಳ ದೇಶ. ಯಾರೋ ಎಂದೋ ಹೇಳಿರುವ ಮತ್ತು ಕೆಲವರು ಈಗ ಹೇಳುತ್ತಿರುವ ಕಥೆಗಳು ನಮ್ಮನ್ನು ಆಳುತ್ತಿವೆ. ನಮಗೊಂದು ಸಂವಿಧಾನ ಇದೆ; ಅದು ನಮ್ಮನ್ನು ನಿಯಂತ್ರಿಸುತ್ತಿದೆ ಎಂಬುದು ನಮ್ಮ ಸಾಮಾನ್ಯ ನಂಬುಗೆ. ಆದರೆ ನಮ್ಮನ್ನು ನಿಯಂತ್ರಿಸುತ್ತಿರುವ ಮತ್ತೊಂದು ಸಾಂಸ್ಕೃತಿಕ ಸಂವಿಧಾನವೂ ಇದೆ. ಅದು ನಮ್ಮೆದುರಿಗೆ ಕೆಲವು ಕಥೆಗಳನ್ನು ಇಟ್ಟು ನಮ್ಮನ್ನು ನಿಯಂತ್ರಿಸುತ್ತದೆ. ರಾಮಾಯಣ, ಮಹಾಭಾರತ, ಸ್ವರ್ಗ ನರಕದ ಕಥೆಗಳು, ರಾಜಮಹಾರಾಜರ ಕಥೆಗಳು, ಪಾಪಪುಣ್ಯದ ನೂರಾರು ಕಥೆಗಳು, ಒಂದಷ್ಟು ಭಕ್ತಿಯ ಕಥೆಗಳು- ಇವುಗಳ ಮೂಲಕ ನಮ್ಮನ್ನು ಆಳುತ್ತದೆ.

ಈ ದೇಶದಲ್ಲಿ ಯಾರನ್ನು ಕೇಳಿದರೂ ಕಥೆ ಹೇಳುತ್ತಾರೆ. ಅದೂ ಆ ಕಥೆ ನಡೆಯುವಾಗ ತಾನೇ ಎದುರಿಗೆ ಇದ್ದೆ ಅನ್ನುವಂತೆ ಹೇಳುತ್ತಾರೆ. ನಮಗೆ ಕಥೆ ಮತ್ತು ವಾಸ್ತವ, ಪುರಾಣ ಮತ್ತು ಚರಿತ್ರೆಯ ನಡುವಿನ ವ್ಯತ್ಯಾಸ ಗೊತ್ತಿಲ್ಲ. ಹಾಗಾಗಿ ಕೆಲವು ಕಥೆಗಳು ಸಂವಿಧಾನದ ಜಾಗ ಆಕ್ರಮಿಸಿಕೊಳ್ಳುತ್ತಿವೆ. ಸಂವಿಧಾನ ಉಳಿಯಬೇಕಾದರೆ ಕಥೆಗಳನ್ನು ಅನುಮಾನದಿಂದ ನೋಡಬೇಕಾಗಿದೆ.

ಕಥೆಗಳನ್ನು ಕೇಳುತ್ತ ಕೇಳುತ್ತ ಮನುಷ್ಯ ನಿಜವನ್ನು ಕಳೆದುಕೊಳ್ಳುತ್ತಾನೆ. ಕಥೆಗಳಿದ್ದರೆ ಸಾಕು, ನಿಜವೇ ಬೇಡ ಎನ್ನುವಂತಾಗುತ್ತದೆ. ಮಂಡಲ ಪಂಚಾಯಿತಿಯಿಂದ ಲೋಕಸಭೆಯವರೆಗೆ ಕಥೆಗಳು ತಮ್ಮ ಜಾಲವನ್ನು ಹರಡಿವೆ. ಅವೀಗ ಬೀದಿಬೀದಿಯಲ್ಲಿ ಮೆರವಣಿಗೆ ಹೊರಟಿವೆ. ಭಾರತದ ಬೀದಿ ಬೀದಿಗಳಲ್ಲಿ ನಡೆಯುತ್ತಿರುವ ಹೊಡೆದಾಟಗಳು, ಕಗ್ಗೊಲೆಗಳು, ದುಷ್ಕೃತ್ಯಗಳು, ಧರ್ಮದ ವ್ಯಾಪಾರಗಳ ಹಿಂದೆ ಇಂತಹ ಅನೇಕ ಕಥೆಗಳಿವೆ!

ಕಥೆಗಳು ಕೇವಲ ಕಥೆಗಳಲ್ಲ. ಪ್ರತಿ ಕಥೆಯ ಹಿಂದೆ ರಾಜಕಾರಣ ಮತ್ತು ಸಾಂಸ್ಕೃತಿಕ ರಾಜಕಾರಣ ಎರಡೂ ಇರುತ್ತವೆ. ಯಾರೂ ಸುಮ್ಮಸುಮ್ಮನೆ ಕಥೆ ಹೇಳುವುದಿಲ್ಲ. ಯಾವ ಕಥೆಯನ್ನು ಯಾರಿಗೆ ಯಾವಾಗ ಹೇಳಬೇಕು ಎನ್ನುವ ತೀರ್ಮಾನ ದೊಡನೆಯೇ ಹೇಳುತ್ತಾರೆ. ಈ ನೆಲದಲ್ಲಿ ಕಥೆಗಳನ್ನು ಹುಟ್ಟಿಸಿ, ಸಾಕಿ, ಅವು ಬಲಿಷ್ಠವಾದ ಮೇಲೆ ಸಾಮಾನ್ಯರ ಮೇಲೆ ಛೂಬಿಡುವ ತಂಡಗಳೇ ಇವೆ. ತಾವು ಹೇಳಿದ ಕಥೆಯನ್ನು ಕೇಳಿಸಿಕೊಂಡವರು ಏನಾಗುತ್ತಾರೆ ಎಂದು ಅವರಿಗೆ ಗೊತ್ತಿರುತ್ತದೆ. ಅಂತಿಮವಾಗಿ ಕಥೆ ಪರಿಣಮಿಸುವುದು ಕೇಳುಗರಲ್ಲಿ, ಹೇಳಿದವರಲ್ಲಿ ಅಲ್ಲ! ಹಾಗಾಗಿ ಅದರ ಪರಿಣಾಮವೇನಿದ್ದರೂ ಕೇಳುಗರ ಮೇಲೆ ಆಗುತ್ತದೆಯೇ ಹೊರತು ಹೇಳಿದವರಿಗೆ ಆಗುವುದಿಲ್ಲ. ಹಾಗಾದರೆ ಕಥೆ ಕೇಳುವ ಸಾಮಾನ್ಯರ ಪಾಡೇನು? ಒಂದೇ ಪರಿಹಾರ: ವಾಸ್ತವವನ್ನು ಕಂಡುಕೊಳ್ಳಲು ಒಂದೋ ಕಥೆಗಳನ್ನು ತಿರಸ್ಕರಿಸಿ ಅಥವಾ ಕಥೆಗಳನ್ನು ಕಥೆಗಳೆಂದು ಮಾತ್ರವೇ ಕೇಳಿಸಿಕೊಳ್ಳಿ, ಪ್ರತಿಕ್ರಿಯಿಸಬೇಡಿ.

ಭಾರತದ ಸಂದರ್ಭದಲ್ಲಿ ಕಥೆಯ ರಾಜಕಾರಣವನ್ನು ಬಲ್ಲವರು ಅದನ್ನು ತುಂಬಾ ಎಚ್ಚರದಿಂದ ನಿರ್ವಹಿಸಿದ್ದಾರೆ. ಬುದ್ಧ ಕಥೆ ಹೇಳಲಿಲ್ಲ, (ಬುದ್ಧನನ್ನು ಕುರಿತು ನಂತರ ಸಾವಿರಾರು ಕಥೆಗಳು ಸೃಷ್ಟಿಯಾದವು!), ಬಸವಣ್ಣನಾಗಲೀ ಬೇರೆ ವಚನಕಾರರಾಗಲೀ ಕಥೆ ಹೇಳಲಿಲ್ಲ, ವಚನಗಳಲ್ಲಿ ರಾಮಾಯಣ ಮಹಾಭಾರತಗಳ ಸೊಲ್ಲಿಲ್ಲ, ತತ್ವಪದಕಾರರು ಕಥೆ ಹೇಳಲಿಲ್ಲ, ಅಂಬೇಡ್ಕರ್ ಕಥೆ ಹೇಳಲಿಲ್ಲ; ವಿಜ್ಞಾನ ಕಥೆ ಹೇಳುವುದಿಲ್ಲ; ಸಂವಿಧಾನ ಕಥೆ ಹೇಳುವುದಿಲ್ಲ. ಹಾಗಾದರೆ ಕಥೆ ಹೇಳುವವರು ಯಾರು? ಯಾವ ಕಥೆಗಳನ್ನು, ಯಾಕೆ ಯಾರಿಗೆ, ಯಾವಾಗ ಹೇಳುತ್ತಾರೆ? ಇವೆಲ್ಲ ಕಥೆಯ ಹಿಂದಿನ ರಾಜಕಾರಣವನ್ನು ನಿರ್ಧರಿಸುತ್ತವೆ. ಹಾಗಾದರೆ ಕಥೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು?

'ಲೋಕವನ್ನು ಅದು ಇರುವಂತೆ ನೋಡಿ. ಆಗ ಮಾತ್ರ ನಿಮ್ಮ ಮತ್ತು ಲೋಕದ ಸಂಬಂಧವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ತಪ್ಪಾಗಿ ಅರ್ಥಮಾಡಿಕೊಂಡು ನಡೆದುಕೊಂಡರೆ ಅದು ದುಃಖಕ್ಕೆ ಕಾರಣವಾಗುತ್ತದೆ' ಇದು ಬುದ್ಧ ತಿಳಿಸಿದ ದುಃಖಕಾರಣ. ಮಹಾಮೌನವೇ ಅವನು ಕಥೆಗಳಿಗೆ ನೀಡಿದ ಪ್ರತಿಕ್ರಿಯೆ. ಲೋಕವನ್ನು ಕಥೆಗಳ ಮೂಲಕ ವಿವರಿಸಿಕೊಡುವ ಧರ್ಮಗಳ ಹಿಡಿತದಲ್ಲಿ ಲೋಕ ನರಳುತ್ತಿದೆ. ಭಾರತವೂ ಅದಕ್ಕೆ ಹೊರತಲ್ಲ. ಸಾವಿರಾರು ವರ್ಷಗಳಿಂದ ಈ ನೆಲವನ್ನು ಕೆಲವೇ ಕೆಲವು ಕಥೆಗಳು ಆಳುತ್ತ ಬಂದಿವೆ. ಅಂತಹ ಕಥೆಗಳಿಗೆ ಪ್ರತಿ ಕಥೆಗಳನ್ನು ಕಟ್ಟಿ ಹೇಳುವ ಇನ್ನೊಂದು ತುದಿಯ ರಾಜಕಾರಣ ಕೂಡಾ ನಮ್ಮ ನಡುವೆ ಇದೆ. ಇದೊಂದು ದುರ್ಬಲ ಸಾಂಸ್ಕೃತಿಕ ರಾಜಕಾರಣ. ಈ ಎರಡೂ ತುದಿಗಳು ನಮ್ಮನ್ನು ನಿಜದಿಂದ ಆಚೆಗೆ ಕರೆದುಕೊಂಡು ಹೋಗುತ್ತವೆ. ಹಾಗಾಗಿ ಲೋಕವನ್ನು ಅದು ಇರುವಂತೆಯೇ ನೋಡಲು ಕಥೆಗಳನ್ನು ನಿವಾರಿಸಿಕೊಳ್ಳದೆ ಬೇರೆ ದಾರಿಯಿಲ್ಲ.

ಕಥೆಗಳಿಗೆ ಜನರೇಕೆ ಮರುಳಾಗುತ್ತಾರೆ? ಮನುಷ್ಯನಿಗೆ ಬಂದಿರುವ ಹುಟ್ಟಾ ಕುತೂಹಲ ಹಾಗೆ ಮಾಡುತ್ತದೆ. ಅದೊಂದು ಸಹಜ ನಡೆ. ನಿಜವನ್ನು ಅರಿತುಕೊಳ್ಳಲೂ ಅದೇ ಬೇಕು. ಆದರೆ ಕಥೆಗಳು ಆ ಕುತೂಹಲವನ್ನೇ ಬಳಸಿಕೊಂಡು ನಿಜದ ಮೇಲೆ ಕವುಚಿಕೊಳ್ಳುವ ಗುಡಾರಗಳಾಗುತ್ತವೆ. ಮಹಾಮರೆವಿನ ಆವರಣಗಳಾಗುತ್ತವೆ. ನಮ್ಮೊಳಗಿನ ಪ್ರಜ್ಞೆಯನ್ನು ನಿಷ್ಕ್ರಿಯಗೊಳಿಸುತ್ತವೆ. ಕಳೆದುಕೊಂಡ ಮೇಲೆ ಕೆಲವರಲ್ಲಿ ಮಾತ್ರ ನಮ್ಮನ್ನು ನಾವು ಕಂಡುಕೊಳ್ಳುವ ಹೋರಾಟ ಶುರುವಾಗುತ್ತದೆ. ಅಂತಹ ಹೋರಾಟಗಳನ್ನು ಮುನ್ನಡೆಸುವ ಚಿಂತನಾಧಾರೆಗಳು ಹುಟ್ಟಿಕೊಳ್ಳುತ್ತವೆ. ಹಾಗಾಗಿ ಇದು ನಾವಾಗಿ ಗುಹೆಯ ಒಳಗೆ ಹೋಗಿ ಸಿಲುಕಿ ನಂತರ ಹೊರಬರುವ ಹೋರಾಟವಾಗುತ್ತದೆ. ಇದಕ್ಕೆ ಬುದ್ಧ ನೀಡಿದ ಅತ್ಯಂತ ಸೂಕ್ತ ಪರಿಹಾರವೆಂದರೆ: 'ಗುಹೆಯ ಒಳಕ್ಕೆ ಹೋಗಬೇಡಿ!' ಕೋಟ್ಯಂತರ ಜನ ಹೋಗುತ್ತಲೇ ಇದ್ದಾರಲ್ಲ ಎನ್ನುವುದು ಸಮಜಾಯಿಷಿ ಅಲ್ಲ!

ಚಾರಿತ್ರಿಕ ಸಂದರ್ಭದ ಕಾರಣದಿಂದಾಗಿ ನಾವೀಗ ವಿಜ್ಞಾನದ ನಟ್ಟನಡುವೆ ಬದುಕುತ್ತಿದ್ದೇವೆ. ಆದರೂ ವಿವೇಕ ಮತ್ತು ಮೌಢ್ಯಗಳ ನಡುವೆ ನಡೆಯುತ್ತಿರುವ ತೀವ್ರ ಸಂಘರ್ಷಕ್ಕೂ ಸಾಕ್ಷಿಯಾಗಿದ್ದೇವೆ. ಸುಳ್ಳು-ನಿಜಗಳನ್ನು ಬೇರ್ಪಡಿಸಿಕೊಳ್ಳಲು ಅಷ್ಟೇನೂ ಪರದಾಡಬೇಕಿಲ್ಲ. ಆದರೆ ಕಥೆಗಳು ನಮ್ಮನ್ನು ನಿಜದ ಜೊತೆಗೆ ಬದುಕಲು ಬಿಡುತ್ತಿಲ್ಲ. ಸುಳ್ಳು-ಸತ್ಯ ಎರಡನ್ನೂ ಸೇರಿಸಿ ನುಣ್ಣಗೆ ಅಗಿದು ದವಡೆಗೆ ಒತ್ತರಿಸಿಕೊಂಡು ಬದುಕುವ ಇಬ್ಬಂದಿಯನ್ನು ರೂಢಿಸಿಕೊಂಡಿದ್ದೇವೆ. ನಮ್ಮ ನಡುವಿನ ಎಷ್ಟೋ ವಿಜ್ಞಾನಿಗಳೂ ಪೊಳ್ಳು ಕಥೆಗಾರರಾಗಿದ್ದಾರೆ!

ಕಥೆಗಳು ವಿಜ್ಞಾನವನ್ನೂ ತಮ್ಮ ಅನುಕೂಲಕ್ಕೆ ತಕ್ಕಂತೆ ನಿಭಾಯಿಸಬಲ್ಲ ಚಾಲಾಕಿತನವನ್ನು ರೂಢಿಸಿಕೊಂಡಿವೆ; ವಿಜ್ಞಾನವೂ ನಾವು ಕಟ್ಟಿದ ಕಥೆಯೇ ಎನ್ನುತ್ತವೆ! ವಾಸ್ತವವನ್ನು ಇದಿರಾಗಿ, ಕಥೆಗಳನ್ನಲ್ಲ ಎಂದ ಬುದ್ಧನ ಬಗೆಗೂ ಕಥೆ ಕಟ್ಟುತ್ತವೆ; ಅಂಬೇಡ್ಕರ್ ಅವರ ಸರದಿಯೂ ಮುಂದಿದೆ!

ಕಥೆಗಳಿಗೆ ಈ ಶಕ್ತಿ ಎಲ್ಲಿಂದ ಬರುತ್ತದೆ? ಎಲ್ಲ ಕಥೆಗಳೂ ಹೀಗೆ ನಮ್ಮನ್ನು ನಿಯಂತ್ರಿಸಬಲ್ಲವೆ? ಜಗತ್ತಿನ ಅನೇಕ ಮಹಾನ್ ಕಥೆಗಾರರು ನೂರಾರು ಕಥೆಗಳ ಮೂಲಕ ತಮ್ಮ ತಾತ್ವಿಕತೆಯನ್ನು ಮುಂದಿಟ್ಟಿದ್ದಾರಲ್ಲವೆ? ಮುಂತಾದ ಪ್ರಶ್ನೆಗಳು ಇದಿರಾಗುತ್ತವೆ. ಯಾವ ಕಥೆಗಳು ಧಾರ್ಮಿಕತೆಯ ಭಾಗವಾಗುತ್ತವೆಯೋ ಅವುಗಳಿಗೆ ಆಯಾ ಧರ್ಮಗಳು ಇಂತಹ ರಾಕ್ಷಸ ಶಕ್ತಿಯನ್ನು ಒದಗಿಸುತ್ತವೆ. ರಾಕ್ಷಸ ಎನ್ನುವುದು ಕೂಡ ಕಥೆಯೆ! ಅವೆಲ್ಲ ಮಹಾನಿರೂಪಣೆಗಳಾಗಿ ರೂಪಾಂತರ ಪಡೆದುಕೊಳ್ಳುತ್ತವೆ. ಕಥೆಗಳು ಯಾವುದಾದರೂ ಒಂದು ಧರ್ಮಕ್ಕೆ ಲಗತ್ತಾದ ತಕ್ಷಣವೇ ಪ್ರಶ್ನಾತೀತ ಪ್ರಮಾಣಗಳಾಗಿ ಅಧಿಕಾರ ನಡೆಸಲಾರಂಭಿಸುತ್ತವೆ. ಮಹಾನ್ ನಿರೂಪಣೆಗಳೆಂದು ಕರೆಯುವ ಇಂತಹ ಕಥೆಗಳ ಆಕರಗಳು ವಿಶ್ವದಾದ್ಯಂತ ಇವೆ. ಎಲ್ಲ ಧರ್ಮಗಳೂ ತಮ್ಮ ತಾತ್ವಿಕತೆಯ ಜೊತೆಗೆ ಇಂತಹ ಕಥೆಗಳ ಆಕರಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಒಮ್ಮೆ ಧರ್ಮಕ್ಕೆ ಲಗತ್ತಾದರೆ ನಂತರ ಕಥೆಗಳದ್ದೇ ಯಜಮಾನಿಕೆ. ತಾತ್ವಿಕತೆ ಮೂಲೆಗುಂಪಾಗುತ್ತದೆ! ಇನ್ನು ಹಿಂದೂ ಧರ್ಮ ಎಂದು ಕರೆದುಕೊಂಡಿರುವ ನಮ್ಮ ಧರ್ಮದ ಪಾಡು ಇನ್ನೂ ವಿಚಿತ್ರವಾಗಿದೆ. ನಮಗೆ ಇದು ನಮ್ಮ ಧರ್ಮದ ತಾತ್ವಿಕ ಆಕರ ಎಂದು ಹೇಳಿಕೊಳ್ಳುವ ಆಕರವೇ ಇಲ್ಲ! ಬರೀ ಕಥೆಗಳಿವೆ! ಮತ್ತೂ ಕೇಳಿದರೆ ನಮ್ಮನ್ನು ಒಳಕ್ಕೇ ಬಿಟ್ಟುಕೊಳ್ಳದ ವೈದಿಕ ಆಕರಗಳನ್ನು ಹೇಳುತ್ತಾರೆ.

ಇನ್ನು ಈ ಮಹಾನಿರೂಪಣೆಗಳಿಗೆ ಪ್ರತಿನಿರೂಪಣೆಗಳನ್ನು ಕಟ್ಟಿ ನಿರ್ವಹಿಸುವ ಸಾಂಸ್ಕೃತಿಕ ಪ್ರತಿರಾಜಕಾರಣ ಆಗಾಗ್ಗೆ ಬಂಡೇಳುತ್ತ ತನ್ನ ಸಿಟ್ಟನ್ನು ತೋರಿಸುತ್ತಿರುತ್ತದೆ. ಇಲ್ಲೂ ಕಥೆಗಳಿಗೆ ಪ್ರತಿಕಥೆಗಳು ಹುಟ್ಟಿಕೊಳ್ಳುತ್ತವೆ. ಇವುಗಳಿಗೆ ಕಾಲುದಾರಿ ಕಥನಗಳು ಎನ್ನುವ ದೇಸಿ ದೈನೇಸಿ ಅವಸ್ಥೆ ಪ್ರಾಪ್ತವಾಗುತ್ತದೆ. ಒಟ್ಟಿನಲ್ಲಿ ಇರುವ ಕಥೆಗಳಿಗೆ ಮತ್ತಷ್ಟು ಸೇರಿಕೊಳ್ಳುತ್ತವೆ. ಅಂಚಿನಲ್ಲೇ, ಕಾಲುದಾರಿಗಳಲ್ಲೇ ನಡೆದಾಡುವ ಈ ಪ್ರತಿಕಥೆಗಳನ್ನು ಮಹಾನಿರೂಪಣೆಗಳು ತಮ್ಮ ಮೇಲಿನ ಪ್ರತಿರೋಧವನ್ನು ತಡೆಯುವ ತಡೆಗೋಡೆಗಳಂತೆ ಕಾಪಾಡಿಕೊಳ್ಳುತ್ತವೆ! ಬೇಡವೆನ್ನಿಸಿದಾಗ ನುಂಗಿ ನೊಣೆಯುತ್ತವೆ!

ಕಥೆಗಳ ಪರಿಣಾಮವನ್ನು ಕುರಿತಾದ ಮೀಮಾಂಸೆಯ ನಿಲುವುಗಳು ಏನೇ ಇದ್ದರೂ, ಅವು ನಮ್ಮನ್ನು ವಾಸ್ತವದಿಂದ ದೂರ ಕರೆದುಕೊಂಡು ಹೋಗುತ್ತವೆ ಎನ್ನುವುದನ್ನು ನಿರಾಕರಿಸಲಾಗದು. ಹಾಗಾಗಿ ಕಥೆಗಳನ್ನು ನಿರಾಕರಿಸಿ. ಕಥೆಗಳಿಲ್ಲದ ಭಾರತವನ್ನು ಒಮ್ಮೆ ಕಲ್ಪಿಸಿಕೊಳ್ಳಿ. ನಿಜವಾದ ಭಾರತವನ್ನು ಕಂಡುಕೊಳ್ಳಲು ಕಥೆಗಳನ್ನು ದಾಟಿ ನೋಡಬೇಕಾದ ಅಗತ್ಯವಿದೆ ಮತ್ತು ಕಥೆಗಳನ್ನು ನಂಬಿಕೊಂಡು ಅವುಗಳ ಮೂಲಕ ರಾಜಕಾರಣ ಮಾಡುವವರಿಗೆ ತಕ್ಕುದಾದ ಪ್ರತಿಕ್ರಿಯೆ ನೀಡಬೇಕಾಗಿದೆ. ಕಥೆಗಳು ನಮ್ಮನ್ನು ಮಾತ್ರ ವಾಸ್ತವದಿಂದ ದೂರ ಮಾಡಿಲ್ಲ; ವಿಶ್ವದ ಬಹುಪಾಲು ದೇಶಗಳ ಸ್ಥಿತಿಯೂ ಅದೇ ಆಗಿದೆ. ಯಾರೋ ಎಂದೋ ಹೇಳಿದ ಕಥೆಗಳನ್ನು ನಂಬಿ ಬದುಕುವವರ ಪಾಡೆಲ್ಲ ಸಂಕಟದಲ್ಲಿ ಮುಳುಗಿದೆ. ಆದುದರಿಂದ ಕಥೆಗಳನ್ನು ತಿರಸ್ಕರಿಸಿ! ವಾಸ್ತವ ಬದುಕಲಿ, ಕಥೆ ಅಳಿಯಲಿ. ವಿಜ್ಞಾನ ಬೆಳೆಯಲಿ; ಸಂವಿಧಾನ ಉಳಿಯಲಿ.



ವಾಚಕರ ವಾಣಿ

ಎಲ್ಲೆಲ್ಲೂ ಜನ! ಪುಸ್ತಕಮೇಳ ಭಣಭಣ!

ದಸರಾ ಸಂದರ್ಭದಲ್ಲಿ ಮೈಸೂರು ಮದುವಣಗಿತ್ತಿಯಂತೆ ಸಿಂಗಾರಗೊಳ್ಳುತ್ತದೆ. ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ಲಲಿತಕಲೆಗಳ ಪ್ರದರ್ಶನ, ವಸ್ತು ಪ್ರದರ್ಶನ ಹಾಗೂ ಇನ್ನಿತರ ಕಣ್ಮನ ಸೆಳೆಯುವ ಮತ್ತು ಮನರಂಜನೆಯ ಕಾರ್ಯಕ್ರಮಗಳು ಪ್ರಸ್ತುತ ದಸರೆಯಲ್ಲಿ ಜರುಗುತ್ತಿವೆ. ಎಲ್ಲೆಲ್ಲೂ ಜನಜಂಗುಳಿ. ಆದರೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ನಡೆಯುತ್ತಿರುವ ಪುಸ್ತಕ ಮೇಳದಲ್ಲಿ ನಿರೀಕ್ಷೆಯ ಮಟ್ಟದಲ್ಲಿ ಜನರೇ ಇಲ್ಲ.

ಯುವಸಮೂಹ ಸಾಮಾಜಿಕ ಮಾಧ್ಯಮಗಳಿಂದ ಪ್ರಭಾವಿತಗೊಂಡಿದೆ. ಯುವಜನರು ಕನ್ನಡ ಪುಸ್ತಕ ಓದುವ ಹವ್ಯಾಸ ಮತ್ತು ಸಾಹಿತ್ಯಾಸಕ್ತಿಯನ್ನೂ ಬೆಳೆಸಿಕೊಂಡರೆ ಕನ್ನಡ ಭಾಷೆಯ ಉಳಿವು, ಬೆಳವಣಿಗೆಗೆ ಪುಷ್ಟಿ ದೊರೆತಂತಾಗುತ್ತದೆ.

ದರ್ಶನ್ ಚಂದ್ರ ಎಂ.ಪಿ., ಮೈಸೂರು

ಕಸಾಪ ಮತ್ತು ಸರ್ವಾಧಿಕಾರಿ ಧೋರಣೆ

ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ, ಸದಸ್ಯರು ಪಾಲಿಸಬೇಕಾದ ನಿಯಮಗಳು/ ಷರತ್ತುಗಳನ್ನು, ಕಸಾಪ ಅಧ್ಯಕ್ಷರು ಗೊತ್ತುಪಡಿಸಿರುವುದು ವರದಿಯಾಗಿದೆ (ಪ್ರ.ವಾ., ಸೆ. 29). ಈ ಷರತ್ತುಗಳು, ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರುವುದರ ಬಗ್ಗೆ ಸಂದೇಹ ಉಂಟುಮಾಡುವಂತಿವೆ. ಜನರಿಂದ ಆಯ್ಕೆಯಾದ ಅಧ್ಯಕ್ಷರು, ಸಭೆಯಲ್ಲಿ ಭಾಗವಹಿಸುವ ಸದಸ್ಯರಿಗೆ ಷರತ್ತುಗಳನ್ನು ವಿಧಿಸಿರುವುದು, ಅದರಲ್ಲೂ ಸದಸ್ಯರು 'ಏರುದನಿಯಲ್ಲಿ ಮಾತನಾಡಬಾರದು' ಎನ್ನುವ ಷರತ್ತು ಸರ್ವಾಧಿಕಾರಿ ಧೋರಣೆಯ ಪ್ರತೀಕ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಸಾವಿನ ಮನೆಯಲ್ಲಿ ಸತ್ತವರೇ ಕೆಟ್ಟರು

ತಮಿಳುನಾಡಿನಲ್ಲಿ ಟಿವಿಕೆ ಪಕ್ಷದ ಮುಖ್ಯಸ್ಥ ವಿಜಯ್ ಅವರ ರ‍್ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತದಿಂದ 41 ಜನರ ಸಾವು ಸಂಭವಿಸಿದೆ. ಇತ್ತೀಚಿನ ದಿನಗಳಲ್ಲಿ ಇಂಥ ಸಾವಿನ ಸುದ್ದಿಗಳು ಸಾಮಾನ್ಯ. ನದೀ ಸ್ನಾನ ಘಟ್ಟಗಳಲ್ಲಿ, ಆಟದ ಮೈದಾನಗಳಲ್ಲಿ, ರಾಜಕಾರಣಿಗಳ ಸಭೆ ಸಮಾರಂಭ ಗಳಲ್ಲಿ, ದೇವರ ರಥ, ಮೆರವಣಿಗೆ ಸಂದರ್ಭದಲ್ಲಿ, ಕಡೆಗೆ ಸತ್ತವರ ಸಂಸ್ಕಾರಗಳಿಗೂ ಭಾವಪರವಶರಾಗಿ ಹೋಗುವ ಜನರು ನೂಕುನುಗ್ಗಲಿಗೆ ಸಿಕ್ಕಿ ಕಾಲ್ತುಳಿತದಿಂದ ಸಾವಿಗೀಡಾಗುತ್ತಿರುವ ಸಂಖ್ಯೆ ಹೆಚ್ಚುತ್ತಿದೆ.

ನೂಕುನುಗ್ಗಲಿನ ಸಭೆ ಸಮಾರಂಭಗಳಿಗೆ ಹೋಗುವ ಮೊದಲು ಒಂದು ಕ್ಷಣ ನಾವಲ್ಲಿಗೆ ಹೋಗಬಹುದೇ ಎಂದು ಯೋಚಿಸುವುದು ಅಗತ್ಯ. ನಮ್ಮ ಜೀವಕ್ಕೆ ನಾವೇ ಜವಾಬ್ದಾರರು; ಯಾವ ದೈವ, ಯಾವ ರಾಜಕಾರಣಿ, ಯಾವ ಕ್ರೀಡಾಳು, ಯಾರೂ ಜವಾಬ್ದಾರರಲ್ಲ ಎಂಬುದನ್ನು ಮರೆಯಬಾರದು! ಹೋದ ಜೀವ ವಾಪಾಸು ಬರುವುದಿಲ್ಲ. ಎಷ್ಟೇ ಪರಿಹಾರ ಕೊಟ್ಟರೂ ಪ್ರಯೋಜನವಿಲ್ಲ. 'ಸಾವಿನ ಮನೆಯಲ್ಲಿ ಯಾರು ಕೆಟ್ಟರು ಎಂದರೆ ಸತ್ತವರೇ ಕೆಟ್ಟರು' ಎಂಬುದು ಗಾದೆ!

ಪ್ರೊ. ಶಿವರಾಮಯ್ಯ, ಬೆಂಗಳೂರು

ಉದ್ಧಟ ವರ್ತನೆ; ದುಶ್ಶಾಸನನ ನೆನಪು

ಜಾಣಗೆರೆ ವೆಂಕಟರಾಮಯ್ಯ ಹಾಗೂ ಡಾ. ವಸುಂಧರಾ ಭೂಪತಿ ಅವರು ಸಭೆಗೆ ಬಂದರೆ ಕುತ್ತಿಗೆ ಹಿಡಿದು ಹೊರದಬ್ಬುತ್ತೇವೆ ಎನ್ನುವ ಬಾಗಲಕೋಟೆ ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರ ಹೇಳಿಕೆ ಅಹಂಕಾರದ್ದು ಮಾತ್ರವಲ್ಲ, ಉದ್ಧಟತನದ ಪರಮಾವಧಿಯೂ ಹೌದು. ಕಸಾಪ ಅಧ್ಯಕ್ಷರ ಕುಮ್ಮಕ್ಕಿನಿಂದಲೇ ಇಂತಹ ಹೇಳಿಕೆಗಳು ಬರಲು ಸಾಧ್ಯ! ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ ಈ ರೀತಿಯ ಹೇಳಿಕೆಯನ್ನು ಯಾರೂ ನೀಡಿರಲಿಕ್ಕಿಲ್ಲ.

ಜಾಣಗೆರೆ ವೆಂಕಟರಾಮಯ್ಯನವರು ಹಿರಿಯ ಚಿಂತಕರು ಹಾಗೂ ಕನ್ನಡಪರ ಹೋರಾಟಗಾರರು, ವಸುಂಧರಾ ಭೂಪತಿಯವರು ವೈದ್ಯೆ, ಸಾಹಿತಿ, ಚಿಂತಕಿ. ಒಬ್ಬ ಮಹಿಳೆಯನ್ನು ಕುತ್ತಿಗೆ ಹಿಡಿದು ದಬ್ಬುತ್ತೇನೆ ಎಂಬ ಹೇಳಿಕೆ ಕುರುಕ್ಷೇತ್ರದ ದುಶ್ಶಾಸನನನ್ನು ನೆನಪಿಸುತ್ತಿದೆ. ಇಂಥವರೆಲ್ಲ ಸಾಹಿತ್ಯ ಪರಿಷತ್ತಿನಲ್ಲಿರುವುದು ಪರಿಷತ್ತಿಗಷ್ಟೇ ಅಲ್ಲ, ಬಾಗಲಕೋಟೆ ಸಾಹಿತ್ಯಾಭಿಮಾನಿಗಳಿಗೂ ಅಗೌರವ. ಸಾಹಿತ್ಯ ಪರಿಷತ್ತು ಸರ್ಕಾರದ ಅನುದಾನದಿಂದ ನಡೆಯುತ್ತಿರುವ ಸಂಸ್ಥೆಯಾಗಿದ್ದು, ಈ ರೀತಿಯ ಕೆಟ್ಟ ಬೆಳವಣಿಗೆಯ ಬಗ್ಗೆ ಸರ್ಕಾರ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು.

ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ; **ಈ. ಬಸವರಾಜು,** ಬೆಂಗಳೂರು

ಮದ್ಯ ಮಾರಾಟ ಹೆಚ್ಚಳವೂ ದಾಖಲೆಯೆ?

ಮದ್ಯ ಮಾರಾಟದಲ್ಲಿ ಕರ್ನಾಟಕಕ್ಕೆ ಮೊದಲ ಸ್ಥಾನದ ವರದಿ (ಪ್ರ.ವಾ., ಸೆ. 29) ಓದಿ ಆಶ್ಚರ್ಯವಾಯಿತು. ರಾಜ್ಯ ಸರ್ಕಾರದ ಬೊಕ್ಕಸ ತುಂಬಿಸಲು ಅಬಕಾರಿ ಇಲಾಖೆಯ ಕೊಡುಗೆ ಅಪಾರವಾಗಿರಬಹುದು. ಆದರೆ, ಮದ್ಯ ಮಾರಾಟದ ದಾಖಲೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸ್ವಾಸ್ಥ್ಯದ ಕುರಿತು ಯೋಚಿಸಿದರೆ ಆತಂಕ ಉಂಟಾಗುತ್ತದೆ. ಶಾಲಾ ಕಾಲೇಜುಗಳಲ್ಲಿ ನೈತಿಕ ಶಿಕ್ಷಣದ ಕೊರತೆ ಇರುವುದು ಇದಕ್ಕೊಂದು ಕಾರಣ ಇರಬಹುದೆ?


ಪರಮೇಶ್ವರ ಜೆ.ಎಂ., ಸಂಡೂರು

ಸಮೀಕ್ಷೆ – ಜಾತಿ: ಮಾರ್ಮಿಕ ವಿಶ್ಲೇಷಣೆ

'ಜಾತಿ ಎಂಬುದೇ ಜ್ಯೋತಿರ್ಲಿಂಗ' (ಪ್ರ.ವಾ., ಸೆ. 29) ಬರಹದಲ್ಲಿ ರವೀಂದ್ರ ಭಟ್ಟ ಅವರು, ಈಗ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಿಂದ ಯಾರಿಗೆಲ್ಲ ಅನುಕೂಲ ಹಾಗೂ ಯಾರಿಗೆಲ್ಲ ಜಾತಿಯೇ ಜ್ಯೋತಿರ್ಲಿಂಗವಾಗಿದೆ ಎನ್ನುವ ವಿಶ್ಲೇಷಣೆಯನ್ನು ಮನಮುಟ್ಟುವಂತೆ ಮಾಡಿದ್ದಾರೆ. ಒಟ್ಟಾರೆ ಜನಸಂಖ್ಯೆಯಲ್ಲಿ ಕಡಿಮೆ ಇರುವ ವರ್ಗಗಳು ಬಹುಪಾಲು ಅಧಿಕಾರ ಮತ್ತು ಸಂಪನ್ಮೂಲವನ್ನು ಅನುಭವಿಸುವ ಸ್ಥಿತಿ ಬದಲಾಗಬೇಕು ಎಂಬ ಆಶಯವನ್ನು ಬರಹ ಬಹಳ ಮಾರ್ಮಿಕವಾಗಿ ಧ್ವನಿಸಿದೆ.

ಯಲ್ಲಪ್ಪ ಟಿ. ಗಲಗ್ಕರ್, ದೇವದುರ್ಗ

ಚುರುಮುರಿ



ಲೈಫು ಲೂಸರ್ ಬೇತಾಳ

• ಡಿ.ಎಸ್. ಲಿಂಗರಾಜು

ರಾಜ ವಿಕ್ರಮಾದಿತ್ಯನು ಉಸ್ಸೆಂದು ವಿಧಾನಸೌಧದ ಮುಂದೆ ಕುಕ್ಕರಿಸಿದನು.

'ಇದ್ಯಾಕಾ ವಿಕ್ರಮಣ್ಣೈ, ಹಿಂಗೆ ಬೇಜಾರಲ್ಲಿ ಕುಂತುದಯ್?' ಪಟ್ಟಂತ ಪ್ರತ್ಯಕ್ಷವಾದ ಬೇತಾಳನ ಭಾವಣಿಕೆ ಮಾತಿನಿಂದ ರಾಜಾ ವಿಕ್ರಮಾದಿತ್ಯನು ಕಣ್ಣಾಗೆ ನೀರಾಕ್ಕ್ಯಂದು, 'ಸಿಟಿ ಬಸ್ಸಿಗೆ ಹತ್ತಂಗೇ ಇಲ್ಲ ಕಪ್ಪಾ. ಆಟೋದೋರು ಬರಕ್ಕುಲ್ಲ, ಬೈಕ್ ಟ್ಯಾಕ್ಸಿ ಇಲ್ಲ, ಕ್ಯಾಬು ಸಿಕ್ಕಲ್ಲ. ನಡೀಲಾರದೇ ಕುಂತುದನಿ' ಅಂತಂದ.

'ರಾಜನ್, ನಿಂದೇನೋ ಸಮಸ್ಯೆ ಅದೆ. ಅದುಕ್ಕೇ ನೀನು ಮೌನ ಮುರಿದುಬುಟ್ಟೆ. ಲೀಗಲ್ಲಾಗಿ ನಾನೀಗ ಮಾಯವಾಗಬಕು. ಯೆದುರ್ಕಬ್ಯಾಡ, ನಿನ್ನ ಸಮಸ್ಯೆ ತೀರಿಸಿಯೇ ನಾನು ಹೋತಿನಿ'. ಬೇತಾಳ ವಿಕ್ರಮಾದಿತ್ಯನ ಮಗ್ಗುಲಲ್ಲಿ ಕುತುಗಂದು, 'ರಾಜನ್, ನೀನು ಸರ್ಕಾರಕ್ಕೆ ಒಂದು ಅರ್ಜಿ ಕೊಟ್ಟು ರೋಡೆಲ್ಲಾ ಈಥರಕೀಥರಾ ಅಗ್ಯವೆ ಅಂತ ಹೇಳು' ಅಂತು.

'ಹೇಳಿದೆ ಕಯ್ಯಾ, ನಿನ್ನ ದೊಡ್ಡಸ್ತಿಕೆ ತೋರಬ್ಯಾಡ ಅಂತ ಮಕ್ಕುಗಿದ್ರು. ನಿಂದೇನು ಸಮಾಚಾರ ಹೇಳು?' ಎಂದು ವಿಕ್ರಮಾದಿತ್ಯ ಕೇಳಿದ.

'ರಾಜನ್, ನನಗೂ ಸಿಎಂ ಆಗಬೇಕು ಮನಸ್ಸಾಗ್ಯದೆ. ಮೊದಲು ಅಭ್ಯಾಸ ಮಾಡಿಕ್ಯಣಕ್ಕೆ ಬೆಂಗಳೂರು ರೌಂಡ್ ಹಾಕಕ್ಕೆ ಹೊಂಟಿವ್ನಿ. ರೋಡು ಅವ್ವೆವಸ್ಥೆ ನೋಡಿಕ್ಯಬತ್ತೀನಿ' ಎಂದು ಬೇತಾಳ ಭರವಸೆ ಕೊಟ್ಟಿತು.

'ಆತು ಕಯ್ಯಾ ನೀನು ಗೆದ್ದೆ ಅಂದ್ಕಳನ. ಶಾಸಕರ ಬಹುಮತ ಯಂಗೆ ತಕ್ಕಂದೀಯೆ?' ಎಂದು ವಿಕ್ರಮಾದಿತ್ಯ ಕೇಳಿದ.

'ನಾವು ಸತ್ತೋದ ಪ್ರಜೆಗಳು ರಾಜನ್. ಮಡಿದಂತೆ ನಡೀತೀವಿ. ಹಫ್ತಾ ಕಾಸು, ಕಂಟ್ರಾಕ್ಟು, ಅನುದಾನ ಎಲ್ಲಾ ನಮಗ್ಯಾಕೆ. ಶಾಸಕರನ್ನ ಮೊದಲೇ ಬುಕಿಂಗ್ ಮಾಡಿಕ್ಯಂದಿರೋ ಸ್ಪಾನ್ಸರ್ರೇ ಎಲ್ಲಾ ಇಸುಗೋಯ್ತರೆ. ಅವರು ಹೇಳಿದ ಕಡೆ ಸೈನಿಕ್ಕಬೇಕು ಅಷ್ಟೇಯೆ. ನನಗೇಂತ ಮಶಾಣದೇಲಿ ಒಂದು ಲೈಫ್ ಲೂಸರ್ ಸೈಟು ಈಸುಗಂದು ಭೂತ ಬಂಗ್ಲೆ ಮಾಡಿಕ್ಯತೀನಿ. ಅಗೋ ಯಾರೋ ಸ್ಪಾನ್ಸರ್ ಪೋನು ಮಾಡ್ತಾವ್ರೆ. ಈಗ ಮೀಟಿಂಗ್ ಅದೆ. ನೀನು ನಡಿ. ನಾನು ಸಿಎಂ ಆದ ಮ್ಯಾಲೆ ಬಾ' ಅಂತಂದ ಬೇತಾಳ ಪಣ್ಣನೆ ಮಾಯವಾಯ್ತು.

ಸಂಗತ

ರಸ್ತೆಗಳು ಕಟ್ಟಿಕೊಡುವ 'ಸಂಸ್ಕೃತಿ ಕಥನ'

'ರಸ್ತೆ ಸಂಸ್ಕೃತಿ' ನಮ್ಮಲ್ಲಿನ್ನೂ ವಿಕಸನಗೊಳ್ಳಬೇಕಾದ ಬಹು ಮುಖ್ಯವಾದ ಅರಿವು. ಈ ಅರಿವಿಗೆ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಸಮಾಜದ ಸ್ಪಂದನವೂ ಅಗತ್ಯ.

• ವಿವೇಕ್ ಅಗರ್ವಾಲ್

ದೆಹಲಿಯಲ್ಲಿ ನಡೆದ ಅಪಘಾತವೊಂದರಲ್ಲಿ, ಮೋಟಾರ್ ಸೈಕಲ್‌ಗೆ ಬಿಎಂಡಬ್ಲ್ಯು ಕಾರು ಗುದ್ದಿ ಸರ್ಕಾರಿ ಅಧಿಕಾರಿ ಒಬ್ಬರು ಸೆ. 14ರಂದು ಮೃತಪಟ್ಟರು. ಇಂಥ ಘಟನೆಗಳು ವರದಿಯಾದಾಗಲೆಲ್ಲ, ಭಾರತದ ನಗರಗಳಲ್ಲಿ ರಸ್ತೆಗಳು ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಕಾಡುತ್ತದೆ. ಹೈ ಪ್ರೊಫೈಲ್ ಪ್ರಕರಣಗಳ ಮಾತು ಹಾಗಿರಲಿ; ನಿತ್ಯವೂ ಸಂಭವಿಸುವ ಇಂತಹ ಅಪಘಾತಗಳನ್ನು ಗಮನಿಸದೆ ಇರುವವರೇ ಹೆಚ್ಚು. ಅಲ್ಲೊಂದು ಇಲ್ಲೊಂದು ನಡೆಯುವ ಅವಘಡ ಎಂದು ಉದಾಸೀನ ಮಾಡುವ ಸಮಸ್ಯೆ ಇದಲ್ಲ; ರಚನಾತ್ಮಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆ ವಿಫಲವಾಗುತ್ತಿರುವ ಢಾಳಾದ ಸೂಚನೆ ಇದು.

2001 ಹಾಗೂ 2020ರ ನಡುವೆ ನೋಂದಾಯಿತ ವಾಹನಗಳ ಸಂಖ್ಯೆ ಐದು ಪಟ್ಟು ಹೆಚ್ಚಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಒಟ್ಟಾರೆ ಉದ್ದವು ಮೂರು ಪಟ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ರಾಜ್ಯ ರಸ್ತೆಗಳ ಧಾರಣಾ ಸಾಮರ್ಥ್ಯವು ಶೇ 41ರಷ್ಟು ಮಾತ್ರ ಹೆಚ್ಚಾಗಿದೆ. ಇದರ ಪರಿಣಾಮವೇ ನಗರದ ರಸ್ತೆಗಳಲ್ಲಿ ವಾಹನಗಳು ಇಡುಕಿರಿದಿರುವುದು; ತರಹೇವಾರಿ ವಾಹನಗಳ ಮಿಶ್ರ ಸಂಚಾರದಿಂದ ಟ್ರಾಫಿಕ್ ಇನ್ನಷ್ಟು ಮತ್ತಷ್ಟು ತೆವಳುತ್ತಿರುವುದು.

ದ್ವಿಚಕ್ರ ವಾಹನಗಳು ಹಾಗೂ ಕಾರುಗಳು, ಆಟೊರಿಕ್ಷಾ ಹಾಗೂ ಬಸ್‌ಗಳಿಗಿಂತ ಶೇ 33-66ರಷ್ಟು ಹೆಚ್ಚು ವೇಗವಾಗಿ ಸಂಚರಿಸಬಲ್ಲವು. ಆದರೆ, ನಿಧಾನವಾಗಿ ಸಾಗುವ ಆಟೊದಂತಹ ವಾಹನ ಅಡ್ಡ ಬಂದರೆ, ಯಾವ ಕಾರೂ ತೆವಳಲೇಬೇಕು.



ರಸ್ತೆ ಬದಿಯ ಒತ್ತುವರಿಗಳನ್ನು ನೋಡಿ: ಅಂಗಡಿಗಳು, ತಳ್ಳುಗಾಡಿಗಳು, ಪಾರ್ಕ್ ಮಾಡಿದ ವಾಹನಗಳು ಇವೆಲ್ಲವೂ ರಸ್ತೆಯನ್ನು ಭಾಗಶಃ ಆಕ್ರಮಿಸಿಕೊಳ್ಳುತ್ತವೆ. ಆಗ ಜನರೂ ಅನಿವಾರ್ಯವಾಗಿ ವಾಹನಗಳು ಸಾಗುವ ಭಾಗದಲ್ಲೇ ನಡೆಯಬೇಕಾಗುತ್ತದೆ. ಇದರಿಂದ ವಾಹನ ದಟ್ಟಣೆ ಇನ್ನೂ ಹೆಚ್ಚಾಗುವುದಲ್ಲದೆ, ಅಪಾಯಕ್ಕೂ ಆಹ್ವಾನ ನೀಡಿದಂತೆ.

ಸಂಚಾರ ನಿಯಮ ಉಲ್ಲಂಘನೆಗೆ ದಂಡ ವಿಧಿಸುವಂತಹ ಕಾನೂನು ಇದೆಯಾದರೂ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಬೇಕಾದೀತು ಎಂದು ಹೆದರಿ ಅದನ್ನು ಸಮರ್ಪಕವಾಗಿ ಜಾರಿಗೊಳಿಸುತ್ತಿಲ್ಲ. ಅದರಲ್ಲೂ ರಸ್ತೆ ಒತ್ತುವರಿಯನ್ನು ತೆರವುಗೊಳಿಸುವುದು ಜನರ ಬದುಕಿನ ಮೇಲೆ ಪರಿಣಾಮ ಬೀರುವ ಸಂಗತಿ. ರಾಜಕೀಯವಾಗಿ ಅನುಕೂಲಕರ ಅಲ್ಲದ ತೆರವುಗೊಳಿಸುವ ಕ್ರಿಯೆಯು ನೈತಿಕ ವಾಗಿಯೂ ಸಮರ್ಥನೀಯವಲ್ಲ.

2024ರಲ್ಲಿ ದೇಶದಾದ್ಯಂತ ನಡೆಸಲಾಗಿದ್ದ ಸಮೀಕ್ಷೆಯೊಂದರ ಪ್ರಕಾರ ₹12 ಸಾವಿರ ಕೋಟಿ ಮೊತ್ತವನ್ನು ಟ್ರಾಫಿಕ್ ನಿಯಮ ಉಲ್ಲಂಘಿಸಿದ್ದಕ್ಕೆ ದಂಡವಾಗಿ ನಿಗದಿಪಡಿಸಲಾಗಿದೆ. ಆದರೆ, ಇದರಲ್ಲಿ ₹9000 ಕೋಟಿ ಮೊತ್ತ ಇನ್ನೂ ವಸೂಲಾಗಿಲ್ಲ. ನಿಯಮ ಉಲ್ಲಂಘನೆ ತಡೆಯುವ ಕ್ರಿಯೆಯು ಎಷ್ಟು ದುರ್ಬಲವಾಗಿದೆ ಎನ್ನುವುದಕ್ಕೆ ಇದು ಕನ್ನಡಿ ಹಿಡಿಯುತ್ತದೆ.

ಮೂಲಸೌಕರ್ಯ, ಕಾನೂನು ಜಾರಿಯ ಸಂಗತಿಗೂ ಮೀರಿ ಚಾಲನಾ ಧೋರಣೆಯೊಂದು ಇದೆ. ಇದನ್ನೇ 'ರಸ್ತೆ ಸಂಸ್ಕೃತಿ' ಎಂದು ಕರೆಯುತ್ತಾರೆ. ಖಾಲಿ ರಸ್ತೆಗಳಲ್ಲಿಯೂ ನಿಯಮ ಗಾಳಿಗೆ ತೂರಿ ಕೆಂಪು ಸಿಗ್ನಲ್ ದಾಟುವುದು, ಲೇನ್ ಬಿಟ್ಟು ಸಂಚರಿಸುವುದು, ವೇಗಮಿತಿಗೆ ಕುರುಡುಗಣ್ಣಾಗುವುದು ನಡೆದೇ ಇದೆ. ಇವೆಲ್ಲವೂ ಸಾಮಾಜಿಕ ನಡವಳಿಕೆಯನ್ನು ಅಭಿವ್ಯಕ್ತಿಸುತ್ತವೆ. ನಿಯಮ ಇರುವುದೇ ಮುರಿಯುವುದಕ್ಕೆ ಎನ್ನುವ ಭಂಡತನದ ಪರಿಣಾಮ ಇದು.

ವಾಹನಗಳ ಮಾಲೀಕತ್ವವನ್ನು ಸಿಂಗಪುರದಲ್ಲಿ ಕಠಿಣ ನಿಯಮಗಳ ವ್ಯಾಪ್ತಿಯಲ್ಲಿ ಇಡಲಾಗಿದೆ. ಸಂಚಾರ ನಿಯಮ ಉಲ್ಲಂಘನೆಗೆ ಅಲ್ಲಿ ದೊಡ್ಡ ಮೊತ್ತದ ದಂಡ ವಿಧಿಸುತ್ತಾರೆ. ಹೀಗಾಗಿಯೇ ಅಲ್ಲಿ ಸಂಚಾರ ಸರಾಗ.

ರಸ್ತೆಗಳು ನಗರ ಸಂಸ್ಕೃತಿಯ ಬಿಂಬಗಳೇ ಅಥವಾ ಅವು ಸಂಸ್ಕೃತಿಯನ್ನು ರೂಪಿಸುತ್ತವೆಯೇ ಎನ್ನುವ ಪ್ರಶ್ನೆ ಮುಖ್ಯವಾಗುತ್ತದೆ. ಸಮಾಜ ವಿಜ್ಞಾನಿ ಇರ್ವಿಂಗ್ ಗಾಫ್ಮನ್ ಪ್ರಕಾರ, ಈ ಪ್ರಶ್ನೆಗೆ 'ಹೌದು' ಎನ್ನುವುದೇ ಉತ್ತರ. ನಿಯಮಗಳನ್ನು ಎದ್ದುಕಾಣುವಂತೆ ಮುರಿಯುವುದು ಕಾನೂನಿನ ಉಲ್ಲಂಘನೆ ಒಪ್ಪಿತ ಎನ್ನುವುದರ ಬಿಂಬವೆನ್ನುವ ಸಿದ್ಧಾಂತ ಇರ್ವಿನ್‌ರದ್ದು. ಇದನ್ನು 'ಬ್ರೋಕನ್ ವಿಂಡೋಸ್ ಥಿಯರಿ' ಎನ್ನುತ್ತಾರೆ.

ರಸ್ತೆ ಸಂಸ್ಕೃತಿಯು ಹಸನಾದರೆ ವಿಶಾಲ ದೃಷ್ಟಿಯಲ್ಲಿ ಸಾಮಾಜಿಕ ನಂಬಿಕೆಯೂ ಹರಡುತ್ತದೆ ಎನ್ನುವುದು ರಟ್ಗರ್ಸ್ ವಿಶ್ವವಿದ್ಯಾಲಯದ ಸಂಶೋಧನೆಯಿಂದ ಗೊತ್ತಾಗಿದೆ. ಪ್ರಯಾಣದ ಅವಧಿ ಕಡಿತಗೊಳಿಸುವುದು ಅಥವಾ ಅಪಘಾತ ಪ್ರಮಾಣ ಕಡಿಮೆ ಮಾಡುವುದನ್ನೂ ಮೀರಿದ ವಿದ್ಯಮಾನ ರಸ್ತೆ ಸಂಸ್ಕೃತಿ. ರಸ್ತೆಯಲ್ಲಿ ಸದ್ವರ್ತನೆ ತೋರುವವರು ಹೆಚ್ಚಾದರೆ, ಅದು ಕಚೇರಿ, ಶಾಲೆಗಳಿಗೂ ಹಬ್ಬುತ್ತದೆ.

ಮೊದಲಿಗೆ, ನಿಯಮಗಳನ್ನು ಅಚ್ಚುಕಟ್ಟಾಗಿ ಪಾಲಿಸುವ ಮಾದರಿ ರಸ್ತೆಗಳನ್ನು ಪ್ರಚುರಪಡಿಸಬೇಕು. ಇದರಿಂದ ಪ್ರೇರೇಪಿತರಾಗಿ ಜನರು ಇನ್ನಷ್ಟು ಮಾದರಿ ರಸ್ತೆಗಳನ್ನು ಸೃಷ್ಟಿಸುತ್ತಾರೆ.

ಎರಡನೆಯದಾಗಿ, ಸಂಚಾರ ನಿಯಮ ಉಲ್ಲಂಘಿಸಿದವರಿಗೆ ದೊಡ್ಡ ಪ್ರಮಾಣದ ದಂಡ ಹಾಕುವುದು ಪರಿಹಾರವಲ್ಲ. ಆಗ ಭ್ರಷ್ಟಾಚಾರ ಹೆಚ್ಚಾಗುತ್ತದೆ. ಜನರು ದಂಗೆ ಏಳುವ ಅಪಾಯವೂ ಇದೆ. ತರ್ಕಬದ್ಧವಾದ ದಂಡ ಜಾರಿಗೊಳಿಸಬೇಕು. ನಿಯಮ ಉಲ್ಲಂಘಿಸಿದರೆ ಸಮಾಜದಲ್ಲಿ ನಿಕೃಷ್ಟವಾಗಿ ನೋಡುತ್ತಾರೆ ಎನ್ನುವ ಪ್ರಜ್ಞೆ ಜನರಲ್ಲಿ ಮೂಡುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು. ರಾಜಕೀಯ ಇಚ್ಛಾಶಕ್ತಿಯೂ ಬೆರೆತು ಇಷ್ಟೆಲ್ಲ ಆದರೆ ಆಗ ಅನುಕರಣೀಯ ರಸ್ತೆ ಸಂಸ್ಕೃತಿ ನಮ್ಮದಾಗಬಹುದು.

(ಲೇಖಕರು ಜಾಗತಿಕ ಯೋಜನಾ ಪರಿಣತರು ಹಾಗೂ ಟೋನಿ ಬ್ಲೇರ್ ಸಂಸ್ಥೆಯಲ್ಲಿ ನಿರ್ದೇಶಕರು.)

ಆರ್‌ಎಸ್‌ಎಸ್ @100

1925ರಲ್ಲಿ ಮಹಾರಾಷ್ಟ್ರದ ನಾಗ್ಪುರದಲ್ಲಿ ಆರಂಭವಾದ ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) 100 ವರ್ಷ ಪೂರೈಸಿದೆ. ಹಿಂದೂ ಸಂಸ್ಕೃತಿ, ಹಿಂದೂ ಒಗ್ಗಟ್ಟು ಮತ್ತು ರಾಷ್ಟ್ರದ ಸ್ವಾವಲಂಬನೆಗಾಗಿ ದುಡಿಯುವ ರಾಜಕೀಯೇತರ ಸಂಘಟನೆ ತಮ್ಮದು ಎಂದು ಆರ್‌ಎಸ್‌ಎಸ್ ಮುಖಂಡರು ಪ್ರತಿಪಾದಿಸಿದರೂ ಬಿಜೆಪಿಯ ತಾತ್ವಿಕತೆ ಮತ್ತು ಕಾರ್ಯಸೂಚಿಯ ಹಿಂದೆ ಇರುವುದು ಇದೇ ಸಂಘಟನೆ. ದೇಶದ ಸಾಂಸ್ಕೃತಿಕ ಹಾಗೂ ರಾಜಕೀಯ ಆಗುಹೋಗುಗಳಲ್ಲಿ ಆರ್‌ಎಸ್‌ಎಸ್ ನಿರ್ಣಾಯಕ ಪಾತ್ರ ವಹಿಸುತ್ತಿದೆ

ಪ್ರಜಾವಾಣಿ ವಾರ್ತೆ



ಹಿಂದೂ ರಾಷ್ಟ್ರವಾದಿ ಸಂಘಟನೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ಶತಮಾನ ಪೂರೈಸಿದೆ. ಹಿಂದುತ್ವದ ತಾತ್ವಿಕತೆಯಿಂದ ಪ್ರಭಾವಿತರಾಗಿದ್ದ ಕೇಶವ ಬಲಿರಾಮ ಹೆಡ್ಗೇವಾರ್ ಅವರು 1925ರ ಸೆ.27ರಂದು ವಿಜಯದಶಮಿ ದಿನದಂದು ಮಹಾರಾಷ್ಟ್ರದ ನಾಗ್ಪುರದಲ್ಲಿ ಆರ್‌ಎಸ್‌ಎಸ್ ಸ್ಥಾಪಿಸಿದರು. ತಮ್ಮದು ಸಾಂಸ್ಕೃತಿಕ ಸಂಘಟನೆಯಾಗಿದ್ದು, ಹಿಂದೂ ಸಂಸ್ಕೃತಿ, ಹಿಂದೂ ಒಗ್ಗಟ್ಟು ಮತ್ತು ರಾಷ್ಟ್ರ ಸ್ವಾವಲಂಬನೆ ಸಾಧಿಸುವುದು ತಮ್ಮ ಆಶಯ ಎಂದು ಸಂಘಟನೆಯ ಮುಖಂಡರು ಪ್ರತಿಪಾದಿಸುತ್ತಾರೆ.

ಆರ್‌ಎಸ್‌ಎಸ್, ದೇಶದ ಬಹುತೇಕ ರಾಜ್ಯ, ಜಿಲ್ಲೆ, ತಾಲ್ಲೂಕು, ಹೋಬಳಿಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ. ಸಂಘದ ಸದಸ್ಯರಿಗೆ ನಿಗದಿತವಾಗಿ ಸ್ವಯಂ ರಕ್ಷಣೆ ಸೇರಿದಂತೆ ವಿವಿಧ ರೀತಿಯ ತರಬೇತಿ, ಸೈದ್ಧಾಂತಿಕ ಶಿಕ್ಷಣ ನೀಡಲಾಗುತ್ತದೆ. ದೇಶದಲ್ಲಿ ಒಟ್ಟು 83,000 ಶಾಖೆಗಳಿವೆ ಎನ್ನಲಾಗುತ್ತಿದ್ದು, ಅವುಗಳಲ್ಲಿ ಹಿಂದುತ್ವ, ಹಿಂದೂ ರಾಷ್ಟ್ರೀಯತೆಯನ್ನು ಕೇಂದ್ರೀಕರಿಸಿ ನಿರಂತರ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಸರಸಂಘಚಾಲಕ, ಸಂಘದ ಪರಮೋಚ್ಚ ಸ್ಥಾನ ಪಡೆದಿದ್ದರೆ, ನಂತರದ ಸ್ಥಾನದಲ್ಲಿ ಸರಕಾರ್ಯವಾಹ (ಪ್ರಧಾನ ಕಾರ್ಯದರ್ಶಿ) ಇರುತ್ತಾರೆ. ಪ್ರಸ್ತುತ ಮೋಹನ ಭಾಗವತ್ ಅವರು ಸರಸಂಘಚಾಲಕರಾಗಿದ್ದರೆ, ದತ್ತಾತ್ರೇಯ ಹೊಸಬಾಳೆ ಅವರು ಸರಕಾರ್ಯವಾಹ ಆಗಿದ್ದಾರೆ.

ಬಿಜೆಪಿಯ ಸೈದ್ಧಾಂತಿಕ ಮೂಲ: ಆರ್‌ಎಸ್‌ಎಸ್ ರಾಜಕೀಯ ಸಂಘಟನೆ ಅಲ್ಲ ಎಂದು ಅದರ ಮುಖಂಡರು ಪ್ರತಿಪಾದಿಸುತ್ತಾರೆ. ಆದರೆ, ಅದರ ರಾಜಕೀಯ ವಿಭಾಗವೇ ಬಿಜೆಪಿ ಎನ್ನುವುದು ಗುಟ್ಟೇನೂ ಅಲ್ಲ. ಪ್ರಧಾನಿ ನರೇಂದ್ರ ಮೋದಿ ಅವರಿಂದ ಆರಂಭಿಸಿ ಅಮಿತ್ ಶಾ, ರಾಜನಾಥ್ ಸಿಂಗ್, ಶಿವರಾಜ್ ಸಿಂಗ್ ಚೌಹಾಣ್, ನಿತಿನ್ ಗಡ್ಕರಿವರೆಗೆ ಎಲ್ಲರೂ ಮೊದಲು ಆರ್‌ಎಸ್‌ಎಸ್ ಕಾರ್ಯಕರ್ತರಾಗಿದ್ದವರೇ. ಈ ಹಿಂದೆ ಬಿಜೆಪಿಯಿಂದ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ, ಸಚಿವರಾಗಿದ್ದ ಲಾಲ್‌ಕೃಷ್ಣ ಅಡ್ವಾಣಿ ಸೇರಿದಂತೆ ಪಕ್ಷದ ಹಲವು ಹಿರಿಯ ಮುಖಂಡರು ಕೂಡ ಸಂಘದಲ್ಲಿ ಸಕ್ರಿಯರಾಗಿದ್ದವರೇ. ದೇಶದ ಪ್ರಮುಖ ರಾಜಕೀಯ ಪಕ್ಷದ ಬೆನ್ನೆಲುಬಾಗಿ ಬೃಹತ್ ಸಂಖ್ಯೆಯ ಕಾರ್ಯಕರ್ತರನ್ನು ಹೊಂದಿರುವ ಆರ್‌ಎಸ್‌ಎಸ್ ತನ್ನದು 'ಸಾಂಸ್ಕೃತಿಕ ಸಂಘಟನೆ' ಎಂದು ಪ್ರತಿಪಾದಿಸಿದರೂ ದೇಶದ ರಾಜಕಾರಣದಲ್ಲಿ ಅದರ ಪ್ರಭಾವ ಇದೆ ಎನ್ನುವ ಮಾತುಗಳಿವೆ. ತಮ್ಮ ಮೂಲ ಸಂಘಕ್ಕೆ ಇರುವ ಸಂಪರ್ಕಗಳೇ ಬಿಜೆಪಿಯ ಪಾಲಿಗೆ ಶಕ್ತಿಯಾಗಿದ್ದು, ಪಕ್ಷದ ಚುನಾವಣಾ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.

ಬಿಜೆಪಿ ಕಾಲದಲ್ಲಿ ಅನುಷ್ಠಾನಗೊಂಡ/ಜಾರಿಯಾದ ಯೋಜನೆಗಳು ಜನಸಂಘ ಮತ್ತು ಆರ್‌ಎಸ್‌ಎಸ್ ಕಾರ್ಯಸೂಚಿಯಲ್ಲಿ ಇದ್ದಂಥವು. ಬಿಜೆಪಿಯು ದಶಕಗಳಿಂದಲೂ ಪ್ರತಿಪಾದಿಸುತ್ತಿರುವ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ರದ್ದು, ಗೋಹತ್ಯಾ ನಿಷೇಧ, ಏಕರೂಪ ನಾಗರಿಕ ಸಂಹಿತೆ ಜಾರಿ ಇವೆಲ್ಲವೂ ಆರ್‌ಎಸ್‌ಎಸ್‌ನ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಪೂರಕ ಎನ್ನುವ ವಿಶ್ಲೇಷಣೆಗಳಿವೆ.

ಆಧಾರ: ಆರ್‌ಎಸ್‌ಎಸ್ ವೆಬ್‌ಸೈಟ್, ಬಿಬಿಸಿ, ಮಾಧ್ಯಮ ವರದಿಗಳು

ಸಂಘ ಪರಿವಾರ

ಆರ್‌ಎಸ್‌ಎಸ್ ಹಲವು ಸಂಘಟನೆಗೊಂದಿಗೆ ಪ್ರತ್ಯಕ್ಷ/ಪರೋಕ್ಷ ನಂಟು ಹೊಂದಿದೆ. ಭಾರತೀಯ ಜನತಾ ಪಕ್ಷ, ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಸ್ವದೇಶಿ ಜಾಗರಣ ಮಂಚ್, ವನವಾಸಿ ಕಲ್ಯಾಣ ಆಶ್ರಮ, ರಾಷ್ಟ್ರೀಯ ಸಿಖ್ ಸಂಘ, ಹಿಂದೂ ಯುವವಾಹಿನಿ, ಭಾರತೀಯ ಕಿಸಾನ್ ಸಂಘ, ಮತ್ತು ಭಾರತೀಯ ಮಜ್ದೂರ್ ಸಂಘ ಮುಖ್ಯವಾದವು. ಈ ಗುಂಪನ್ನು ಸಂಘ ಪರಿವಾರ ಎಂದೂ ಕರೆಯಲಾಗುತ್ತದೆ.

ಸೇವಾ ಕಾರ್ಯ

ಪ್ರವಾಹ, ಭೂಕಂಪ, ಚಂಡಮಾರುತ ಸೇರಿದಂತೆ ನೈಸರ್ಗಿಕ ವಿಪತ್ತುಗಳು, ದುರ್ಘಟನೆಗಳು ನಡೆದ ಸಂದರ್ಭದಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯಾಚರಣೆಯಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು ಸಕ್ರಿಯವಾಗಿ ತೊಡಗಿಕೊಳ್ಳುತ್ತಾರೆ.

ಮೂರು ಬಾರಿ ನಿಷೇಧ

ಕೇಂದ್ರ ಸರ್ಕಾರವು ಸಂಘದ ಮೇಲೆ ಈವರೆಗೆ ಮೂರು ಬಾರಿ ನಿಷೇಧ ಹೇರಿದೆ. 1948ರಲ್ಲಿ ಗಾಂಧೀಜಿ ಹತ್ಯೆಯಾದ ಸಂದರ್ಭದಲ್ಲಿ, 1975ರ ತುರ್ತು ಪರಿಸ್ಥಿತಿ ವೇಳೆ ಮತ್ತು 1992ರ ಡಿಸೆಂಬರ್ 6ರಂದು ಬಾಬರಿ ಮಸೀದಿ ಧ್ವಂಸದ ಬಳಿಕ ಕೇಂದ್ರ ಸರ್ಕಾರ ಆರ್‌ಎಸ್‌ಎಸ್ ಮೇಲೆ ನಿಷೇಧ ಹೇರಿತ್ತು.

ನೋಂದಾಯಿತ ಸಂಸ್ಥೆಯಲ್ಲ

ಶತಮಾನದ ಇತಿಹಾಸ ಹೊಂದಿದ್ದರೂ, ಆರ್‌ಎಸ್‌ಎಸ್ ನೋಂದಾಯಿತ ಸಂಸ್ಥೆಯಲ್ಲ. ಅದು ಲೆಕ್ಕಪತ್ರ ವಿವರಗಳನ್ನು ಸಲ್ಲಿಸುವುದಿಲ್ಲ. ಹಾಗಾಗಿ ಸಂಘಟನೆಯ ಹಣಕಾಸು ವ್ಯವಹಾರಗಳಲ್ಲಿ ಪಾರದರ್ಶಕತೆಯ ಕೊರತೆ ಇದೆ ಎಂಬ ಟೀಕೆಗಳಿವೆ.

ಆದರೆ, ಇದಕ್ಕೆ ಪ್ರತಿಕ್ರಿಯಿಸುವ ಸಂಘದ ಮುಖಂಡರು, ಸಂಘವು ಸ್ವಯಂ ಬೆಂಬಲಿತ ಸಂಸ್ಥೆಯಾಗಿದ್ದು, ಹೊರಗಿನಿಂದ ಹಣಕಾಸಿನ ನೆರವು ಪಡೆಯುವುದಿಲ್ಲ. ಸ್ವಯಂಸೇವಕರಿಂದ ವರ್ಷಕ್ಕೆ ಒಂದು ಬಾರಿ ಗುರುದಕ್ಷಿಣೆ ಪಡೆಯುವ ಮೂಲಕ ಸಂಘಟನೆಯ ವೆಚ್ಚಗಳನ್ನು ಭರಿಸಲಾಗುತ್ತದೆ ಎಂಬುದು ಅವರ ಹೇಳಿಕೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿತ್ತೇ?

ಆರ್‌ಎಸ್‌ಎಸ್ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿಲ್ಲ ಎಂಬುದು ಬಹುದೊಡ್ಡ ಆರೋಪ. ಆದರೆ, ಸಂಘವು ಇದನ್ನು ತಳ್ಳಿ ಹಾಕುತ್ತದೆ. ಅಸಹಕಾರ ಚಳವಳಿ ಸೇರಿದಂತೆ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಸಂಘ ಹಾಗೂ ಸ್ವಯಂಸೇವಕರು ಸಕ್ರಿಯವಾಗಿ ತೊಡಗಿಕೊಂಡಿದ್ದರು ಎಂಬುದು ಅದರ ವಾದ.


ಗಾಂಧೀಜಿ ಹತ್ಯೆಗಿದೆಯೇ ನಂಟು?

ಮಹಾತ್ಮ ಗಾಂಧೀಜಿ ಅವರ ಹತ್ಯೆಯಾದಾಗ ಅದರ ಹಿಂದೆ ಆರ್‌ಎಸ್‌ಎಸ್ ಇದೆ ಎಂದು ಸರ್ಕಾರ ಶಂಕಿಸಿತ್ತು. ಹಂತಕ ನಾಥೂರಾಮ್ ಗೋಡ್ಸೆ ಆರ್‌ಎಸ್‌ಎಸ್ ಸದಸ್ಯ ಎಂದೂ ಹೇಳಲಾಗಿತ್ತು. ಆದರೆ, ಗೋಡ್ಸೆ ತನ್ನ ಸದಸ್ಯನಲ್ಲ ಎಂದು ಆರ್‌ಎಸ್‌ಎಸ್ ಹೇಳಿತ್ತು. ಗಾಂಧೀಜಿಯವರ ಹತ್ಯೆಯಲ್ಲಿ ಸಂಘದ ಹೆಸರು ಎಳೆದು ತರುವುದು ಸರಿಯಲ್ಲ ಎಂದು ಹೇಳಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದಿನ ಆರ್‌ಎಸ್‌ಎಸ್ ಮುಖ್ಯಸ್ಥ ಗೋಳ್ವಲ್ಕರ್ ಅವರನ್ನು ಬಂಧಿಸಲಾಗಿತ್ತು.

ನ್ಯಾಯಾಲಯ ವಿಚಾರಣೆಯ ಸಂದರ್ಭದಲ್ಲಿ ಸ್ವತಃ ಗೋಡ್ಸೆಯೇ ತಾನು ಒಂದು ಕಾಲದಲ್ಲಿ ಆರ್‌ಎಸ್‌ಎಸ್‌ನಲ್ಲಿದ್ದೆ, ನಂತರ ಅದನ್ನು ತೊರೆದು ಹಿಂದೂ ಮಹಾಸಭಾ ಸೇರಿದ್ದೆ ಎಂದು ಹೇಳಿದ್ದ.

ಗಣವೇಷ ಬದಲು

ಬಿಳಿ ಅಂಗಿ, ಖಾಕಿ ಚಡ್ಡಿ ಆರಂಭದಿಂದಲೂ ಆರ್‌ಎಸ್‌ಎಸ್‌ನ ಸಮವಸ್ತ್ರ (ಗಣವೇಷ) ಆಗಿತ್ತು. ಸಂಘ ಸ್ಥಾಪನೆಯಾಗಿ 92 ವರ್ಷಗಳ ನಂತರ 2016ರಲ್ಲಿ ಈ ಸಮವಸ್ತ್ರ ಬದಲಾಯಿತು. ಈಗ ಸ್ವಯಂಸೇವಕರು ಖಾಕಿ ಚಡ್ಡಿಯ ಬದಲಿಗೆ ಖಾಕಿ ಪ್ಯಾಂಟ್ ಧರಿಸುತ್ತಾರೆ. ಸಂಘದ ಪ್ರಾರ್ಥನಾ ಗೀತೆ 'ನಮಸ್ತೆ ಸದಾ ವತ್ಸಲೇ ಮಾತೃಭೂಮಿ' ಹಾಡಿಗೆ ಶತಮಾನೋತ್ಸವದ ಸಂದರ್ಭದಲ್ಲಿ ಹೊಸ ರೂಪವೂ ಸಿಕ್ಕಿದೆ.



ಮೋಹನ ಭಾಗವತ್

'ಭಾರತೀಯರೆಲ್ಲರೂ ಹಿಂದೂಗಳೇ'

ಭಾರತ ಹಿಂದೂ ರಾಷ್ಟ್ರ ಎನ್ನುವುದು ಆರ್‌ಎಸ್‌ಎಸ್ ಪ್ರತಿಪಾದನೆ. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಹೊರಗಿನಿಂದ ಬಂದವರಾಗಿದ್ದು, ಸ್ಥಳೀಯರನ್ನು ಮತಾಂತರ ಮಾಡಿ ತಮ್ಮ ಸಂಖ್ಯೆ ಹೆಚ್ಚಿಸಿಕೊಂಡರು ಎಂದು ಸಂಘದ ಎರಡನೇ ಸರಸಂಘಚಾಲಕರಾಗಿದ್ದ ಗೋಳ್ವಲ್ಕರ್ ಅವರು ಪ್ರತಿಪಾದಿಸಿದ್ದರು. ಈ ವಿಚಾರದಲ್ಲಿ ಆರ್‌ಎಸ್‌ಎಸ್‌ನ ಹಾಲಿ ಸರಸಂಘಚಾಲಕರಾಗಿರುವ ಮೋಹನ ಭಾಗವತ್ ಅವರದ್ದು ಭಿನ್ನ ನಿಲುವು. ಭಾರತದಲ್ಲಿ ಇರುವವರೆಲ್ಲರೂ– ಅವರು ಯಾವುದೇ ಧರ್ಮಕ್ಕೆ ಸೇರಿದದರೂ– ಹಿಂದೂಗಳೇ ಎನ್ನುವುದು ಅವರ ಹೇಳಿಕೆ. ಯಾವ ಧರ್ಮಕ್ಕೆ ಸೇರಿದವರಾಗಿದ್ದರೂ ಭಾರತದಲ್ಲಿ ಇರುವವರೆಲ್ಲರೂ ಒಂದೇ ಮೂಲದಿಂದ ಬಂದವರು ಎನ್ನುವುದು ಅವರ ಅಭಿಪ್ರಾಯ.

ಆರ್‌ಎಸ್‌ಎಸ್ ನಡೆದುಬಂದ ಹಾದಿ

1925, ಸೆಪ್ಟೆಂಬರ್ 27	ವಿಜಯದಶಮಿಯ ದಿನ ಸಂಘ ಉದ್ಘಾಟನೆಯ ಘೋಷಣೆ ಮಾಡಿದ ಡಾ.ಕೇಶವ ಬಲಿರಾಮ್ ಹೆಡ್ಗೇವಾರ್. ನಾಗ್ಪುರದ ಅವರ ಮನೆಯಲ್ಲೇ ಸಂಘಟನೆ ಆರಂಭ
1926, ಏಪ್ರಿಲ್ 17	ಸಂಘಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಎಂಬ ಹೆಸರು ಆಯ್ಕೆ. ಸಭೆಯಲ್ಲಿ ನಾಲ್ಕು ಹೆಸರುಗಳ ಪ್ರಸ್ತಾಪ. ಅವುಗಳಲ್ಲಿ ಒಂದು ಆಯ್ಕೆ. ಜರಿಪಟಕಾ ಮಂಡಲ, ಭಾರತ ಉದ್ಧಾರಕ ಮಂಡಲ, ಹಿಂದೂ ಸ್ವಯಂಸೇವಕ ಸಂಘ ಪ್ರಸ್ತಾಪವಾದ ಇನ್ನುಳಿದ ಹೆಸರುಗಳು. ಇದೇ ವರ್ಷದ ಮೇ 28ರಿಂದ ನಾಗ್ಪುರದಲ್ಲಿ ನಿತ್ಯ ಶಾಖೆಗಳ ಆರಂಭ
1929, ನವೆಂಬರ್ 9, 10	ಹೆಡ್ಗೇವಾರ್ ಅವರನ್ನು ಸಂಘದ ಮುಖ್ಯಸ್ಥ (ಸರಸಂಘಚಾಲಕ) ಮತ್ತು ಬಾಲಾಜಿ ಹುದ್ದಾರ್ ಅವರನ್ನು ಪ್ರಧಾನ ಕಾರ್ಯದರ್ಶಿ (ಸರಕಾರ್ಯವಾಹ) ಮತ್ತು ಮಾರ್ತಾಂಡರಾವ್ ಜೋಗ್ ಅವರನ್ನು ಮುಖ್ಯ ತರಬೇತುದಾರರಾಗಿ (ಸರಸೇನಾಪತಿ) ನಿಯೋಜನೆ
1940	ಪುಣೆಯಲ್ಲಿ ನಡೆದ ಪ್ರಾಂತ್ಯ ಬೈಠಕ್‌ಗೆ ವೀರ ಸಾವರ್ಕರ್ ಭೇಟಿ. ಅದೇ ವರ್ಷ ಬ್ರಿಟಿಷ್ ಸರ್ಕಾರದಿಂದ ಸಂಘದ ಸಮವಸ್ತ್ರ –ಗಣವೇಷ ಮತ್ತು ಪಥಸಂಚಲನದ ಮೇಲೆ ನಿಷೇಧ
1940ರ ಜೂನ್ 20	ಅನಾರೋಗ್ಯದಿಂದ ಬಳಲುತ್ತಿದ್ದ ಹೆಡ್ಗೇವಾರ್ ಅವರನ್ನು ಭೇಟಿ ಮಾಡಿದ ಸುಭಾಷ್ ಚಂದ್ರ ಬೋಸ್. ಮರುದಿನ (ಜೂನ್ 21) ಆರ್‌ಎಸ್‌ಎಸ್ ಸಂಸ್ಥಾಪಕ ನಿಧನ
1940, ಜುಲೈ 3	ಮಾಧವ ಸದಾಶಿವ ಗೋಳ್ವಲ್ಕರ್ ಅವರು ಮುಖ್ಯಸ್ಥರಾಗಿ ನೇಮಕ
1947, ಸೆ.15	ದೆಹಲಿಯ ಭಂಗಿ ಕಾಲೊನಿಯಲ್ಲಿ 500 ಸ್ವಯಂಸೇವಕರನ್ನು ಉದ್ದೇಶಿಸಿ ಮಹಾತ್ಮ ಗಾಂಧೀಜಿ ಭಾಷಣ. ಇದೇ ವರ್ಷ ಆರ್ಗನೈಸರ್ ಮತ್ತು ಪಾಂಚಜನ್ಯ ವಾರಪತ್ರಿಕೆಗಳ ಆರಂಭ
1948, ಜನವರಿ 30	ಗಾಂಧೀಜಿಯವರ ಹತ್ಯೆ. ಮರುದಿನ ಅಂದರೆ ಫೆ.1ರಂದು ಗೋಳ್ವಲ್ಕರ್ ಬಂಧನ. ಸಂಘದ ಮೇಲೆ ನಿಷೇಧ ಹೇರಿದ ಮದ್ರಾಸ್ ಸರ್ಕಾರ. ಫೆ.4ರಂದು 17 ಸಾವಿರದಷ್ಟು ಸ್ವಯಂಸೇವಕರ ಬಂಧನ. ಫೆ.5ರಂದು ಸಂಘದ ಶಾಖೆಗಳನ್ನು ಮುಚ್ಚುವ ಘೋಷಣೆ
1949	ಸಂಘದ ಸಂವಿಧಾನ ಕರಡು ಸಿದ್ಧ
1949, ಜುಲೈ 12	ಸರ್ಕಾರದಿಂದ ಸಂಘದ ಮೇಲಿನ ನಿಷೇಧ ವಾಪಸ್. ಮರುದಿನ ಜೈಲಿನಿಂದ ಗೋಳ್ವಲ್ಕರ್ ಬಿಡುಗಡೆ. ಅದೇ ವರ್ಷ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ಗೆ (ಎಬಿವಿಪಿ) ಚಾಲನೆ
1951	ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರಿಂದ ಭಾರತೀಯ ಜನಸಂಘ ಸ್ಥಾಪನೆ
1952	ದೇಶದಲ್ಲಿ ಗೋಹತ್ಯೆ ನಿಷೇಧಕ್ಕೆ ಆಗ್ರಹಿಸಿ ಗೋರಕ್ಷಾ ಆಂದೋಲನ ಆರಂಭ
1963	ಜನವರಿ 26ರಂದು ನಡೆಯುವ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಲು ಆರ್‌ಎಸ್‌ಎಸ್‌ಗೆ ಆಹ್ವಾನ. 3,000 ಸ್ವಯಂಸೇವಕರು ಭಾಗಿ
1964	ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸ್ಥಾಪನೆ
1973, ಜೂನ್ 6	ಸಂಘದ ಮುಖ್ಯಸ್ಥ ಗೋಳ್ವಲ್ಕರ್ ನಿಧನ. ಮಧುಕರ ದತ್ತಾತ್ರೇಯ ದೇವರಸ್–ಬಾಳಾ ಸಾಹೇಬ್ ಅವರು 3ನೇ ಸರಸಂಘಚಾಲಕರಾಗಿ ನೇಮಕ
1975, ಜೂನ್ 25	ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿಕೆ
1975, ಜುಲೈ 4	ಎರಡನೇ ಬಾರಿಗೆ ಆರ್‌ಎಸ್‌ಎಸ್‌ಗೆ ನಿಷೇಧ
1977	ಹೊಸದಾಗಿ ಸ್ಥಾಪನೆಯಾದ ಜನತಾ ಪಕ್ಷದೊಂದಿಗೆ ಭಾರತೀಯ ಜನಸಂಘ ವಿಲೀನ
1977, ಮಾರ್ಚ್ 22	ಸಂಘದ ಮೇಲಿನ ನಿಷೇಧ ಹಿಂಪಡೆದ ಸರ್ಕಾರ
1977, ನವೆಂಬರ್ 3	ಪಟ್ನಾದಲ್ಲಿ ಆರ್‌ಎಸ್‌ಎಸ್ ಸಭೆಯನ್ನು ಉದ್ದೇಶಿಸಿ ಜಯಪ್ರಕಾಶ ನಾರಾಯಣ ಭಾಷಣ
1980	95 ಸಾವಿರ ಗ್ರಾಮಗಳು ಮತ್ತು 1 ಕೋಟಿ ಕುಟುಂಬಗಳನ್ನು ಸಂಪರ್ಕಿಸುವ ಜನ ಸಂಪರ್ಕ ಅಭಿಯಾನ ಆರಂಭ
1989	ಪಂಜಾಬ್‌ನ ಮೊಗಾ ಪಟ್ಟಣದಲ್ಲಿ ಆರ್‌ಎಸ್‌ಎಸ್ ಶಾಖೆಯ ಮೇಲೆ ಶಂಕಿತ ಖಾಲಿಸ್ತಾನಿ ಉಗ್ರರಿಂದ ದಾಳಿ 18 ಸ್ವಯಂಸೇವಕರು ಹಾಗೂ ಇತರ ಆರು ಮಂದಿ ಸಾವು
1992, ಡಿಸೆಂಬರ್ 6	ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸ
1992, ಡಿಸೆಂಬರ್ 10	ಸಂಘದ ಮೇಲೆ ಮತ್ತೆ ನಿಷೇಧ ಹೇರಿದ ಸರ್ಕಾರ
1993, ಜೂನ್ 4	ನಿಷೇಧ ವಾಪಸ್
1994, ಮಾರ್ಚ್ 11	ಪ್ರೊ.ರಾಜೇಂದ್ರ ಸಿಂಗ್–ರಾಜು ಭೈಯ್ಯಾ ಅವರು ನಾಲ್ಕನೇ ಸರಸಂಘಚಾಲಕರಾಗಿ ನೇಮಕ
2000	ಆರ್‌ಎಸ್‌ಎಸ್‌ನ ಐದನೇ ಮುಖ್ಯಸ್ಥರಾಗಿ ಕೆ.ಎಸ್.ಸುದರ್ಶನ್ ಆಯ್ಕೆ
2009	ಸಂಘದ ಆರನೇ ಸರಸಂಘಚಾಲಕರಾಗಿ ಮೋಹನ್ ಭಾಗವತ್ ಅವರ ಹೆಸರನ್ನು ಘೋಷಿಸಿದ ಸುದರ್ಶನ್

ಆರ್‌ಎಸ್‌ಎಸ್ ಮತ್ತು ತ್ರಿವರ್ಣ ಧ್ವಜ

ಭಾರತದ ರಾಷ್ಟ್ರ ಧ್ವಜವಾದ ತ್ರಿವರ್ಣ ಧ್ವಜವನ್ನು ಆರ್‌ಎಸ್‌ಎಸ್ ತನ್ನ ಶಾಖೆಗಳಲ್ಲಿ ಹಾರಿಸುತ್ತಿಲ್ಲ ಎನ್ನುವ ವಿವಾದ ಹುಟ್ಟಿಕೊಂಡಿತ್ತು. ಸಂಘದ ಶಾಖೆಗಳಲ್ಲಿ ತ್ರಿವರ್ಣ ಧ್ವಜದ ಬದಲಿಗೆ ತಮ್ಮ ಕೇಸರಿ ಧ್ವಜವನ್ನು ಹಾರಿಸಬೇಕು ಎಂದು ಹೆಡ್ಗೇವಾರ್ ಸೂಚಿಸಿದ್ದರು ಎಂದು ಹಲವರ ಹೇಳಿಕೆ ಆಧರಿಸಿ ಬಿಬಿಸಿ ವರದಿ ಮಾಡಿದೆ. 1950 ಜ.26ರ ನಂತರ ಐದು ದಶಕಗಳವರೆಗೆ ಸಂಘದ ಶಾಖೆಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿರಲಿಲ್ಲ ಎನ್ನುವ ವಿಚಾರ ವಿವಾದಕ್ಕೆ ಕಾರಣವಾಗಿತ್ತು. 2001ರ ಜ.26ರಂದು ನಾಗ್ಪುರದ ಆರ್‌ಎಸ್‌ಎಸ್ ಸ್ಮೃತಿಭವನಕ್ಕೆ ನುಗ್ಗಿದ ಕೆಲವರು ಬಲವಂತವಾಗಿ ತ್ರಿವರ್ಣ ಧ್ವಜ ಹಾರಿಸಲು ಪ್ರಯತ್ನಿಸಿದ್ದರು.

2002ರಿಂದ ಸಂಘದ ಶಾಖೆಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲಾಗುತ್ತಿದೆ. ಅಲ್ಲಿಯವರೆಗೆ ಖಾಸಗಿಯವರಿಗೆ ತ್ರಿವರ್ಣ ಧ್ವಜ ಹಾರಿಸಲು ಅವಕಾಶ ಇರಲಿಲ್ಲವಾದ್ದರಿಂದ ರಾಷ್ಟ್ರ ಧ್ವಜ ಹಾರಿಸುತ್ತಿರಲಿಲ್ಲ ಎನ್ನುವುದ ಸಂಘದ ಸಮರ್ಥನೆ. ಸಂಘವು ರಾಷ್ಟ್ರ ಧ್ವಜವನ್ನು ಗೌರವಿಸುತ್ತದೆ ಎಂದು ಅದರ ಮುಖ್ಯಸ್ಥ ಮೋಹನ ಭಾಗವತ್ ಅವರು ಹಲವು ಸಂದರ್ಭಗಳಲ್ಲಿ ಹೇಳಿದ್ದಾರೆ.

ಮಹಿಳೆಯರಿಗೆ ಪ್ರತ್ಯೇಕ ಸಂಘಟನೆ

ಸಂಘದ ಸದಸ್ಯರಾಗಲು ಯಾವುದೇ ವಿಧಿ–ವಿಧಾನಗಳನ್ನು ಅನುಸರಿಸಬೇಕಿಲ್ಲ ಎಂದು ಆರ್‌ಎಸ್‌ಎಸ್ ಹೇಳುತ್ತದೆ. ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಯಾವುದೇ ನೋಂದಣಿ ಅಗತ್ಯವಿಲ್ಲದೇ ಯಾರು ಬೇಕಾದರೂ (ಪುರುಷರು ಮಾತ್ರ) ಸಂಘದ ಸದಸ್ಯರಾಗಬಹುದು, ಸ್ವಯಂಸೇವಕರಾಗಬಹುದು; ಆದರೆ, ಮಹಿಳೆಯರಿಗೆ ಸದಸ್ಯತ್ವ ನೀಡಲಾಗುವುದಿಲ್ಲ. ಮಹಿಳೆಯರು 1936ರಲ್ಲಿ ಆರಂಭವಾಗಿರುವ ರಾಷ್ಟ್ರ ಸೇವಿಕಾ ಸಮಿತಿಯ ಸದಸ್ಯರಾಗಬಹುದು ಎಂದು ಅದು ತಿಳಿಸಿದೆ.



ನಿಜವಾದ ನ್ಯಾಯವೆಂದರೆ...



ನುಡಿ ಬೆಳಗು

ದೀಪಾ ಹಿರೇಗುತ್ತಿ

ಅಕ್ಬರ್ ಮತ್ತು ಬೀರಬಲ್ ಆಸ್ಥಾನದಲ್ಲಿರುವಾಗ ಒಬ್ಬ ಬಡ ರೈತ ಬಂದ. ಆತಂಕದಲ್ಲಿದ್ದ ಆತ ಬಂದವನೇ ಅಕ್ಬರನಿಗೆ ತಲೆಬಾಗಿ, 'ಜಹಾಪನಾ, ಪಕ್ಕದ ಮನೆಯವನ ದನಕರುಗಳು ನನ್ನ ಗದ್ದೆಯ ಪೈರನ್ನು ತಿಂದುಬಿಟ್ಟಿವೆ. ನಾನು ಬಡವ. ನಾನು ಎಷ್ಟು ಸಾರಿ ಹೇಳಿದರೂ ಅವನು ಕೇಳುವುದೇ ಇಲ್ಲ, ದಯವಿಟ್ಟು ನನಗೆ ನ್ಯಾಯ ಕೊಡಿ' ಅಂದ. ಅಕ್ಬರ್ ಬೀರಬಲ್ಲನೆಡೆಗೆ ತಿರುಗಿ ಆ ಸಮಸ್ಯೆಯನ್ನು ಪರಿಹರಿಸುವಂತೆ ಆದೇಶಿಸಿದ. ಆಗ ಬೀರಬಲ್ ರೈತನ ಕಡೆಗೆ ತಿರುಗಿ, 'ನಿನ್ನ ನೆರೆಮನೆಯವನಿಗೆ ಏನು ಶಿಕ್ಷೆ ಆಗಬೇಕೆಂದು ನೀನು ಬಯಸುತ್ತೀ' ಎಂದು ಕೇಳಿದ. ಅದಕ್ಕೆ ಸಿಟ್ಟಿನಲ್ಲಿದ್ದ ರೈತ, 'ಅವನ ದನಕರುಗಳನ್ನು ತೆಗೆದುಕೊಳ್ಳಿ' ಅಂದ.

ಬೀರಬಲ್ ಒಂದು ಕ್ಷಣ ಯೋಚನೆ ಮಾಡಿ ಮಾರನೇ ದಿನ ಬರಲು ಹೇಳಿದ. ಮಾರನೇ ದಿನ ಆಸ್ಥಾನಕ್ಕೆ ರೈತನೂ ಬಂದ, ನೆರೆಮನೆಯಾತನೂ ಬಂದ. ಬೀರಬಲ್ ಹೇಳಿದ, 'ದನಕರುಗಳು ನಿರಪರಾಧಿಗಳು, ಆಹಾರ ಇರುವಲ್ಲಿ ಹೋಗುವುದು ಅವುಗಳ ಸ್ವಭಾವ. ಅವುಗಳನ್ನು ಮುಟ್ಟುಗೋಲು ಹಾಕಿಕೊಂಡರೆ ಏನೂ ಸಾಧಿಸಿದಂತಾಗುವುದಿಲ್ಲ' ಅಂದವನೇ ನೆರೆಮನೆಯಾತನ ಕಡೆ ತಿರುಗಿ, 'ನೋಡು ನಿನ್ನದು ನಿರ್ಲಕ್ಷ್ಯದ ಸ್ವಭಾವ. ನಿನ್ನ ರಾಸುಗಳು ರೈತನ ಪೈರನ್ನು ತಿಂದಿದ್ದಕ್ಕೆ ನೀನು ಪರಿಹಾರ ಕೊಡಬೇಕು. ಅಷ್ಟೇ ಅಲ್ಲ, ನಿನ್ನ ಮನೆಯ ಸುತ್ತ ಗಟ್ಟಿಯಾದ ಬೇಲಿ ಹಾಕಿಸಿ ದನಕರುಗಳು ಅಲ್ಲಿಗೆ ಹೋಗದಂತೆ ಮಾಡು. ಮತ್ತೊಂದು ಸಲ ಹೀಗಾದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎಂದ.

ರೈತ ಮತ್ತು ನೆರೆಮನೆಯವನು ಇಬ್ಬರೂ ನಮಸ್ಕರಿಸಿ ಹೋಗುತ್ತಾರೆ. ಆಗ ಅಕ್ಬರ್, 'ಭೇಷ್ ಬೀರಬಲ್, ಮತ್ತೆ ನಿನ್ನ ಬುದ್ಧಿವಂತಿಕೆಯಿಂದಲೇ ಈ ಸಮಸ್ಯೆಯನ್ನು ಪರಿಹಾರ ಮಾಡಿಬಿಟ್ಟೆ' ಅಂದ. ಆಗ ಬೀರಬಲ್, 'ಜಹಾಪನಾ, ನಿಜವಾದ ನ್ಯಾಯ ಎಂದರೆ ಕಠಿಣ ಶಿಕ್ಷೆ ನೀಡುವುದಲ್ಲ, ದೊಡ್ಡ ತಪ್ಪುಗಳಿಗೆ ಶಿಕ್ಷೆ ಬೇಕು. ಆದರೆ ಸಣ್ಣಪುಟ್ಟ ತಪ್ಪುಗಳನ್ನು ಸುಧಾರಿಸಿ ಮತ್ತೆ ಅವನ್ನು ಪುನರಾವರ್ತನೆ ಮಾಡದಂತೆ ನೋಡಿಕೊಳ್ಳುವುದೇ ನಿಜವಾದ ನ್ಯಾಯ' ಎಂದ.

ನಿಜ, ನಿಜವಾದ ನ್ಯಾಯ ವ್ಯಕ್ತಿಗಳನ್ನು ಸುಧಾರಿಸುತ್ತದೆ. ಸಣ್ಣಪುಟ್ಟ ತಪ್ಪುಗಳಿಗೆ ದೊಡ್ಡ ಶಿಕ್ಷೆ ಕೊಟ್ಟುಬಿಟ್ಟರೆ ಅವರಿಂದ ಮುಂದೆ ಮತ್ತಷ್ಟು ದೊಡ್ಡ ಅಪರಾಧಗಳಾಗುವ ಸಾಧ್ಯತೆ ಇರುತ್ತದೆ. ಆದರೆ, ಅವರ ತಪ್ಪುಗಳ ಅರಿವು ಅವರಿಗೆ ಆಗುವಂತೆ ಮಾಡಿದರೆ ಅದು ಭವಿಷ್ಯದಲ್ಲಿ ಮತ್ತೆ ಆ ತಪ್ಪುಗಳನ್ನು ಮಾಡದಂತೆ ಎಚ್ಚರಿಕೆ ವಹಿಸಲು ಸಹಾಯಕವಾಗುತ್ತದೆ. ಇಂದಿನ ಮಕ್ಕಳೊಂದಿಗೆ ನಾವು ಇದನ್ನೇ ಮಾಡಬೇಕಿದೆ. ಅವರನ್ನು ಸಹಾನುಭೂತಿಯಿಂದ ನೋಡಿ ಅವರ ತಪ್ಪುಗಳನ್ನು ಅವರಿಗೆ ತಿಳಿಸಿ ಹೇಳಬೇಕಿದೆ. ಏಕೆಂದರೆ ಈ ಸಣ್ಣ ಹೆಜ್ಜೆಗಳೇ ಸಮಾಜವನ್ನು ಸರಿಯಾದ ದಾರಿಯಲ್ಲಿ ನಡೆಸುವಂಥವು. ❖

ಗುಂಡಣ್ಣ



ಪದಬಂಧ 6180


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಸಂಪ್ರದಾಯ ಪರವಾದುದು (6)
4.ನಮ್ಮ ರಾಷ್ಟ್ರ ಪಕ್ಷಿ (3)
7.ಕೈಯಿಲ್ಲಿ ತಿರುವುಮುರುವಾಗಿದೆ (2)
9.ಅದೇ ತಾನೆ ಮೂಡುತ್ತಿರುವ ಸೂರ್ಯ (5)
12.ಮೂಲಕೃತಿಯ ಸ್ಥೂಲ ಭಾಷಾಂತರ (5)
14.ಸವಿತಾಳ ಕೈಯಡುಗೆಯ ರುಚಿ! (2)
17.ಪ್ರತಿಯಲ್ಲಿರುವ ಏಳಿಗೆ ಕಾಣುತ್ತಿದೆಯೇ? (3)
18.ಪರಮಾತ್ಮನನ್ನು ಹೀಗೂ ಹೇಳುತ್ತಾರೆ (6)

ಮೇಲಿಂದ ಕೆಳಕ್ಕೆ

2.ನೂರಡಿ ದೂರದಲ್ಲಿದ್ದರೂ ಕೇಳಿದ ಮಾತು (2)
3.ತೀರದ ಹತ್ತಿರ ಹೋದಾಗ ಕವಿದಿರುವ ಕತ್ತಲು (3)
5.ಹಾಸ್ಯ ಈ ವಿಧವಾಗಿ ಬಂದಿದೆಯಲ್ಲಾ? (3)
6.ಒಂದನ್ನೊಂದು ಅಗಲದೇ ಇರುವಿಕೆ (5)
8.ಲಲಿತ ಕಲೆಗಳನ್ನು ಬಲ್ಲವನು (4)
9.ಊಟ ಮಾಡದಿರುವಿಕೆ (4)
10.ನರಕಾಧಿಪತಿ ಇಲ್ಲಿದ್ದಾನೆ (2)
11.ತಲೆಕೂದಲಿಗೆ ಹತ್ತುವ ಕ್ರಿಮಿ (2)
13.ಓಲಗ ಶಾಲೆಯಲ್ಲಿ ನುಡಿಸಿದ ನಾಗಸ್ವರ (3)
15.ಹೆಂಡತಿಯನ್ನು ಕಳೆದುಕೊಂಡವನು (3)
16.ಸಂಪುಟದಲ್ಲಿ ಕಾಣಿಸಿದ ಮುಷ್ಕರ (2)



6179ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಭೂತಿಪೂಜೆ 3.ಚಮಚ
5.ವರ್ಗೀಕರಣ 7.ಕವಾಟ
8.ಹುಸಿಮುನಿಸು 11.ಅಗುಳು
12.ನಾಮಕರಣ 14.ರುಸುಮು
15.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ವಿಭಾವನೆ 2.ತಿರುಕ
4.ಚರಟ 6.ರಕ್ಕಸಿ
7.ಕಡಸು 8.ಹುರುಳು
9.ನಿಯಮ 10.ಜಾಣತನ
11.ಅತ್ತರು 13.ಕದನ

ಸುಡೊಕು 6564

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	9		2		5		6	
2			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		

6563 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಸೆಪ್ಟೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಅಷ್ಟಮಿ ಗಂ. 18-07 ನಕ್ಷತ್ರ: ಮೂಲ ಗಂ.6-18, ಯೋಗ: ಶೋಭನ ಗಂ. 25-03 ಕರಣ: ಬವ ಗಂ. 18-07 ಕನ್ಯಾ ಮಾಸದ 13 ನೇ ದಿನ. ಮಳೆ ನಕ್ಷತ್ರ : ಹಸ್ತಾ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 04-30 ಸೂರ್ಯೋದಯ : 06-23 ಸೂರ್ಯಾಸ್ತ : 06-18, ಮುಸ್ಲಿಂ ದಿನಾಂಕ : 07 ರಬಿಯುಸ್ಸಾನಿ , ದಿನ ವಿಶೇಷ : ದುರ್ಗಾಷ್ಟಮಿ , ಅದೃಷ್ಟ ಸಂಖ್ಯೆ : 8, 11

ಮೇಷ: ಕುಟುಂಬದವರ ಜತೆ ಕಳೆಯುವ ಪ್ರತಿಕ್ಷಣವು ನೆನಪಿಟ್ಟುಕೊಳ್ಳಬೇಕಾದಂಥ ಸನ್ನಿವೇಶಗಳಾಗಿರುತ್ತದೆ. ಮಕ್ಕಳ ಸಂತೋಷಕ್ಕಾಗಿ ರಹಸ್ಯವಾಗಿ ಸಹಾಯ ಮಾಡುತ್ತೀರಿ.

ವೃಷಭ: ಏಕಾಗ್ರತೆಯಿಂದ ಶಿವನ ನಾಮಸ್ಮರಣೆ ಅಥವಾ ಧ್ಯಾನ ಮಾಡುವುದು ಒಳ್ಳೆಯದು. ಮನೆ ಕೊಳ್ಳುವ ವಿಷಯದ ಬಗ್ಗೆ ಮಾಹಿತಿ ಪಡೆಯಿರಿ. ಶತ್ರುಗಳು ಮಿತ್ರರಾಗಲು ಬಯಸಿ ಬರುತ್ತಾರೆ.

ಮಿಥುನ: ಕೌಟುಂಬಿಕ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು ಕಾರ್ಯಪ್ರವೃತ್ತರಾಗುವಿರಿ. ಅವಿವಾಹಿತರಿಗೆ ಒಳ್ಳೆಯ ಕಡೆ ಸಂಬಂಧ ಬರಲಿದೆ. ನಾಜೂಕಿನ ಕೆಲಸ ಕಾರ್ಯಗಳಿಂದಾಗಿ ಮನ್ನಣೆ ಗಳಿಸುವಿರಿ.

ಕರ್ಕಾಟಕ: ಹಿಂದೂಸ್ತಾನಿ ಸಂಗೀತಗಾರರು ನಿಮ್ಮ ಕಚೇರಿಯಲ್ಲಿ ಭಾವ-ಪರವಶರಾಗಿ ಹಾಡಿದ ವಿರಹ ರಾಗಕ್ಕೆ ಅಭಿಮಾನಿಗಳು ಮರುಳಾಗುತ್ತಾರೆ. ಆರಂಭಿಸಿದ ಕಾರ್ಯಗಳು ವಿಳಂಬಗತಿಯಲ್ಲಿ ಸಾಗಿದರೂ ಪೂರ್ಣಗೊಳ್ಳಲಿವೆ.

ಸಿಂಹ: ಬದ್ಧವೈರಿಗಳ ಮನೆಯ ಕಷ್ಟವನ್ನು ನೋಡಿ ಮನಸ್ಸು ಕರಗಿ ಸಹಾಯ ಮಾಡುವ ಸಾಧ್ಯತೆಗಳಿವೆ. ಎದುರಾಳಿಗೆ ಪರಿಣಾಮಕಾರಿಯಾಗುವ ನಿರ್ಧಾರ ಅಗತ್ಯವಾಗಿ ತೆಗೆದುಕೊಳ್ಳಿ. ಪಾಲುದಾರಿಕೆ ವ್ಯವಹಾರಗಳು ಲಾಭ ತರಲಿದೆ.

ಕನ್ಯಾ: ಧಾರ್ಮಿಕ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಲೋಪದೋಷವನ್ನು ಮಾಡದೆ ಅತ್ಯಂತ ಎಚ್ಚರಿಕೆ ವಹಿಸಿ. ವ್ಯಂಗ್ಯಚಿತ್ರ ಕಲಾವಿದರಿಗೆ ಮಾಸ ಪತ್ರಿಕೆಯ ಸಂಸ್ಥೆಯಿಂದ ಅವಕಾಶಗಳು ದೊರೆಯಲಿವೆ.

ತುಲಾ: ಉತ್ತಮ ವಿಚಾರಗಳು ಜಾರಿಗೆ ಬರಬೇಕೆಂದು ಮಾಡುತ್ತಿರುವ ಪ್ರಯತ್ನ ಶೀಘ್ರ ಶುಭಫಲ ನೀಡುವುದು. ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು, ಹೊಸ ಚೈತನ್ಯ ತುಂಬಿ ಬರಲಿದೆ.

ವೃಶ್ಚಿಕ: ಕೆಲವು ದಿನಗಳ ಬಳಿಕ ಸಮಾನಮನಸ್ಕರ ಜತೆ ಕಳೆದ ಸಮಯವು ಹಲವು ತರಹದ ಜ್ಞಾನವರ್ಧನೆ ಮಾಡಿಕೊಳ್ಳಲು ಸಹಾಯಕಾರಿ. ಅಧಿಕಾರಿ ಹಾಗೂ ಹಿರಿಯರಿಂದ ಸಹಾಯ ಸಹಕಾರಗಳನ್ನು ಅಪೇಕ್ಷಿಸುವಂತಹ ದಿನ.

ಧನು: ತಾಯಿಯ ಬ್ಯಾಂಕ್ ಚಟುವಟಿಕೆಗಳು ಹಾಗೂ ಕಚೇರಿ ಕೆಲಸಗಳು ಜವಾಬ್ದಾರಿಗೆ ಬರುವುದರಿಂದ ತಿರುಗಾಟ ಮಾಡಬೇಕಾಗುವುದು. ಹನುಮ ಸಮೇತನಾದ ಶ್ರೀರಾಮನ ಪರಿವಾರವನ್ನು ಆರಾಧಿಸಿ ಶ್ರೇಯೋವಂತರಾಗಿರಿ.

ಮಕರ: ಯಾರಿಂದಲೋ ಕೇಳಿಸಿಕೊಂಡ ವಾರ್ತೆಗಳನ್ನು ಹಬ್ಬಿಸುವ ಮೊದಲು ಆ ಸುದ್ದಿಯು ಸತ್ಯವೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳಿರಿ. ವಾತ-ಪಿತ್ತಗಳ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ. ಮನೋರಂಜನೆಗಾಗಿ ಖರ್ಚು ಮಾಡುವಿರಿ.

ಕುಂಭ: ವ್ಯಾಪಾರ ವ್ಯವಹಾರಗಳು ಅಧಿಕ ವರಮಾನಗಳನ್ನು ತರಲಿವೆ. ನಿವೃತ್ತಿ ಜೀವನವನ್ನು ಸುಖಕರವಾಗಿ ಕಳೆಯಲು ಹೆಚ್ಚು ಶ್ರಮವಹಿಸಿ ಕೆಲಸ ಮಾಡುವ ಯೋಜನೆಯನ್ನು ಮಾಡುವಿರಿ.

ಮೀನ: ಉದ್ಯೋಗದ ವಿಷಯದಲ್ಲಿ ಉತ್ತಮ ಅವಕಾಶಗಳು ಕೈತಪ್ಪುವ ಸಂದರ್ಭಗಳು ಎದುರಾಗಬಹುದು. ಈ ದಿನ ನೀವು ಆಡಿದ ಮಾತುಗಳು ತಿರುಗಿ ಮುಳ್ಳಾಗುವ ರೀತಿಯಲ್ಲಿ ಇರಲಿದೆ.




‘ತೀರ್ಥರೂಪ ತಂದೆಯವರಿಗೆ’ ಮೊದಲ ಹಾಡು ರಿಲೀಸ್

‘ಹೊಂದಿಸಿ ಬರೆಯಿರಿ’ ಖ್ಯಾತಿಯ ರಾಮೇನಹಳ್ಳಿ ಜಗನ್ನಾಥ್ ನಿರ್ದೇಶನದ ‘ತೀರ್ಥರೂಪ ತಂದೆಯವರಿಗೆ’ ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ.

ಶೀರ್ಷಿಕೆಯ ಮೂಲಕವೇ ಗಮನಸೆಳೆದಿರುವ ಈ ಸಿನಿಮಾದಲ್ಲಿ ತೆಲುಗು ಕಿರುತೆರೆಯಲ್ಲಿ ಹೆಸರು ಮಾಡಿರುವ ಕನ್ನಡದ ನಿಹಾರ್ ಮುಕೇಶ್ ನಾಯಕನಾಗಿ ನಟಿಸಿದ್ದಾರೆ. ಬಿಡುಗಡೆಯಾಗಿರುವ ‘ನನದೇ ಜಗದಲಿ’ ಹಾಡಿಗೆ ರಾಮೇನಹಳ್ಳಿ ಜಗನ್ನಾಥ್ ಅವರೇ ಸಾಹಿತ್ಯ ಬರೆದಿದ್ದಾರೆ. ಭಾವನಾತ್ಮಕವಾಗಿ ಸಾಗುವ ಈ ಹಾಡಿಗೆ ಕಪಿಲ್ ಕಪಿಲನ್ ದನಿಯಾಗಿದ್ದಾರೆ. ಜೋ ಕೋಸ್ಟ ಸಂಗೀತವಿರುವ ಈ ಹಾಡಿನಲ್ಲಿ ಅಮ್ಮ ಮಗನ ಬಾಂಧವ್ಯವನ್ನು ಕಟ್ಟಿಕೊಡಲಾಗಿದೆ.

ನಿಹಾರ್ ಮುಕೇಶ್‌ಗೆ ನಾಯಕಿಯಾಗಿ ರಚನಾ ಇಂದರ್ ನಟಿಸಿದ್ದಾರೆ. ರಾಜೇಶ್ ನಟರಂಗ, ಸಿತಾರಾ, ರವೀಂದ್ರ ವಿಜಯ್, ಅಜಿತ್ ಹಂಡೆ ಸೇರಿದಂತೆ ಅನುಭವಿ ತಾರಾಬಳಗ ಚಿತ್ರದಲ್ಲಿದೆ. ಚಿತ್ರವು ‘ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್’ ಮೂಲಕ ನಿರ್ಮಾಣ ಆಗಿದ್ದು, ರಾಮೇನಹಳ್ಳಿ ಜಗನ್ನಾಥ್ ಅವರೇ ಕಥೆ ಬರೆದಿದ್ದಾರೆ. ‘ಹೊಂದಿಸಿ ಬರೆಯಿರಿ’ ಚಿತ್ರ ನಿರ್ಮಾಣ ಮಾಡಿದ್ದ ‘ಸಂಡೇ ಸಿನಿಮಾಸ್’ ಈ ಚಿತ್ರವನ್ನು ಪ್ರಸ್ತುತ-ಪಡಿಸುತ್ತಿದೆ. ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನ, ಪ್ರಶಾಂತ್ ರಾಜಪ್ಪ ಸಂಭಾಷಣೆ ಚಿತ್ರಕ್ಕಿದೆ.





ಆಲಿಯಾ ಭಟ್

ಸಂಜಯ್ ಲೀಲಾ ಬನ್ಸಾಲಿ ಜೊತೆ ರಣ್‌ಬೀರ್ ಸಿನಿಮಾ

ಹದಿನೆಂಟು ವರ್ಷಗಳ ಬಳಿಕ ಮತ್ತೊಮ್ಮೆ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಜೊತೆ ಸಿನಿಮಾವೊಂದನ್ನು ಮಾಡಲು ನಟ ರಣ್‌ಬೀರ್ ಕಪೂರ್ ಸಜ್ಜಾಗಿದ್ದಾರೆ. ಇದೇ ಸಂದರ್ಭದಲ್ಲಿ ತಮ್ಮ ನಟನೆಯ ಹಿಂದಿನ ಗುರು ಸಂಜಯ್ ಲೀಲಾ ಬನ್ಸಾಲಿ ಎಂದಿದ್ದಾರೆ ರಣ್‌ಬೀರ್.

2007ರಲ್ಲಿ ತೆರೆಕಂಡಿದ್ದ ಬನ್ಸಾಲಿ ನಿರ್ದೇಶನದ ‘ಸಾವರಿಯಾ’ ಸಿನಿಮಾ ಮೂಲಕ ರಣ್‌ಬೀರ್ ಚಿತ್ರರಂಗಕ್ಕೆ ಕಾಲಿಟ್ಟಿದ್ದರು. ಇದೀಗ ‘ಲವ್ ಆ್ಯಂಡ್ ವಾರ್’ ಎನ್ನುವ ಸಿನಿಮಾದಲ್ಲಿ ರಣ್‌ಬೀರ್‌ಗೆ ಬನ್ಸಾಲಿ ಮತ್ತೊಮ್ಮೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಸಿನಿಮಾ ಕುರಿತು ತಮ್ಮ ಜನ್ಮದಿನದಂದು ಮಾಹಿತಿ ನೀಡಿರುವ ರಣ್‌ಬೀರ್, ‘ಸಿನಿಮಾ ಕುರಿತ ಎಲ್ಲಾ ವಿಷಯಗಳನ್ನು ಕಲಿಸಿದ ಗುರು ನಿರ್ದೇಶಕ ಬನ್ಸಾಲಿ. ಆಗಲೂ ಅವರೊಬ್ಬ ಮಾಸ್ಟರ್. ಇಂದು ಅದಕ್ಕಿಂತ ದೊಡ್ಡ ಮಾಸ್ಟರ್’ ಎಂದಿದ್ದಾರೆ. ಈ ಸಿನಿಮಾ 2026ರ ಮಾರ್ಚ್ 20ರಂದು ತೆರೆಕಾಣಲಿದ್ದು, ರಣ್‌ಬೀರ್ ಕಪೂರ್ ಪತ್ನಿ ಆಲಿಯಾ ಭಟ್ ಹಾಗೂ ವಿಕ್ಕಿ ಕೌಶಲ್ ತಾರಾಬಳಗದಲ್ಲಿದ್ದಾರೆ.

ಸಂಜಯ್ ಲೀಲಾ ಬನ್ಸಾಲಿ ಜೊತೆ ವಿಕ್ಕಿ ಕೌಶಲ್ ಮೊದಲ ಸಿನಿಮಾ ಇದಾಗಿದೆ. 2022ರಲ್ಲಿ ತೆರೆಕಂಡಿದ್ದ ಬನ್ಸಾಲಿ ನಿರ್ದೇಶನದ ‘ಗಂಗೂಬಾಯಿ ಕಾಠಿಯಾವಾಡಿ’ಯಲ್ಲಿ ಆಲಿಯಾ ಭಟ್ ನಟಿಸಿದ್ದರು.

ಸದ್ಯದಲ್ಲೇ ತೆರೆಗೆ ‘ಆಯುಧ’




ದೇವರಾಜ್ ಕುಮಾರ್ ನಿರ್ಮಿಸಿ, ನಿರ್ದೇಶಿಸಿ, ನಟಿಸಿರುವ ‘ಆಯುಧ’ ಸಿನಿಮಾ ಸದ್ಯದಲ್ಲೇ ತೆರೆಗೆ ಬರಲಿದೆ.

ಚಿತ್ರಕ್ಕೆ ಸೆನ್ಸಾರ್ ಮಂಡಳಿಯು ‘ಎ’ ಪ್ರಮಾಣ ಪತ್ರ ನೀಡಿದೆ. ವರ್ಷಾಂತ್ಯದಲ್ಲಿ ಸಿನಿಮಾವನ್ನು ತೆರೆಗೆ ತರುವ ಆಲೋಚನೆಯಲ್ಲಿ ಚಿತ್ರತಂಡವಿದೆ. ದೇವರಾಜ್ ಪಿಕ್ಚರ್ ಸ್ಟುಡಿಯೊ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಿದ್ದು, ಹೊನ್ನಾವರ, ಬೈಂದೂರು, ಚನ್ನಪಟ್ಟಣ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ. ನಾಲ್ಕು ಹಾಡುಗಳು ಹಾಗೂ ನಾಲ್ಕು ಸಾಹಸ ಸನ್ನಿವೇಶಗಳಿರುವ ಈ ಚಿತ್ರವು ಆ್ಯಕ್ಷನ್ ಥ್ರಿಲ್ಲರ್ ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿದೆ. ‘ಡೇಂಜರ್ ಜೋನ್’, ‘ನಿಶ್ಯಬ್ದ 2’, ‘ಅನುಷ್ಕಾ’, ‘ತಾಜ್ ಮಹಲ್ 2’ ಚಿತ್ರಗಳನ್ನು ನಿರ್ದೇಶಿಸಿರುವ ದೇವರಾಜ್ ಕುಮಾರ್ ಅವರ ಐದನೇ ಸಿನಿಮಾವಿದು.

ಸಿನಿಮಾದಲ್ಲಿ ನಾಯಕಿಯರಾಗಿ ಅಮೃತ ಹಾಗೂ ಸಂಹಿತ ವಿನ್ಯ ನಟಿಸಿದ್ದು, ರಘು, ಸೂರಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸತೀಶ್ ಸ್ಟೀವನ್ ಸಂಗೀತ ನಿರ್ದೇಶನ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ, ಚಂದ್ರು ಬಂಡೆ ಸಾಹಸ ನಿರ್ದೇಶನ ಚಿತ್ರಕ್ಕಿದೆ.

‘ಶರಾವತಿ ಸಾಂಗತ್ಯ’ ಪ್ರದರ್ಶನ



ಶರಾವತಿ ನದಿಯನ್ನು ಉಳಿಸುವ ನಿಟ್ಟಿನಲ್ಲಿ ಜಾಗೃತಿಗಾಗಿ ನಿರ್ಮಾಣವಾ-ಗಿರುವ ‘ಶರಾವತಿ ಸಾಂಗತ್ಯ’ ಎಂಬ ಕಿರುಚಿತ್ರ ದೆಹಲಿಯ ರಾಷ್ಟ್ರೀಯಮಟ್ಟದ ನದಿ ಉತ್ಸವದಲ್ಲಿ ಮೊದಲ ಪ್ರದರ್ಶನ ಕಂಡಿದೆ.

ಗಣೇಶ ಯಾಜಿ ಈ ಕಿರುಚಿತ್ರವನ್ನು ನಿರ್ದೇಶಿ-ಸಿದ್ದಾರೆ. ‘ಇದು ಶರಾವತಿ ನದಿಯ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸುತ್ತಾ ಅದರ ಉಳಿವಿನ ಬಗ್ಗೆ ಜಾಗೃತಿ ಸಾರಲು ನಿರ್ಮಿಸಿದ ಕಿರುಚಿತ್ರ’ ಎಂದಿದೆ ತಂಡ. ಯಾಜಿ ಮತ್ತು ತಂಡ ಮೈಸೂರು ಸಿನಿಮಾ ಸೊಸೈಟಿ ಸಹಯೋಗದಲ್ಲಿ ಇದನ್ನು ನಿರ್ಮಿಸಿದೆ. ಇದು ಕಾವ್ಯಾತ್ಮಕವಾಗಿ ಬಗೆಬಗೆಯ ರೂಪಕಗಳಿಂದ ವಿಭಿನ್ನ ನಿರೂಪಣಾ ಶೈಲಿಯನ್ನು ಒಳಗೊಂಡಿದೆ. 29 ನಿಮಿಷಗಳ ಈ ಕಿರುಚಿತ್ರವು ಶೀಘ್ರದಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಗೊಳ್ಳಲಿದೆ ಎಂದಿದೆ ತಂಡ.

‘ದಿ ರಾಜಾಸಾಬ್’ ಟ್ರೇಲರ್ ಬಿಡುಗಡೆ



ತೆಲುಗಿನ ಖ್ಯಾತ ನಟ ಪ್ರಭಾಸ್ ನಟನೆಯ ‘ದಿ ರಾಜಾಸಾಬ್’ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ಮಾರುತಿ ನಿರ್ದೇಶನದ ಈ ಪ್ಯಾನ್ ಇಂಡಿಯಾ ಸಿನಿಮಾವನ್ನು ಪೀಪಲ್ ಮೀಡಿಯಾ ಫ್ಯಾಕ್ಟರಿ ನಿರ್ಮಾಣ ಮಾಡಿದೆ.

ಹಾರರ್-ಫ್ಯಾಂಟಸಿ ಡ್ರಾಮಾ ಜಾನರ್‌ನ ಈ ಸಿನಿಮಾ ಕಳೆದ ಜೂನ್‌ನಲ್ಲಿ ಟೀಸರ್ ಮೂಲಕವೇ ಗಮನಸೆಳೆದಿತ್ತು. ಟ್ರೇಲರ್‌ನಲ್ಲಿ ಹಲವು ಶೇಡ್‌ಗಳಲ್ಲಿ ಪ್ರಭಾಸ್ ಕಾಣಿಸಿಕೊಂಡು ಅಚ್ಚರಿ ಮೂಡಿಸಿದ್ದಾರೆ. ಡಿಸೆಂಬರ್ 5 ರಂದು ವಿಶ್ವದಾದ್ಯಂತ ಸಿನಿಮಾ ತೆರೆಕಾಣಲಿದೆ. ಟಿ.ಜಿ.ವಿಶ್ವಪ್ರಸಾದ್ ಬಂಡವಾಳ ಹೂಡಿರುವ ಈ ಸಿನಿಮಾ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಸಿದ್ಧವಾಗಿದೆ. ತಮನ್ ಎಸ್. ಸಂಗೀತ ಮತ್ತು ಮೈನವಿರೇಳಿಸುವ ದೃಶ್ಯಗಳು ಈ ಸಿನಿಮಾದ ಹೈಲೈಟ್ಸ್. ಆ್ಯಕ್ಷನ್ ಸಿನಿಮಾಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಪ್ರಭಾಸ್ ಈ ಸಿನಿಮಾದಲ್ಲಿ ಭಿನ್ನ ಪಾತ್ರದಲ್ಲಿದ್ದಾರೆ. ಸಂಜಯ್ ದತ್, ಜರೀನಾ ವಹಾಬ್, ಬೊಮನ್ ಇರಾನಿ, ನಿಧಿ ಅಗರವಾಲ್, ಮಾಳವಿಕಾ ಮೋಹನನ್ ಮತ್ತು ರಿದ್ಧಿ ಕುಮಾರ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ಪ್ರಚಾರ ವಾಹನದಲ್ಲಿ ದೀರ್ಘಾವಧಿ ಇದ್ದ ವಿಜಯ್

ಕರೂರು ಕಾಲ್ತುಳಿತ ದುರಂತ: ಎಫ್‌ಐಆರ್‌ನಲ್ಲಿ ಉಲ್ಲೇಖ
• ಆಸ್ಪತ್ರೆಗಳಿಗೆ ಭೇಟಿ ನೀಡದಂತೆ ವಿಜಯ್‌ಗೆ ಪೊಲೀಸರ ಸೂಚನೆ

ಕರೂರು (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ರ‍್ಯಾಲಿ ನಿಗದಿಯಾಗಿದ್ದ ವೇಲುಸಾಮಿಪುರಂನಲ್ಲಿ ಪ್ರಚಾರ ವಾಹನದಲ್ಲಿ ನಿಗದಿತ ಸಮಯಕ್ಕಿಂತ ಹೆಚ್ಚು ಸಮಯ ಇದ್ದರು. ಇದರಿಂದಾಗಿ ಜನಜಂಗುಳಿ ಹೆಚ್ಚಾಯಿತು. ನೆಚ್ಚಿನ ನಟನನ್ನು ಕಣ್ತುಂಬಿಕೊಳ್ಳಲು ನಿಂತಿದ್ದ ಜನರು ನಿತ್ರಾಣಗೊಂಡರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ವಿಜಯ್ ವಿರುದ್ಧ ಪೊಲೀಸರು ಯಾವುದೇ ಪ್ರಕರಣ ದಾಖಲಿಸಿಲ್ಲ. ಆದರೆ ಟಿವಿಕೆ ಪಕ್ಷದ ಕರೂರು ಜಿಲ್ಲಾ ಕಾರ್ಯದರ್ಶಿ, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಉಪ ಪ್ರಧಾನ ಕಾರ್ಯದರ್ಶಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ಅರುಣಾ ಜಗದೀಶನ್ ನೇತೃತ್ವದಲ್ಲಿ ರಚನೆಯಾಗಿರುವ ಸಮಿತಿಯು ಘಟನೆ ಕುರಿತ ತನಿಖೆಯನ್ನು ಮುಂದುವರಿಸಿದೆ. ಗಾಯಾಳುಗಳೊಂದಿಗೆ ಅರುಣಾ ಅವರು ಸೋಮವಾರ ಮಾತುಕತೆ ನಡೆಸಿದರು.

ವಿಜಯ್ ಅವರನ್ನು ಹತ್ತಿರದಿಂದ ನೋಡಲು ಬೆಂಬಲಿಗರು ಏಕಕಾಲಕ್ಕೆ ನುಗ್ಗಿದ ಕಾರಣ ಕಾಲ್ತುಳಿತ ಸಂಭವಿಸಿತು. ಕಿಕ್ಕಿರಿದ ಸ್ಥಳದಲ್ಲಿ ಅಪಾರ ಜನರು ಸೇರಿದ್ದೂ ದುರಂತಕ್ಕೆ ಮತ್ತೊಂದು ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ರ‍್ಯಾಲಿಯಲ್ಲಿ ಒಂದಷ್ಟು ಜನ ತಮ್ಮ ನೆಚ್ಚಿನ ನಟನನ್ನು ನೋಡಲು ಸಮೀಪದ ಮರಗಳು ಮತ್ತು ಶೆಡ್ ಗಳನ್ನು ಏರಿ ಕುಳಿತಿದ್ದರು. ಕೆಲವರು ಆಯ ತಪ್ಪಿ ಅಲ್ಲಿಂದ ಕೆಳಗಿರುವ ಜನರ ಮೇಲೆ ಬಿದ್ದುದು ನೂಕುನುಗ್ಗಲು ಉಂಟಾಗಲು ಕಾರಣ. ಇನ್ನು ಕೆಲವರು ಜನ ಜಂಗುಳಿಯಲ್ಲಿ ಸಿಲುಕಿ ಉಸಿರಾಡಲೂ ಕಷ್ಟವಾಗಿ ಮೃತಪಟ್ಟಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಈ ಮಧ್ಯೆ ಕಾಲ್ತುಳಿತ ದುರಂತದ ಸಂತ್ರಸ್ತರನ್ನು ಭೇಟಿಯಾಗಲು ಆಸ್ಪತ್ರೆಗಳಿಗೆ ವಿಜಯ್ ಅವರು ಭೇಟಿ ನೀಡದಂತೆ ಪೊಲೀಸರು ಸೂಚಿಸಿದ್ದಾರೆ. ವಿಜಯ್ ಅವರ ಭೇಟಿ ವಿಚಾರ ತಿಳಿದು ಜನರು ಆಸ್ಪತ್ರೆ ಮುಂದೆ ಜಮಾಯಿಸಬಹುದು ಎಂಬ ಕಾರಣದಿಂದ ಈ ಸೂಚನೆ ನೀಡಲಾಗಿದೆ ಎಂದು ಟಿವಿಕೆ ಮೂಲಗಳು ತಿಳಿಸಿವೆ.

ಸ್ಟಾಲಿನ್, ವಿಜಯ್ ಜತೆ ರಾಹುಲ್ ಮಾತುಕತೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಕರೂರಿನಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದ ಬಗ್ಗೆ ವಿಚಾರಿಸಿದರು.

ನಟ ವಿಜಯ್ ಅವರಿಗೂ ಕರೆ ಮಾಡಿ, ಟಿವಿಕೆ ಪಕ್ಷದ ಬೆಂಬಲಿಗರ ಸಾವಿಗೆ ಸಂತಾಪ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

‘ಕರೆ ಮಾಡಿ ಕರೂರು ದುರಂತದ ಬಗ್ಗೆ ವಿಚಾರಿಸಿದ ರಾಹುಲ್ ಗಾಂಧಿ ಅವರಿಗೆ ಧನ್ಯವಾದ. ಕಾಲ್ತುಳಿತದಲ್ಲಿ ಗಾಯಗೊಂಡವರ ಚಿಕಿತ್ಸೆಗೆ ಕ್ರಮ ಕೈಗೊಳ್ಳುವಂತೆ ಅವರು ಮನವಿ ಮಾಡಿದರು’ ಎಂದು ಸ್ಟಾಲಿನ್ ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

> **ಕರೂರಿನಲ್ಲಿ ಸಂಭವಿಸಿದ ಕಾಲ್ತುಳಿತದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವದಂತಿ, ಸುಳ್ಳುಸುದ್ದಿ ಹಬ್ಬಿಸದಿರಿ. ಪ್ರತಿಯೊಬ್ಬರೂ ಜವಾಬ್ದಾರಿಯಿಂದ ವರ್ತಿಸಿ**
> **ಎಂ.ಕೆ.ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ



ಕರೂರು ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಸ್ಥರನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಭೇಟಿಯಾಗಿ ಸಾಂತ್ವನ ಹೇಳಿದರು —ಪಿಟಿಐ ಚಿತ್ರ

ಕರೂರು: ಮೃತರ ಸಂಖ್ಯೆ 41ಕ್ಕೆ ಏರಿಕೆ

ಕರೂರು (ಪಿಟಿಐ): ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ರ‍್ಯಾಲಿ ಸಂದರ್ಭದಲ್ಲಿ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟವರ ಸಂಖ್ಯೆ 41ಕ್ಕೆ ಏರಿಕೆಯಾಗಿದೆ. 60 ವರ್ಷದ ಗಾಯಾಳು ಮಹಿಳೆಯೊಬ್ಬರು ಇಲ್ಲಿನ ಆಸ್ಪತ್ರೆಯಲ್ಲಿ ಸೋಮವಾರ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಇದರೊಂದಿಗೆ ದುರಂತದಲ್ಲಿ ಮೃತಪಟ್ಟ ಮಹಿಳೆಯರ ಸಂಖ್ಯೆ 18ಕ್ಕೆ ಏರಿದೆ. ಜೊತೆಗೆ 10 ಮಕ್ಕಳು ಮತ್ತು 13 ಮಂದಿ ಪುರುಷರು ಮೃತಪಟ್ಟಿದ್ದಾರೆ.

ಆರೋಗ್ಯ ವಿಚಾರಿಸಿದ ಹಣಕಾಸು ಸಚಿವೆ

ಕರೂರು (ಪಿಟಿಐ): ಟಿವಿಕೆ ರ‍್ಯಾಲಿ ವೇಳೆ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಸ್ಥರ ನೋವಿಗೆ ಸಾಂತ್ವನ ಹೇಳಲು ಪದಗಳೇ ಇಲ್ಲದಂತಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದರು. ಇಂಥ ದುರಂತ ಮತ್ತೆ ಮರುಕಳಿಸ ಬಾರದು ಎಂದು ಹೇಳಿದರು.

ಕರೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಬಳಿಕ ವೈದ್ಯರೊಂದಿಗೆ ಸಮಾಲೋಚನೆ ನಡೆಸಿ ಗಾಯಾಳುಗಳಿಗೆ ನೀಡುತ್ತಿರುವ ಚಿಕಿತ್ಸೆ ಬಗ್ಗೆ ಮಾಹಿತಿ ಪಡೆದರು. ನಂತರ ದುರಂತದಲ್ಲಿ ಮೃತಪಟ್ಟವರ ಕುಟುಂಬಸ್ಥರನ್ನು ಭೇಟಿಯಾಗಿ ಸಾಂತ್ವನ ಹೇಳಿದರು.

ಬಿಜೆಪಿ ನಾಯಕ ಮಹದೇವನ್ ವಿರುದ್ಧ ಪ್ರಕರಣ ದಾಖಲು

ತ್ರಿಶ್ಶೂರ್(ಕೇರಳ) (ಪಿಟಿಐ): ಟಿ.ವಿ. ವಾಹಿನಿ ಚರ್ಚೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮೇಲೆ ಗುಂಡಿನ ದಾಳಿ ನಡೆಸಬೇಕು ಎಂದು ಹೇಳಿಕೆ ನೀಡಿದ್ದ ಕೇರಳದ ಬಿಜೆಪಿ ನಾಯಕ ಪ್ರಿಂಟು ಮಹದೇವನ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀಕುಮಾರ್ ಸಿ.ಸಿ ಅವರು ನೀಡಿದ ದೂರಿನ ಅನ್ವಯ ಇಲ್ಲಿನ ಪೇರಾಮಂಗಲಂ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್‌ನ ಸೆಕ್ಷನ್ 192 (ಗಲಭೆಗೆ ಪ್ರಚೋದನೆ), ಸೆಕ್ಷನ್ 353 (ಉದ್ದೇಶಪೂರ್ವಕವಾಗಿ ಶಾಂತಿಭಂಗ ಯತ್ನ) ಹಾಗೂ 351(2) (ಕ್ರಿಮಿನಲ್ ಬೆದರಿಕೆ)ಅಡಿ ಪ್ರಕರಣ ದಾಖಲಾಗಿದೆ.

ಮಹದೇವನ್ ಹೇಳಿಕೆ ಖಂಡಿಸಿ, ರಾಜ್ಯದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಸೆ.26ರಂದು ಮಲಯಾಳ ಸುದ್ದಿವಾಹಿನಿಯಲ್ಲಿ ಬಾಂಗ್ಲಾದೇಶ, ನೇಪಾಳದಲ್ಲಿ ನಡೆದ ಪ್ರತಿಭಟನೆ ಕುರಿತು ಚರ್ಚೆಯಲ್ಲಿ ಮಾತನಾಡಿದ್ದ ಮಹದೇವನ್, ‘ಭಾರತದಲ್ಲಿ ಇಂತಹ ಪ್ರತಿಭಟನೆ ನಡೆಯಲು ಸಾಧ್ಯವಿಲ್ಲ. ಜನರು ಪ್ರಧಾನಿ ನರೇಂದ್ರ ಮೋದಿ ಜೊತೆಗೆ ಗಟ್ಟಿಯಾಗಿ ನಿಂತಿದ್ದಾರೆ. ಒಂದೊಮ್ಮೆ ರಾಹುಲ್ ಗಾಂಧಿ ಇಂತಹ ಪ್ರತಿಭಟನೆ ನಿರೀಕ್ಷಿಸಿದ್ದರೆ, ಗುಂಡುಗಳು ಅವರ ಎದೆಯನ್ನು ಭೇದಿಸುತ್ತವೆ’ ಎಂದು ಹೇಳಿಕೆ ನೀಡಿದ್ದರು.

‘ರಾಹುಲ್ ಮುಗಿಸಲು ಸಂಚು’

ನವದೆಹಲಿ (ಪಿಟಿಐ): ‘ಸೈದ್ಧಾಂತಿಕ ಹೋರಾಟದಲ್ಲಿ ಸೋತವರು ರಾಹುಲ್ ಗಾಂಧಿ ಅವರನ್ನು ಮೌನವಾಗಿಸಲು ಸಂಚು ರೂಪಿಸಿದ್ದಾರೆ’ ಎಂದು ಕಾಂಗ್ರೆಸ್‌ನ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಬಿಜೆಪಿ–ಆರ್‌ಎಸ್‌ಎಸ್ ವಿರುದ್ಧ ಕಿಡಿಕಾರಿದ್ದಾರೆ.

‘ರಾಹುಲ್ ಗಾಂಧಿ ಎದೆಗೆ ಗುಂಡು ಹೊಡೆಯುವುದಾಗಿ ತಿಳಿಸಿದ ಬಿಜೆಪಿ ನಾಯಕನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ’ ಎಂದು ತಿಳಿಸಿದ್ದಾರೆ.

‘ರಾಹುಲ್ ಸುರಕ್ಷತೆ ಕುರಿತಂತೆ ಸಿಆರ್‌ಪಿಎಫ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದ ಪತ್ರವನ್ನು ಸೋರಿಕೆ ಮಾಡಲಾಗಿತ್ತು. ಭದ್ರತೆ ವಿಚಾರವನ್ನು ಯಾವ ಕಾರಣಕ್ಕೆ ರಾಜಕೀಯ ಮಾಡಬೇಕು, ಆ ರೀತಿಯ ವಾತಾವರಣ ಸೃಷ್ಟಿಸಲಾಗುತ್ತಿದೆ’ ಎಂದು ದೂರಿದ್ದಾರೆ.

ಲೈಂಗಿಕ ಕಿರುಕುಳ: ಘಟನೆಯ ಮರುಸೃಷ್ಟಿ



ಚೈತನ್ಯಾನಂದ ಸರಸ್ವತಿ

ನವದೆಹಲಿ (ಪಿಟಿಐ): ಇಲ್ಲಿನ ಶ್ರೀ ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್‌ಮೆಂಟ್‌ನ 17 ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ, ಸ್ವಯಂಘೋಷಿತ ದೇವಮಾನವ ಚೈತನ್ಯಾನಂದ ಸರಸ್ವತಿ (62) ಅವರನ್ನು ಕ್ಯಾಂಪಸ್‌ಗೆ ಸೋಮವಾರ ಕರೆದೊಯ್ದು ಘಟನೆಯ ಮರುಸೃಷ್ಟಿ ಮಾಡಲಾಯಿತು.

‘ಸರಸ್ವತಿ ಅವರು ಈ ಹಿಂದೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಈ ಸಂಸ್ಥೆಯ ಕಚೇರಿಗೆ ಕರೆದೊಯ್ದು ಕ್ಯಾಂಪಸ್ ಮತ್ತು ಹಾಸ್ಟೆಲ್‌ನಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ಬಗ್ಗೆ ಮಾಹಿತಿ ಪಡೆಯಲಾಯಿತು. ಹಾಸ್ಟೆಲ್‌ನ ಸ್ನಾನಗೃಹಗಳ ಹೊರಗೆ ಸಿ.ಸಿ. ಟಿ.ವಿ ಕ್ಯಾಮೆರಾಗಳು ಇದ್ದವು. ಅದರ ದೃಶ್ಯಾವಳಿಗಳು ಅವರಿಂದ ವಶಪಡಿಸಿಕೊಂಡ ಮೊಬೈಲ್ ಫೋನ್‌ಗಳ ಪೈಕಿ ಒಂದರಲ್ಲಿ ಲಭ್ಯವಾಗಿವೆ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಮೂವರು ಮಹಿಳಾ ಸಹಾಯಕಿಯರನ್ನು ವಿಚಾರಣೆ ನಡೆಸುವ ಸಾಧ್ಯತೆ ಇದೆ. ಇವರು ವಿದ್ಯಾರ್ಥಿನಿಯರನ್ನು ಬೆದರಿಸಿದ್ದರು. ಅಲ್ಲದೆ, ಸರಸ್ವತಿ ಅವರು ಕಳುಹಿಸಿದ್ದ ಅಶ್ಲೀಲ ಸಂದೇಶಗಳನ್ನು ಅಳಿಸಿಹಾಕುವಂತೆ ವಿದ್ಯಾರ್ಥಿನಿಯರ ಮೇಲೆ ಒತ್ತಡ ಹೇರಿದ್ದರು ಎಂದು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಆರ್‌ಎಸ್‌ಎಸ್ ಅಂಚೆ ಚೀಟಿ ನಾಳೆ ಬಿಡುಗಡೆ



ಮೋದಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಶತಮಾನೋತ್ಸವ ಸಂಭ್ರಮದ ಸ್ಮರಣಾರ್ಥ ಪ್ರಧಾನಿ ನರೇಂದ್ರ ಮೋದಿ ಅವರು ಅಂಚೆ ಚೀಟಿ, ನಾಣ್ಯಗಳನ್ನು ಬಿಡುಗಡೆ ಮಾಡಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಉಪಸ್ಥಿತಿಯಲ್ಲಿ ಬುಧವಾರ (ಅ.1) ಅಂಚೆ ಚೀಟಿ ಮತ್ತು ನಾಣ್ಯ ಬಿಡುಗಡೆ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

1925 ವಿಜಯದಶಮಿಯಂದು ಆರ್‌ಎಸ್‌ಎಸ್ ಸ್ಥಾಪನೆಯಾಗಿದ್ದು, ಈ ವಿಜಯ ದಶಮಿಗೆ 100 ವರ್ಷ ಪೂರೈಸಲಿದೆ.

ಇತ್ತೀಚೆಗೆ ನಡೆದ ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಆರ್‌ಎಸ್‌ಎಸ್ ಸಂಘಟನೆಯ ಸ್ವಯಂಸೇವೆ, ಶಿಸ್ತು ಮತ್ತು ದೇಶ ಮೊದಲು ಎಂಬ ತತ್ವವನ್ನು ಹಾಡಿ ಹೊಗಳಿದ್ದರು.

ಲಡಾಖ್ ಗುಂಡಿನ ದಾಳಿಯಲ್ಲಿ ಯೋಧನ ಸಾವು: ಕಾಂಗ್ರೆಸ್

ನವದೆಹಲಿ (ಪಿಟಿಐ): ಲಡಾಖ್‌ನಲ್ಲಿ ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಿಂದಾಗಿ ಮೃತಪಟ್ಟವರಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ಯೋಧ, ಮಾಜಿ ಸೈನಿಕ ತ್ಸೆವಾಂಗ್ ಥಾರ್ಚಿನ್ ಕೂಡ ಸೇರಿದ್ದಾರೆ ಎಂದು ಕಾಂಗ್ರೆಸ್ ಸೋಮವಾರ ಹೇಳಿದೆ.

ಮೃತ ಯೋಧ ಥಾರ್ಚಿನ್ ಅವರು ಸಿಯಾಚಿನ್ ಯುದ್ಧಭೂಮಿಯಲ್ಲಿ ಸೇವೆ ಸಲ್ಲಿಸಿದ್ದು, 1999ರ ಕಾರ್ಗಿಲ್ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ್ದರು ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಹೇಳಿದ್ದಾರೆ. ಅಲ್ಲದೆ, ಅವರ ತಂದೆ ಕೂಡ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದರು ಎಂದು ಅವರು ತಿಳಿಸಿದ್ದಾರೆ.

‘ಲಡಾಖ್‌ಗೆ 6ನೇ ಪರಿಚ್ಛೇದದಡಿ ಸ್ಥಾನಮಾನಕ್ಕಾಗಿ ಆಗ್ರಹಿಸಿ ಥಾರ್ಚಿನ್ ಅವರು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದರು. ಐದು ದಿನಗಳ ಹಿಂದೆ ನಡೆದ ಗುಂಡಿನ ದಾಳಿಯಲ್ಲಿ ಮೃತಪಟ್ಟ ಮೂವರಲ್ಲಿ ಅವರು ಕೂಡ ಒಬ್ಬರು ಎಂಬುವುದು ದುಃಖದ ವಿಚಾರವಾಗಿದೆ’ ಎಂದು ರಮೇಶ್ ಹೇಳಿದ್ದಾರೆ.

ಲಡಾಖ್‌ಗೆ 6ನೇ ಪರಿಚ್ಛೇದದ ಮತ್ತು ರಾಜ್ಯದ ಸ್ಥಾನಮಾನ ನೀಡುವಂತೆ ಒತ್ತಾಯಿಸಿ ನಡೆಸಲಾದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಈ ವೇಳೆ 80 ಪೊಲೀಸರು ಸೇರಿದಂತೆ 150ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಹಿಂಸಾಚಾಕ್ಕೆ ಸಂಬಂಧಿಸಿ ಇಬ್ಬರು ಕೌನ್ಸಿಲರ್‌ಗಳು ಸೇರಿದಂತೆ ಸುಮಾರು 60 ಜನರನ್ನು ಪೊಲೀಸರು ಈವರೆಗೆ ವಶಕ್ಕೆ ಪಡೆದಿದ್ದಾರೆ. ಜೊತೆಗೆ ಪರಿಸರ ಹೋರಾಟಗಾರ ಸೊನಮ್ ವಾಂಗ್ಚುಕ್ ಅವರನ್ನು ಕೂಡ ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿಯಲ್ಲಿ ಬಂಧಿಸಲಾಗಿದೆ.

ಹಿಂಸಾಚಾರ ಪೀಡಿತ ಲೇಹ್‌ನಲ್ಲಿ ವಿಧಿಸಲಾಗಿದ್ದ ಕರ್ಫ್ಯೂ 6ನೇ ದಿನವೂ ಮುಂದುವರೆದಿದೆ.



ಲಡಾಖ್‌ನ ಲೇಹ್ ನಗರದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು

ಕತಾರ್ ಕ್ಷಮೆಯಾಚಿಸಿದ ನೆತನ್ಯಾಹು

ವಾಷಿಂಗ್ಟನ್ (ಎಪಿ): ಹಮಾಸ್ ನಾಯಕರನ್ನು ಗುರಿಯಾಗಿಸಿ ದೋಹಾದ ಮೇಲೆ ನಡೆಸಿದ ದಾಳಿಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸೋಮವಾರ ಕತಾರ್‌ನ ಕ್ಷಮೆಯಾಚಿಸಿದ್ದಾರೆ ಎಂದು ಅಮೆರಿಕ ತಿಳಿಸಿದೆ.

‘ನೆತನ್ಯಾಹು ಅವರು ಶ್ವೇತಭವನದಿಂದ ದೂರವಾಣಿ ಕರೆ ಮಾಡಿ ಕತಾರ್ ಪ್ರಧಾನಿ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಅಲ್ ಥಾನಿ ಅವರ ಕ್ಷಮೆಯಾಚಿಸಿದರು. ದಾಳಿಯಲ್ಲಿ ಕತಾರ್‌ನ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಕ್ಕೆ ತೀವ್ರ ವಿಷಾದ ವ್ಯಕ್ತಪಡಿಸಿದರು. ಭವಿಷ್ಯದಲ್ಲಿ ಇಂತಹ ದಾಳಿ ನಡೆಸುವುದಿಲ್ಲ ಎಂದು ಮಾತುಕೊಟ್ಟರು’ ಎಂದು ಶ್ವೇತಭವನದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟ್ರಂಪ್ ಜತೆ ಮಾತುಕತೆ: ಗಾಜಾದಲ್ಲಿ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೆತನ್ಯಾಹು ಜತೆ ಸೋಮವಾರ ಶ್ವೇತಭವನದಲ್ಲಿ ಮಾತುಕತೆ ನಡೆಸಿದರು. ಯುದ್ಧ ಕೊನೆಗೊಳಿಸಲು ಇಸ್ರೇಲ್ ಮೇಲೆ ಒತ್ತಡ ಹೆಚ್ಚುತ್ತಿರುವ ಸಂದರ್ಭದಲ್ಲೇ ಇವರ ಭೇಟಿ ನಡೆದಿದೆ.

ಗಾಜಾದಲ್ಲಿ ಯುದ್ಧವನ್ನು ಕೊನೆಗೊಳಿಸುವ ‘ಸಂಪೂರ್ಣ ವಿಶ್ವಾಸವಿದೆ’ ಎಂದು ಟ್ರಂಪ್ ಅವರು ಮಾತುಕತೆಗೂ ಮುನ್ನ ಸುದ್ದಿಗಾರರಿಗೆ ತಿಳಿಸಿದರು.

ಗಾಂಧಿ ಮರಿಮೊಮ್ಮಗನಿಂದ ‘ಸಂವಿಧಾನ ಸತ್ಯಾಗ್ರಹ ಯಾತ್ರೆ’

ಪ್ರಜಾವಾಣಿ ವಾರ್ತೆ



ತುಷಾರ್ ಗಾಂಧಿ

ಮುಂಬೈ: ದ್ವೇಷ ರಾಜಕೀಯವನ್ನು ವಿರೋಧಿಸಿ ಮಹಾತ್ಮ ಗಾಂಧಿ ಅವರ ಮರಿಮೊಮ್ಮಗ ತುಷಾರ್ ಗಾಂಧಿ ನೇತೃತ್ವದ ಸಂವಿಧಾನ ಸತ್ಯಾಗ್ರಹ ಯಾತ್ರೆಯು ಸೋಮವಾರ ಆರಂಭವಾಯಿತು. ನಾಗಪುರದಿಂದ ವಾರ್ಧಾವರೆಗೆ ಸುಮಾರು 91 ಕಿ.ಮೀ. ನಡೆಲಿರುವ ಈ ಪಾದಯಾತ್ರೆಯಲ್ಲಿ ಕಾಂಗ್ರೆಸ್ ನೇತೃತ್ವದ ಮಹಾ ವಿಕಾಸ್ ಅಘಾಡಿಯ ಎನ್‌ಸಿಪಿ(ಶರದ್ ಪವಾರ್), ಶಿವಸೇನೆ (ಉದ್ಧವ್ ಠಾಕ್ರೆ), ಇತರ ಹಲವು ಸಂಘಟನೆಗಳು ಕೂಡ ಭಾಗವಹಿಸುತ್ತಿವೆ.

1956ರಲ್ಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದ ನಾಗ್ಪುರದ ದೀಕ್ಷಭೂಮಿಯಲ್ಲಿ ಈ ಪಾದಯಾತ್ರೆ ಆರಂಭವಾಯಿತು. ಮಹಾತ್ಮ ಗಾಂಧಿ ಅವರ ನಿವಾಸವಾದ ಸೇವಾಗ್ರಾಮ ಆಶ್ರಮದಲ್ಲಿ ಅಕ್ಟೋಬರ್ 2ರಂದು ಪಾದಯಾತ್ರೆ ಕೊನೆಗೊಳ್ಳಲಿದೆ.

‘ಸಂಘ ಪರಿವಾರ ಸಮಾಜದಲ್ಲಿ ಮತ್ತು ರಾಜಕೀಯದಲ್ಲಿ ಹರಡುವ ದ್ವೇಷದ ವಿರುದ್ಧ ನಾವು ಪ್ರೀತಿಯ ಸಂದೇಶವನ್ನು ಈ ಯಾತ್ರೆಯಲ್ಲಿ ನೀಡಲಿದ್ದೇವೆ’ ಎಂದು ತುಷಾರ್ ಹೇಳಿದರು.

ಗಾಯಕ ಜುಬಿನ್ ಗರ್ಗ್ ಸಾವು ಪ್ರಕರಣದ ತನಿಖೆ • ಅಸ್ಸಾಂ ಸರ್ಕಾರದಿಂದ ಗೃಹ ಸಚಿವಾಲಯಕ್ಕೆ ಮನವಿ ಸಲ್ಲಿಕೆ

‘ಸಿಂಗಪುರದ ಜೊತೆಗೆ ಎಂಎಲ್‌ಎಟಿ ಅನ್ವಯಿಸಿ’



ಜುಬಿನ್ ಗರ್ಗ್

ಗುವಾಹಟಿ (ಪಿಟಿಐ): ‘ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯಲ್ಲಿ ಸಿಂಗಪುರ ದೊಂದಿಗೆ ಪರಸ್ಪರ ಕಾನೂನು ನೆರವು ಒಪ್ಪಂದ (ಎಂಎಲ್‌ಎಟಿ) ಅನ್ವಯ ಮಾಡುವಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ಅಸ್ಸಾಂ ಸರ್ಕಾರವು ಅಧಿಕೃತ ಮನವಿ ಸಲ್ಲಿಸಿದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

‘ಎಂಎಲ್‌ಎಟಿ ಅನ್ವಯಿಸಿದರೆ, ಸಿಂಗಪುರದ ಅಧಿಕಾರಿಗಳು ಕೂಡ ತನಿಖೆಗೆ ಪೂರ್ಣ ಸಹಕಾರ ನೀಡಲಿದ್ದಾರೆ. ಪ್ರಕರಣದ ಸಂಪೂರ್ಣ ಮಾಹಿತಿ, ನೆರವು ನೀಡಲಿದ್ದು, ಆರೋಪಿಯನ್ನು ಸ್ವದೇಶಕ್ಕೆ ಕರೆತಂದು ನ್ಯಾಯ ಒದಗಿಸಲು ನೆರವಾಗಲಿದೆ’ ಎಂದು ಶರ್ಮಾ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಪ್ರಕರಣದ ತನಿಖೆ ನಡೆಸಲು ವಿಶೇಷ ಡಿಜಿಪಿ ಎಂ.ಪಿ. ಗುಪ್ತಾ ನೇತೃತ್ವದಲ್ಲಿ 10 ಮಂದಿ ಸದಸ್ಯರ ಎಸ್‌ಐಟಿಯನ್ನು ಅಸ್ಸಾಂ ಸರ್ಕಾರ ರಚಿಸಿತ್ತು.

ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ತಕ್ಷಣವೇ ಅಸ್ಸಾಂನ ಇಬ್ಬರು ಅಧಿಕಾರಿಗಳು ಸಿಂಗಪುರಕ್ಕೆ ಭೇಟಿ ನೀಡಲಿದ್ದಾರೆ. ಇಬ್ಬರು ಅಧಿಕಾರಿಗಳು ಈಗಾಗಲೇ ದೆಹಲಿಗೆ ತೆರಳಿದ್ದು, ನಂತರ ಸಿಂಗಪುರಕ್ಕೆ ತೆರಳಲಿದ್ದಾರೆ.

‘ಸಿಂಗಪುರದೊಂದಿಗೆ ಭಾರತವು ಈಗಾಗಲೇ ಎಂಎಲ್‌ಎಟಿ ಹೊಂದಿದೆ. ಕೇಂದ್ರ ಗೃಹ ಸಚಿವಾಲಯವು ಈ ಸಂಬಂಧ ಸಿಂಗಪುರಕ್ಕೆ ಅಗತ್ಯ ದಾಖಲೆಗಳನ್ನು ಕಳುಹಿಸಬೇಕು. ಆಗ ಮಾತ್ರ ಅಲ್ಲಿನ ಸರ್ಕಾರದ ಅಧಿಕಾರಿಗಳಿಂದ ತನಿಖೆಗೆ ಅಗತ್ಯ ನೆರವು ಪಡೆಯಲು ಸಾಧ್ಯ. ಈ ಪ್ರಕ್ರಿಯೆಯೂ ಈಗಾಗಲೇ ಆರಂಭಗೊಂಡಿದೆ’ ಎಂದು ಅಸ್ಸಾಂ ಪೊಲೀಸ್ ಮಹಾ ನಿರ್ದೇಶಕ ಹರ್ಮೀತ್ ಸಿಂಗ್ ತಿಳಿಸಿದ್ದಾರೆ.

ನ್ಯಾಯಾಲಯಕ್ಕೆ ಸಲ್ಲಿಕೆ: ‘ಜುಬಿನ್ ಪ್ರಕರಣದ ತನಿಖೆ ಅಂತಿಮ ಹಂತಕ್ಕೆ ತಲುಪಿದ್ದು, ವಿಸ್ತೃತವಾದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು’ ಎಂದು ಹರ್ಮೀತ್ ಸಿಂಗ್ ತಿಳಿಸಿದ್ದಾರೆ.

ಸಿಂಗಪುರದಲ್ಲಿ ಕಾರ್ಯಕ್ರಮ ಆಯೋಜಿಸಿದ್ದ ಮುಖ್ಯ ಆಯೋಜಕ ಶ್ಯಾಮ್‌ಕಾನು ಮಹಾಂತ, ಗರ್ಗ್ ಅವರ ವ್ಯವಸ್ಥಾಪಕ ಸಿದ್ಧಾರ್ಥ ಶರ್ಮಾ ಸೇರಿದಂತೆ 10 ಮಂದಿಗೆ ಎಸ್‌ಐಟಿ ಈಗಾಗಲೇ ನೋಟಿಸ್ ನೀಡಿದೆ.

‘ಅ.6ರ ಒಳಗಾಗಿ ಪೊಲೀಸರ ಮುಂದೆ ಹಾಜರಾಗಬೇಕು. ಇಲ್ಲದಿದ್ದರೆ ಪೊಲೀಸರು ಶೋಧ ಕಾರ್ಯ ನಡೆಸಲಿದ್ದಾರೆ’ ಎಂದು ಎಚ್ಚರಿಕೆ ನೀಡಿದ್ದರು.

‘ಕೊನೆ ಕ್ಷಣದಲ್ಲಿ ಏನಾಯಿತು?’



ಗರಿಮಾ ಸೈಕಿಯಾ ಗರ್ಗ್

ಗುವಾಹಟಿ (ಪಿಟಿಐ): ‘ಗಾಯಕ ಜುಬಿನ್ ಗರ್ಗ್ ಅವರ ಕೊನೆಯ ಕ್ಷಣಗಳಲ್ಲಿ ಏನಾಯಿತು ಎಂಬುದು ಇಡೀ ಕುಟುಂಬಕ್ಕೆ ತಿಳಿಯಬೇಕಿದೆ, ಹೀಗಾಗಿ ಸರಿಯಾದ ರೀತಿಯಲ್ಲಿ ತನಿಖೆ ನಡೆಯಬೇಕು’ ಎಂದು ಜುಬಿನ್ ಅವರ ಪತ್ನಿ ಗರಿಮಾ ಸೈಕಿಯಾ ಗರ್ಗ್ ಒತ್ತಾಯಿಸಿದ್ದಾರೆ.

ಗರ್ಗ್ ಅವರ 11ನೇ ದಿನದ ಆಚರಣೆ ಮುಗಿಸಿ ಮಾತನಾಡಿದ ಅವರು, ‘ಅವರಿಗೆ ಏನಾಯಿತು? ಅಷ್ಟೊಂದು ನಿರ್ಲಕ್ಷ್ಯ ವಹಿಸಿದ್ದನ್ನು ಹೇಗೆತಾನೆ ಒಪ್ಪಲು ಸಾಧ್ಯ’ ಎಂದು ಪ್ರಶ್ನಿಸಿದರು.

‘ಅವರ ಜೊತೆಗೆ ಕೊನೆಯ ಕ್ಷಣದಲ್ಲಿ ಯಾರು ಇದ್ದರು? ಅವರಿಗೆ ಈಜಲು ಬರದಿದ್ದರೂ ಏಕೆ ಅವರನ್ನು ಮೇಲಕ್ಕೆ ಏಕೆ ಎತ್ತಲಿಲ್ಲ. ನೀರು ಹಾಗೂ ಬೆಂಕಿ ಹತ್ತಿರ ಹೋದರೆ ಜುಬಿನ್ ಅವರು ಮೂರ್ಛೆ ಹೋಗುತ್ತಾರೆ ಎಂದು ವ್ಯವಸ್ಥಾಪಕ ಸಿದ್ಧಾರ್ಥ ಶರ್ಮಾ ಅವರಿಗೆ ಮುಂಚಿತವಾಗಿಯೇ ತಿಳಿದಿತ್ತು. ಅವರನ್ನು ಕರೆದುಕೊಂಡು ಹೋದವರು ಸರಿಯಾಗಿ ನೋಡಿಕೊಂಡಿದ್ದರೆ, ಈ ರೀತಿ ನಡೆಯುತ್ತಿರಲಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ನನಗೆ ನ್ಯಾಯ ಬೇಕಿದೆ. ಸರಿಯಾದ ತನಿಖೆಯ ಮೂಲಕವೇ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗಲಿದೆ. ತನಿಖಾ ಪ್ರಕ್ರಿಯೆಯ ಕುರಿತಂತೆ ನನಗೆ ಸಂಪೂರ್ಣ ವಿಶ್ವಾಸವಿದೆ’ ಎಂದು ಗರಿಮಾ ತಿಳಿಸಿದರು.